ಮಕ್ಕಳ ತರಬೇತಿ ಹೇಗೆ?

ಡಾ. ಶೈಖ್ ಮುಹಮ್ಮದ್ ಕಾರಕುನ್ನು

ಪರಮ ದಯಾಮಯನೂ ಕರುಣಾಳುವೂ ಆದ ಅಲ್ಲಾಹನ ನಾಮದಿಂದ

ಪ್ರಕಾಶಕರ ಮಾತು

ಮಕ್ಕಳು ಹೆತ್ತವರ ಕಣ್ಮಣಿಯಾಗಿರುತ್ತಾರೆ. ಮಕ್ಕಳನ್ನು ಯಾವ ರೀತಿ ಬೆಳೆಸಬೇಕು, ಯಾವ ರೀತಿಯ ತರಬೇತಿ ಅವರಿಗೆ ನೀಡಬೇಕು ಎಂದು ನಿರ್ಧರಿಸಬೇಕಾದವರು ಹೆತ್ತವರು. ಮಗುವಿನ ಪ್ರಥಮ ಪಾಠಶಾಲೆಯೇ ತಾಯಿಯ ಮಡಿಲು. ತಾಯಿ ಉತ್ತಮ ತರಬೇತಿ ನೀಡಿ ಬೆಳೆಸಿದರೆ ಮಕ್ಕಳು ಉತ್ತಮ ನಾಗರೀಕರಾಗಿ ಬೆಳೆಯಬಲ್ಲರು. ಅವರಿಂದ ಸಮಾಜಕ್ಕೂ ದೇಶಕ್ಕೂ ಒಳಿತನ್ನು ನಿರೀಕ್ಷಿಸಬಹುದು. ಅನ್ಯಥಾ ಕುಟುಂಬಕ್ಕೂ, ಸಮಾಜಕ್ಕೂ ದೇಶಕ್ಕೂ ಅಂತಹಾ ಮಕ್ಕಳು ಮಾರಕವಾಗಬಹುದು. ಮಕ್ಕಳು ಉತ್ತಮವಾಗಿ ಬೆಳೆಯಲು ತಂದೆ ತಾಯಿಗಳಿಗೆ ಅವರೊಂದಿಗೆ ಹಾರ್ದಿಕ ಸಂಬಂಧವಿರಬೇಕಾದುದು ಅಗತ್ಯ.

ಆದ್ದರಿಂದ ಮಕ್ಕಳ ತರಬೇತಿಯನ್ನು ಹೇಗೆ ಮಾಡಬೇಕೆಂದು ಕೇರಳದ ಖ್ಯಾತ ವಿದ್ವಾಂಸ, ಲೇಖಕ ಹಾಗೂ ವಾಗ್ಮಿ ಶೇಖ್ ಮುಹಮ್ಮದ್ ಕಾರಕುನ್ನುರವರು ವಿವಿಧ ಮಗ್ಗುಲುಗಳಿಂದ ಸೂಕ್ತ ಮಾರ್ಗದರ್ಶನ ಮಾಡಿರುವ ಕೃತಿಯ ಕನ್ನಡಾನುವಾದ ಈ ''ಮಕ್ಕಳೊಂದಿಗೆ ಮಕ್ಕಳಂತಾಗಿರಿ'' ಎಂಬ ಈ ಕೃತಿ. ಇದರ ಅಧ್ಯಯನ ಮಕ್ಕಳನ್ನು ಸರಿಯಾಗಿ ತರಬೇತಿಗೊಳಿಸಿ ಬೆಳೆಸುವ ಹೆತ್ತವರಿಗೆ ಅತ್ಯುತ್ತಮ ಮಾರ್ಗದರ್ಶಿಯಾಗಿದೆ. ವಿಶೇಷವಾಗಿ ತಾಯಂದಿರು ಇದರಿಂದ ಹೆಚ್ಚಿನ ಪ್ರಯೋಜನ ಪಡೆಯಬಲ್ಲರು.

ವಾಸ್ತವದಲ್ಲಿ ಎಳೆವೆಯಲ್ಲಿ ಮಕ್ಕಳಿಗೆ ಸಿಗುವ ತರಬೇತಿಯು ಜೀವಮಾನದಲ್ಲಿ ಅವರ ಮನಮಸ್ತಿಷ್ಕದಲ್ಲಿ ಅಚ್ಚಳಿಯದೇ ಉಳಿದಿರುತ್ತದೆ. ಆದ್ದರಿಂದ ಸರಿಯಾದ ತರಬೇತಿಯು ಅವರನ್ನು ಸರಿಯಾದ ದಿಕ್ಕಿನಲ್ಲಿ ಸಾಗಿಸಬಹುದು. ಈ ನಿಟ್ಟಿನಲ್ಲಿ ಈ ಕೃತಿಯು ಕನ್ನಡ ನಾಡಿನ ಸಕಲ ಬಾಂಧವರಿಂದ ಸೂಕ್ತ ಮಾರ್ಗದರ್ಶಿಯಾಗಲೆಂದು ಹಾರೈಸುತ್ತೇವೆ. ಪುಸ್ತಕವನ್ನು ಹಿರಾ ಮೆನ್ಸ್ ಕಾಲೇಜಿನ ಮಾಜಿ ಉಪನ್ಯಾಸಕಿ ಕನ್ನಡಕ್ಕೆ ಸುಂದರವಾಗಿ ಅನುವಾದಿಸಿದ್ದಾರೆ. ಸರ್ವಶಕ್ತನಾದ ಅಲ್ಲಾಹನು ಲೇಖಕರಿಗೂ ಅನುವಾದಕಿಗೂ ಸೂಕ್ತ ಪ್ರತಿಫಲವನ್ನು ನೀಡಿ ಅನುಗ್ರಹಿಸಲಿ. ಆಮೀನ್

- ಶಾಂತಿ ಪ್ರಕಾಶನ

ಅನುಕ್ರಮಣಿಕೆ

ನಿರೀಕ್ಷೆ ಮತ್ತು ಪ್ರಾರ್ಥನೆಯೊಂದಿಗೆ

ಮುಹಮ್ಮದ್ ಮತ್ತು ಮುಮ್ತಾಝ್ ಮದುವೆಯಾಗಿ ಹತ್ತು ವರ್ಷಗಳಾಯಿತು. ಇದುವರೆಗೆ ಒಂದು ಮಗು ಜನಿಸಲಿಲ್ಲ. ಅದೆಷ್ಟೋ ಆಸ್ಪತ್ರೆಗಳನ್ನು ಭೇಟಿ ನೀಡಿದರು. ಬಹಳಷ್ಟು ಚಿಕಿತ್ಸೆ ಮಾಡಿದರು. ಅಲೋಪತಿ, ಆಯುರ್ವೇದ, ಹೋಮಿಯೋಪತಿ, ಮನೆ ಮದ್ದುಗಳನ್ನು ಮಾಡಲಾಯಿತು. ತುಂಬಾ ಹಣ ಖರ್ಚು ಮಾಡಿದರು. ಒಂದು ಮಗುವಿಗಾಗಿ ಏನು ಮಾಡಲೂ ಸಿದ್ಧರಾಗಿದ್ದಾರೆ.

ಸ್ವಾಭಾವಿಕವಾಗಿ ಒಂದು ಮಗು ಬೇಕೆಂಬ ಹಂಬಲ ಇಲ್ಲದವರು ಬಹಳ ವಿರಳ. ಪುರುಷನಲ್ಲಿ ಪಿತೃತ್ವ ಭಾವನೆ, ಸ್ತ್ರೀಯರಲ್ಲಿ ತಾಯ್ತನದ ಬಯಕೆ ಜನ್ಮ ಸಿದ್ಧವಾಗಿದೆ. ಪ್ರವಾದಿಗಳೂ ಕೂಡ ಇದರಿಂದ ಮುಕ್ತರಲ್ಲ. ಇಬ್ರಾಹೀಮರಿಗೆ(ಅ) ಪ್ರಾಯಾಧಿಕ್ಯವಾದರೂ ಒಂದು ಮಗು ಜನಿಸಿರಲಿಲ್ಲ. ಇದು ಅವರನ್ನು ಬಹಳ ಖಿನ್ನಗೊಳಿಸಿತು. ಆದರೂ ಸಂತಾನ ಪ್ರಾಪ್ತಿಯ ಬಗ್ಗೆ ನಿರಾಶರಾಗಲಿಲ್ಲ. ಆದ್ದರಿಂದ ಅಲ್ಲಾಹನೊಂದಿಗೆ ದೈನ್ಯತೆಯೊಂದಿಗೆ ಪ್ರಾರ್ಥಿಸಿದರು. **''ಪ್ರಭೂ! ನನಗೆ ಸಜ್ಜನನಾದ (ಸಜ್ಜನರ ಸಾಲಿಗೆ ಸೇರುವ) ಒಬ್ಬ ಮಗನನ್ನು ದಯಪಾಲಿಸು. (ಈ ಪ್ರಾರ್ಥನೆಗೆ ಉತ್ತರವಾಗಿ) ನಾವು ಅವರಿಗೆ ಒಬ್ಬ ಸಹನಶೀಲ ಪುತ್ರನ ಸುವಾರ್ತೆ ನೀಡಿದೆವು.''**

(ಸೂರಃ ಅಸ್ಸಾಫ್ಫಾತ್: 100–101)

ವೃದ್ಧಾಪ್ಯದಲ್ಲಿ ಮಕ್ಕಳನ್ನು ದಯಪಾಲಿಸಿದ ಅಲ್ಲಾಹನನ್ನು ಇಬ್ರಾಹೀಮ್(ಅ) ಹೃದಯಂತರಾಳದಿಂದ ಸ್ತುತಿಸಿದರು. **''ಈ ವೃದ್ಧಾಪ್ಯದಲ್ಲಿ ನನಗೆ ಇಸ್ಮಾಈಲ್ ಮತ್ತು ಇಸ್ಹಾಕ್‌ರಂತಹ ಪುತ್ರರನ್ನು ದಯಪಾಲಿಸಿದ ಅಲ್ಲಾಹನಿಗೆ ಕೃತಜ್ಞತೆ. ನಿಶ್ಚಯವಾಗಿಯೂ ನನ್ನ ಪ್ರಭು ಪ್ರಾರ್ಥನೆಯನ್ನು ಆಲಿಸುತ್ತಾನೆ.''** (ಸೂರಃ ಇಬ್ರಾಹೀಮ್: 39)

ಪ್ರವಾದಿ ಝಕರಿಯ್ಯಾ(ಅ) ಕೂಡಾ ಮಕ್ಕಳಿಗಾಗಿ ಪ್ರಾರ್ಥಿಸಿದರು. ಅವರು ಅಲ್ಲಾಹನನ್ನು ಕೂಗಿ ಕರೆದು ಪ್ರಾರ್ಥಿಸಿದರು. **''ಇದನ್ನು ಕಂಡು ಝಕರಿಯ್ಯರವರು ತಮ್ಮ ಪ್ರಭುವನ್ನು ಪ್ರಾರ್ಥಿಸಿದರು. ಪ್ರಭು, ನಿನ್ನ ಮಹಿಮೆಯಿಂದ ನನಗೆ ಸುನೀತ ಸಂತತಿ ದಯಪಾಲಿಸು. ನೀನೇ ಪ್ರಾರ್ಥನೆಯನ್ನಾಲಿಸುವವನಾಗಿರುತ್ತಿ.''** (ಸೂರಃ ಆಲಿ ಇಮ್ರಾನ್: 38) ಈ ಘಟನೆಯನ್ನು ಕುರ್‌ಆನ್ ಈ ರೀತಿ ವಿವರಿಸುತ್ತದೆ. **''ಅವರು ತಮ್ಮ ಪ್ರಭುವನ್ನು ಮೆಲುದನಿಯಿಂದ ಕೂಗಿ ಪ್ರಾರ್ಥಿಸುತ್ತಿದ್ದಾಗ, ಅವರು ಹೀಗೆ ಬಿನ್ನವಿಸಿಕೊಂಡರು– ಓ ನನ್ನ ಪ್ರಭೂ, ನನ್ನ ಎಲುಬುಗಳು**

ಕೂಡಾ ದುರ್ಬಲಗೊಂಡಿವೆ. ತಲೆಯು ವೃದ್ಧಾಪ್ಯದಿಂದಾಗಿ ಉರಿದೆದ್ದಿದೆ. ಓ ನನ್ನ ಪ್ರಭೂ, ನಿನ್ನನ್ನು ಪ್ರಾರ್ಥಿಸಿ ನಾನೆಂದೂ ನಿರಾಶನಾಗಲಿಲ್ಲ, ನಿಶ್ಚಯವಾಗಿಯೂ ನನಗೆ ನನ್ನ ಅನಂತರ ನನ್ನ ಬಂಧು ಬಳಗದವರ ಕೇಡಿನ ಭಯವಿದೆ ಮತ್ತು ನನ್ನ ಪತ್ನಿ ಬಂಜೆಯಾಗಿರುತ್ತಾಳೆ. ನೀನು ನಿನ್ನ ವಿಶಿಷ್ಟ ಅನುಗ್ರಹದಿಂದ- ನನ್ನ ವಾರೀಸುದಾರನೂ ಯಅ್‌ಕೂಬರ ವಂಶದ ವಾರೀಸುದಾರನೂ ಆಗ ತಕ್ಕ ಓರ್ವ ಉತ್ತರಾಧಿಕಾರಿಯನ್ನು ನನಗೆ ದಯಪಾಲಿಸು ಮತ್ತು ಓ ನನ್ನ ಪ್ರಭೂ, ಅವನನ್ನು ಪ್ರೀತಿ ಪಾತ್ರನಾಗಿ ಮಾಡು.'' (ಉತ್ತರ ಹೀಗೆ ಬಂತು) ''ಓ ಝುಕರಿಯ್ಯಾ, ನಾವು ನಿಮಗೆ ಓರ್ವ ಬಾಲಕನ ಸುವಾರ್ತೆ ನೀಡುತ್ತೇವೆ. ಅವನ ಹೆಸರು ಯಹ್ಯಾ ಆಗಿರುವುದು. ನಾವು ಇದಕ್ಕೆ ಮುಂಚೆ ಈ ಹೆಸರಿರುವ ಯಾರನ್ನೂ ಸೃಷ್ಟಿಸಿಲ್ಲ.'' ಆಗ ''ಓ ನನ್ನ ಪ್ರಭೂ! ನನ್ನ ಪತ್ನಿಯು ಬಂಜೆಯಾಗಿದ್ದು ನಾನು ಅತಿ ವೃದ್ಧಾಪ್ಯದಿಂದ ಒಣಗಿ ಹೋಗಿರುವಾಗ ನನ್ನಲ್ಲಿ ಬಾಲಕನುಂಟಾಗುವುದು ಹೇಗೆ? ಎಂದು ಕೇಳಿದರು.'' ಆಗ (ಹೀಗೆ) ಉತ್ತರ ಸಿಕ್ಕಿತು- ''ಹಾಗೆಯೇ ಆಗುವುದು. ಇದು ನನಗೊಂದು ಅತಿ ಚಿಕ್ಕ ವಿಷಯವೆಂದು ನಿಮ್ಮ ಪ್ರಭು ಹೇಳುತ್ತಾನೆ. ಇದಕ್ಕೆ ಮುಂಚೆ ನೀನು ಏನೂ ಆಗಿಲ್ಲದಿದ್ದಾಗ ನಾನು ನಿನ್ನನ್ನು ಸೃಷ್ಟಿಸಿದ್ದೆ ತಾನೇ!'' (ಸೂರಃ ಮರ್ಯಮ್: 3-9) ಪ್ರವಾದಿ ಇಬ್ರಾಹೀಮ್‌ರ ಸಹಧರ್ಮಿಣಿ ಸಾರಾ ಒಂದು ಮಗು ಬೇಕೆಂದು ಅತಿಯಾಗಿ ಆಗ್ರಹಿಸಿದರು. ಆದ್ದರಿಂದಲೇ ಮಗನ ಬಗ್ಗೆ ಶುಭವಾರ್ತೆ ಲಭಿಸಿದಾಗ ಅವರು ಆನಂದ ತುಂದಿಲರಾಗಿ, ಸ್ಥಂಭೀಭೂತರಾದರು. ಸ್ವತಃ ಮುಖಕ್ಕೆ ಹೊಡೆಯುತ್ತಾ ಅವರು ಕೇಳಿದರು, ''ಇದನ್ನು ಕೇಳಿ ಅವರ ಪತ್ನಿಯು ಚೀರುತ್ತಾ ಮುಂದೆ ಬಂದಳು ಮತ್ತು ತನ್ನ ಮುಖಕ್ಕೆ ಬಡಿದುಕೊಳ್ಳುತ್ತಾ, 'ವೃದ್ಧೆ, ಬಂಜೆ! ಎನ್ನತೊಡಗಿದಳು. *ಆಗ ಅವರು ನಿನ್ನ ಪ್ರಭು ಹೀಗೆಯೇ ಹೇಳಿರುತ್ತಾನೆ. ಅವನು ಮಹಾ ಯುಕ್ತಿಪೂರ್ಣನೂ ಸರ್ವಜ್ಞನೂ ಆಗಿರುತ್ತಾನೆ ಎಂದರು.''

(ಸೂರಃ ಅದ್ದಾರಿಯಾತ್: 29-30)

ಮಕ್ಕಳು ಅನುಗ್ರಹವಾಗಿದ್ದಾರೆ. ಮನೆಗೆ ಅಲಂಕಾರ. ಅವರ ಸಾನಿಧ್ಯವನ್ನು ಬಯಸದವರಿರಲಾರರು. ಚಿಕ್ಕ ಮಕ್ಕಳ ಆಟಗಳನ್ನು ಕಾಣಲು, ಕೇಳಲು ಬಯಸದವರು ವಿರಳ. ಮಕ್ಕಳು ತಂದೆ-ತಾಯಂದಿರಿಗೆ ಮನಶ್ಶಾಂತಿ ಒದಗಿಸುತ್ತಾರೆ. ಅವರ ಮುಗುಳ್ನಗು ಕರುಳಿಗೆ ತಂಪೆರೆಯುತ್ತದೆ.

ಹೆಚ್ಚಿನವರು ತಮಗಿಂತ ತಮ್ಮ ಮಕ್ಕಳನ್ನು ಹೆಚ್ಚು ಪ್ರೀತಿಸುತ್ತಾರೆ. ಅವರು ಮಕ್ಕಳಿಗಾಗಿ ಎಂತಹ ಕಷ್ಟವನ್ನೂ ಸಹಿಸುತ್ತಾರೆ. ತ್ಯಾಗಗಳನ್ನೂ ಅರ್ಪಿಸುತ್ತಾರೆ. ಅನ್ನಾಹಾರಗಳನ್ನು ತೊರೆಯುತ್ತಾರೆ. ಕಠಿಣವಾಗಿ ದುಡಿಯುತ್ತಾರೆ.

ತಾವು ಗಳಿಸಿದ ವಿದ್ಯಾಭ್ಯಾಸಕ್ಕಿಂತಲೂ ಉನ್ನತವಾದ ಶಿಕ್ಷಣವನ್ನು ಅವರಿಗೆ ನೀಡುತ್ತಾರೆ. ತಾವು ತಿನ್ನುವುದಕ್ಕಿಂತಲೂ ಉತ್ತಮವಾದುದನ್ನು ಮಕ್ಕಳಿಗಾಗಿ ತೆಗೆದಿಡುತ್ತಾರೆ. ತಾವು ಧರಿಸುವ ವಸ್ತ್ರಕ್ಕಿಂತಲೂ ಉತ್ತಮವಾದ ಬಟ್ಟೆಯನ್ನು ಅವರಿಗೆ ತೊಡಿಸುತ್ತಾರೆ. ತಮಗಿಂತ ಉತ್ತಮವಾದ ಕೆಲಸ ಮಕ್ಕಳಿಗೆ ಸಿಗಬೇಕೆಂದು ಬಯಸುತ್ತಾರೆ. ಅದಕ್ಕಾಗಿ ಶ್ರಮಿಸುತ್ತಾರೆ. ಮಕ್ಕಳಿಗೆ

ಬಾಧಿಸುವ ರೋಗ, ಸಂಕಷ್ಟಗಳನ್ನು ತಮಗೆದುರಾಗುವ ಸಂಕಷ್ಟಕ್ಕಿಂತಲೂ ಕಠಿಣವೆಂದು ಭಾವಿಸುತ್ತಾರೆ. ಮಕ್ಕಳಿಗಾಗಿ ತಮ್ಮ ಸ್ವಂತ ಸಂಪತ್ತನ್ನು ತೆಗೆದಿಡುತ್ತಾರೆ. ಮಕ್ಕಳು ಬಾವಿಗೆ ಬಿದ್ದರೆ ಈಜು ಬರುತ್ತದೆಯೋ ಇಲ್ಲವೋ ಎಂದು ಆಲೋಚಿಸದೆ ಎಷ್ಟೋ ತಾಯಂದಿರು ಅದರಲ್ಲಿ ಹಾರಿ ಬಿಡುತ್ತಾರೆ.ಮಗುವಿನ ಎದುರು ವಿಷ ಸರ್ಪ ಹೆಡೆಬಿಚ್ಚಿ ನಿಂತಿರುವಾಗ ಅದು ತನ್ನನ್ನು ಕಚ್ಚುತ್ತದೋ ಎಂದು ಕೂಡಾ ಚಿಂತಿಸದೆ ಮಗುವನ್ನು ಅಪ್ಪಿಹಿಡಿದು ರಕ್ಷಿಸಲು ಓಡಿ ಬರುತ್ತಾರೆ. ಸಂಕ್ಷಿಪ್ತವಾಗಿ, ಹೆಚ್ಚಿನ ತಂದೆ-ತಾಯಿಗಳು ತಮಗಿಂತಲೂ ಹೆಚ್ಚು ಮಕ್ಕಳಿಗೆ ಪ್ರಾಶಸ್ತ್ಯ ನೀಡುತ್ತಾರೆ. ಏಕೆಂದರೆ ಮಕ್ಕಳು ಅಲಂಕಾರವಾಗಿದ್ದಾರೆ. ಕಣ್ಣುಗಳಿಗೆ ತಂಪು, ಮನಸ್ಸಿಗೆ ಮುದ ನೀಡುತ್ತಾರೆ. ಹೃದಯವನ್ನು ಆಹ್ಲಾದಭರಿತಗೊಳಿಸುತ್ತಾರೆ. **''ಈ ಸೊತ್ತು ಮತ್ತು ಈ ಸಂತತಿಗಳು ಕೇವಲ ಲೌಕಿಕ ಜೀವನದ ಕ್ಷಣಿಕ ಸೊಬಗು ಮಾತ್ರ.''** (ಸೂರಃ ಅಲ್‌ಕಹ್ಫ್- 46)

ಇದೆಲ್ಲವೂ ಅಲ್ಲಾಹನು ದಯಪಾಲಿಸುವ ಅನುಗ್ರಹಗಳೆಂದು ಅವನೇ ಸ್ವತಃ ತಿಳಿಸುತ್ತಾನೆ. **''ನಿಮಗೆ ಸಂಪತ್ತು ಹಾಗೂ ಸಂತತಿಗಳಿಂದ ನೆರವಾದೆವು ಮತ್ತು ನಿಮ್ಮ ಸಂಖ್ಯೆಯನ್ನು ಮೊದಲಿಗಿಂತ ಹೆಚ್ಚಿಸಿದೆವು.''** (ಸೂರಃ ಬನೀ ಇಸ್ರಾಈಲ್-6) ಸಂತಾನಗಳು ದೇವನ ವರದಾನ ವಾಗಿದ್ದಾರೆ. ಅವರನ್ನು ನೀಡುವುದೂ, ನೀಡದಿರುವುದೂ ಅವನಾಗಿದ್ದಾನೆ. ಲಿಂಗ ನಿರ್ಣಯ ಮಾಡುವುದು ಅವನೇ. ಅಲ್ಲಾಹನು ತಿಳಿಸುತ್ತಾನೆ. **''ಅಲ್ಲಾಹನು ಭೂಮಿ-ಆಕಾಶಗಳ ಪ್ರಭುತ್ವದ ಒಡೆಯನು. ತಾನಿಚ್ಛಿಸಿದ್ದನ್ನು ಅವನು ಸೃಷ್ಟಿಸುತ್ತಾನೆ. ತಾನಿಚ್ಛಿಸಿದವರಿಗೆ ಹೆಣ್ಣು ಮಕ್ಕಳನ್ನು ಕೊಡುತ್ತಾನೆ. ತಾನಿಚ್ಛಿಸಿದವರಿಗೆ ಗಂಡು ಮಕ್ಕಳನ್ನು ಕೊಡುತ್ತಾನೆ. ತಾನಿಚ್ಛಿಸಿದವರಿಗೆ ಗಂಡು-ಹೆಣ್ಣುಗಳೆರಡನ್ನು ಸೇರಿಸಿ ಕೊಡುತ್ತಾನೆ. ತಾನಿಚ್ಛಿಸಿದವರನ್ನು ಬಂಜೆಯಾಗಿ ಮಾಡುತ್ತಾನೆ. ಅವನು ಸರ್ವಜ್ಞನೂ ಸರ್ವ ಸಮರ್ಥನೂ ಆಗಿರುತ್ತಾನೆ.''** (ಸೂರಃ ಅಶ್ಶೂರಾ: 49-50) ವಿವಾಹದ ಬಗ್ಗೆ ಪ್ರಸ್ತಾಪಗಳು ಆರಂಭವಾಗುವುದರೊಂದಿಗೆ ಮನದಲ್ಲಿ ಮಕ್ಕಳು, ಕುಟುಂಬದ ಬಗ್ಗೆ ಕನಸುಗಳು ರೂಪುಗೊಳ್ಳುತ್ತವೆ. ಸಂತಾನ ಪ್ರಾಪ್ತಿಯು ವಿವಾಹದ ಪ್ರಧಾನ ಧ್ಯೇಯಗಳಲ್ಲೊಂದಾಗಿದೆ ತಾನೆ. ಮಕ್ಕಳು ಮಾನಸಿಕವಾಗಿಯೂ, ದೈಹಿಕವಾಗಿಯೂ, ಆರೋಗ್ಯವಂತರಾಗಿರಲು ವಿವಾಹದ ಸಂದರ್ಭದಲ್ಲಿಯೇ ಆಲೋಚಿಸಬೇಕೆಂದು ಆದೇಶಿಸಲಾಗಿದೆ. ಆದ್ದರಿಂದ ಹತ್ತಿರದ ಸಂಬಂಧಿಕರೊಂದಿಗಿನ ವಿವಾಹ ಅಷ್ಟು ಸೂಕ್ತವಲ್ಲ ಎಂದು ಸಾಮಾನ್ಯವಾಗಿ ಭಾವಿಸಲಾಗುತ್ತದೆ.

ವಿವಾಹ ಪ್ರಸ್ತಾಪದೊಂದಿಗೆ ಸಜ್ಜನರಾದ ಮುಂಗಾಮಿಗಳ ಬಗ್ಗೆ ನಿರೀಕ್ಷೆಗಳು ಹುಟ್ಟುತ್ತವೆ. ಅದು ಪ್ರಾರ್ಥನೆಯ ರೂಪ ತಾಳುತ್ತದೆ. **''ನಮ್ಮ ಪ್ರಭೂ, ನಮ್ಮ ಪತ್ನಿಯರಿಂದಲೂ, ಮಕ್ಕಳಿಂದಲೂ ನಮ್ಮ ಕಣ್ಮನಗಳನ್ನು ತಣಿಸು ಮತ್ತು ನಮ್ಮನ್ನು ಧರ್ಮನಿಷ್ಠರ ನಾಯಕರಾಗಿ ಮಾಡು.''** (ಸೂರಃ ಅಲ್‌ಫುರ್ಕಾನ್- 74)

ಹೀಗೆ ಸಜ್ಜನ ಮಕ್ಕಳಿಗಾಗಿರುವ ನಿರೀಕ್ಷೆ ಮತ್ತು ಪ್ರಾರ್ಥನೆಗಳು ಸತ್ಯವಿಶ್ವಾಸಿಗಳ ನಿತ್ಯ ಜೀವನದ ಭಾಗವಾಗಿ ಬದಲಾಗುತ್ತದೆ. ವಿವಾಹಕ್ಕಿಂತ ಮುಂಚೆಯೇ ಇದು ಆರಂಭವಾಗುತ್ತದೆ.

ಮರಣದವರೆಗೂ ಅದು ಮುಂದುವರಿಯುತ್ತದೆ.

ಗರ್ಭಧಾರಣೆಯ ಮೂಲಕ ತಾಯಿ ಮಗುವನ್ನು ಪ್ರೀತಿಸಲು ಆರಂಭಿಸಬೇಕು. ಬದಲಾಗಿ ಅದನ್ನು ಭಾರವಾಗಿದೆ ಮತ್ತು ಶಾಪವೆಂದು ಭಾವಿಸಬಾರದು. ವಿವಾಹವಾದ ಕೂಡಲೇ ಗರ್ಭಧಾರಣೆಯಾದರೆ ಕೆಲವು ಮಹಿಳೆಯರು ಅದರಿಂದ ಅಸ್ವಸ್ಥರಾಗುತ್ತಾರೆ, ದುಃಖಿತರಾಗುತ್ತಾರೆ. ವಿದ್ಯಾರ್ಥಿನಿಯಾಗಿದ್ದರೆ ಕಲಿಕೆಗೆ ತಡೆಯಾಗಬಹುದೆಂಬ ಚಿಂತೆ. ಕೂಡಲೇ ಗರ್ಭಿಣಿಯಾದರೆ ಸ್ನೇಹಿತೆಯರು ಪರಿಹಾಸ್ಯ ಮಾಡುವರೆಂಬ ಆಶಂಕೆ ಇದಕ್ಕೆ ಕಾರಣವಾಗಿರಬಹುದು. ಕೆಲವೊಮ್ಮೆ ಮೊದಲ ಪ್ರಸವವಾದ ಕೂಡಲೇ ಎರಡನೇ ಮಗುವಿನ ಗರ್ಭಧರಿಸುವುದು ಅಸ್ವಸ್ಥತೆಗೆ, ಅನಿಷ್ಟಕ್ಕೆ ಕಾರಣವಾಗಲೂ ಬಹುದು. ಕೆಲವೊಮ್ಮೆ ಮಗುವಾಗುವುದು ಪತಿಗೆ ಇಷ್ಟವಿಲ್ಲವೆಂದಾಗಬಹುದು. ಏನಿದ್ದರೂ ತಾಯಿ ಗರ್ಭಸ್ಥ ಶಿಶುವನ್ನು ಪ್ರೀತಿಸುವ ಬದಲು ದ್ವೇಷಿಸುವುದಾದರೆ ಅದು ತನ್ನ ಮಗುವಿನೊಂದಿಗೆ ತೋರುವ ಕ್ರೌರ್ಯ, ದ್ರೋಹ ಮತ್ತು ಅಕ್ಷಮ್ಯ ಅನ್ಯಾಯವಾಗಿದೆ. ಏಕೆಂದರೆ ಮಾತೆಯ ಇಂತಹ ಮಾನಸಿಕ ಸ್ಥಿತಿಯು ಮಗುವಿನ ಮಾನಸಿಕ ಸ್ಥಿತಿಯನ್ನು ಬಾಧಿಸುವ ಸಾಧ್ಯತೆಗಳಿವೆ. ಮಗುವಿನ ಸ್ವಭಾವ ವೈಕಲ್ಯಕ್ಕೂ, ಅಸಭ್ಯ ವರ್ತನೆಗಳಿಗೂ ಅದು ಕಾರಣವಾಗಬಹುದು. ಅದೇ ವೇಳೆ ತಾಯಿಯು ಸಂತೃಪ್ತಳೂ, ಪ್ರೀತಿಸುವವಳೂ ಆಗಿದ್ದರೆ ಮಗುವೂ ಮಾನಸಿಕವಾಗಿಯೂ, ದೈಹಿಕವಾಗಿಯೂ ಆರೋಗ್ಯವಂತವಾಗಿರಲು ಸಹಾಯಕವಾಗಬಹುದು. ಮಕ್ಕಳು ಉತ್ತಮವಾಗಿ ಬೆಳೆಯಲು ತಂದೆ-ತಾಯಿಗಳಿಗೆ ಮಕ್ಕಳೊಂದಿಗೆ ಅಬೇಧ್ಯವಾದ ಹಾರ್ದಿಕ ಸಂಬಂಧ ಇರಬೇಕಾದದು ಅತ್ಯಗತ್ಯವಾಗಿದೆ. ಗರ್ಭಧಾರಣೆಯನ್ನು ದ್ವೇಷಿಸುವುದರಿಂದ, ಇಷ್ಟವಿಲ್ಲದೆ ಗರ್ಭಧರಿಸು ವುದರಿಂದ ಸುಖ ಪ್ರಸವಕ್ಕೆ ಅಡ್ಡಿಯಾಗುತ್ತದೆಂದು ಭಾವಿಸಲಾಗುತ್ತದೆ. ಮಾತ್ರವಲ್ಲದೆ, ಇಂತಹ ಸ್ಥಿತಿಯು ಉತ್ತಮ ಮಾತೃ-ಶಿಶು ಸಂಬಂಧಕ್ಕೆ ಪ್ರತಿಕೂಲ ಪರಿಣಾಮ ಬೀರುವ ಹೆಚ್ಚಿನ ಸಾಧ್ಯತೆಗಳಿವೆ.

❖❖❖❖

ಹೆಣ್ಣು ಶಿಶು ಅನುಗ್ರಹವಾಗಿದೆ

ಒಬ್ಬ ವ್ಯಕ್ತಿ ಪ್ರವಾದಿಯವರ(ಸ) ಸನ್ನಿಧಿಗೆ ಬಂದು ತನ್ನ ಗತಕಾಲ ಅನುಭವವನ್ನು ಈ ರೀತಿ ವಿವರಿಸುತ್ತಾರೆ: ನನಗೆ ಅತ್ಯಂತ ಪ್ರೀತಿಯ ಒಬ್ಬ ಮಗಳಿದ್ದಳು. ಆಕೆಯನ್ನು ನಾನು ಕರೆದರೆ ನನ್ನ ಬಳಿಗೆ ಓಡೋಡಿ ಬರುತ್ತಿದ್ದಳು. ಒಮ್ಮೆ ನಾನವಳನ್ನು ಕರೆದುಕೊಂಡು ಹೋದೆ. ದಾರಿ ಮಧ್ಯೆ ಒಂದು ಬಾವಿ ಕಂಡಿತು. ನಾನವಳನ್ನು ಬಾವಿಗೆ ದೂಡಿ ಹಾಕಿ ಬಿಟ್ಟೆ. ಅವಳಿಂದ ನಾನು ಕೇಳಿದ ಕೊನೆಯ ಮಾತು 'ಅಪ್ಪಾ, ಅಪ್ಪಾ' ಎಂದಾಗಿತ್ತು. ಇದನ್ನು ಕೇಳಿದ ಪ್ರವಾದಿಯವರು(ಸ) ಅತ್ತು ಬಿಟ್ಟರು. ಅವರ ಕಣ್ಣುಗಳಿಂದ ಅಶ್ರುಧಾರೆ ಹರಿಯಿತು. ಸಭೆಯಲ್ಲಿದ್ದ ಒಬ್ಬರು ಹೇಳಿದರು, ''ಓ ಮನುಷ್ಯಾ, ನೀವು ಪ್ರವಾದಿಯವರನ್ನು(ಸ) ನೋಯಿಸಿ ಬಿಟ್ಟಿರಲ್ಲಾ?'' ಪ್ರವಾದಿಯವರು(ಸ) ''ಅವರನ್ನು ತಡೆಯಬೇಡಿರಿ. ಈ ದುಃಖ ಭರಿತ ಘಟನೆಯನ್ನು ನಾನು ಅವರಿಂದ ಕೇಳ ಬಯಸುತ್ತೇನೆ.'' ತರುವಾಯ ಘಟನೆಯನ್ನು ಪುನಃ ವಿವರಿಸಲು ಪ್ರವಾದಿ(ಸ) ಹೇಳಿದರು. ಆ ವ್ಯಕ್ತಿ ಪುನಃ ವಿವರಿಸಿದರು. ಪ್ರವಾದಿ(ಸ) ಬಹಳಷ್ಟು ಅತ್ತರು, ಕಣ್ಣೀರಿನಿಂದ ಅವರ ಗಡ್ಡವು ತೋಯ್ದು ಹೋಯಿತು. ತರುವಾಯ ಪ್ರವಾದಿ(ಸ) ಹೇಳಿದರು: ಇಸ್ಲಾಮಿಗಿಂತ ಮುಂಚೆ ಮಾಡಿದ ಗತ ಪಾಪಗಳೆಲ್ಲವೂ ಕ್ಷಮಿಸಲ್ಪಟ್ಟಿವೆ.

(ಸುನನು ದಾರಿಮೀ)

ಇಂದಿನ ಮಾನವರಂತೆ 6ನೇ ಶತಮಾನದ ಅರಬರಲ್ಲಿ ಅನೇಕರು ಹೆಣ್ಣು ಮಗು ಜನಿಸುವುದನ್ನು ಶಾಪವೆಂದು ಪರಿಗಣಿಸಿದ್ದರು. ಅಂದು ಅದನ್ನು ಅಪಮಾನವೆಂದು ಭಾವಿಸುವಂತಹ ಗೋತ್ರಗಳು ಇದ್ದವು. ಆದರೆ, ಇಂದಿನಂತೆ ಗರ್ಭಸ್ಥ ಶಿಶುವಿನ ಲಿಂಗ ನಿರ್ಣಯ ಮಾಡುವ ರೀತಿ ಅಂದು ಇರಲಿಲ್ಲ, ಅಂದು ಗರ್ಭಪಾತ ನಡೆಸುವ ವೈದ್ಯರೂ ಇರಲಿಲ್ಲ, ಆದ್ದರಿಂದ ಪ್ರಸವದ ನಂತರ ಮಗು ಹೆಣ್ಣಾಗಿದ್ದು ಮಾತೆಯು ಕೊಲ್ಲಲು ಅನುಮತಿಸದಿದ್ದರೆ ಅಲ್ಪಾವಧಿಗೆ ಜೀವಿಸಲು ಅನುಮತಿ ನೀಡುತ್ತಿದ್ದರು. ತರುವಾಯ ಅದನ್ನು ಕೊಂದು ಬಿಡುತ್ತಿದ್ದರು. ಅವರ ಈ ಕ್ರೂರ, ಹೀನಾಯ ಕೃತ್ಯವನ್ನು ಕುರ್‌ಆನ್ ಸ್ಪಷ್ಟವಾಗಿ ಉಲ್ಲೇಖಿಸುತ್ತದೆ: ''**ಇವರ ಪೈಕಿ ಯಾರಿಗಾದರೂ ಮಗಳು ಹುಟ್ಟಿದ ಸುವಾರ್ತೆ ಕೊಟ್ಟಾಗ ಅವನ ಮುಖ ಕಳೆಗುಂದಿ ಹೋಗುತ್ತದೆ ಮತ್ತು ಅವನು ಸಿಡಿಮಿಡಿಗೊಳ್ಳುತ್ತಾನೆ. ಈ ಅಶುಭ ವಾರ್ತೆಯ ಬಳಿಕ ಯಾರಿಗೂ ಮುಖ ತೋರಿಸಲಾಗದೆ ಜನರಿಂದ ತಲೆ ಮರೆಸಿಕೊಳ್ಳುತ್ತಾನೆ.**

ಈ ಅಪಮಾನದೊಂದಿಗೆ ಮಗುವನ್ನಿರಿಸಿಕೊಳ್ಳಲೇ ಅಥವಾ ಮಣ್ಣಿನಲ್ಲಿ ಹುಗಿದು ಬಿಡಲೇ ಎಂದು ಯೋಚಿಸುತ್ತಾನೆ. ಇವರು ಅಲ್ಲಾಹನ ಬಗ್ಗೆ ಎಂತಹ ಕೆಟ್ಟ ನಿರ್ಣಯ ಕೈಗೊಳ್ಳುತ್ತಾರೆಂದು ನೋಡಿರಿ.'' (ಸೂರಃ ಅನ್ನಹ್ಲ್: 58–59)

ಅರಬರು ಹಲವು ಕಾರಣಗಳಿಗಾಗಿ ಹೆಣ್ಮಕ್ಕಳನ್ನು ಕೊಲ್ಲುತ್ತಿದ್ದರು. ಅಂದಿನ ಸಾಮಾಜಿಕ ವ್ಯವಸ್ಥೆಯಲ್ಲಿ ಜೀವನಾಧಾರದಲ್ಲಿ ಪಾಲ್ಗೊಳ್ಳುವವರ ಸಂಖ್ಯೆಯನ್ನು ಕಡಿಮೆಗೊಳಿಸುವ ಮೂಲಕ ಆಹಾರ ಸಾಮಗ್ರಿಗಳ ಕೊರತೆಯನ್ನು ನೀಗಿಸಲು ಪ್ರೇರೇಪಿಸುವಂತಹ ದಾರಿದ್ರ್ಯವಿತ್ತು. ಗಂಡು ಮಕ್ಕಳಾದರೆ ಬೆಳೆದು ದೊಡ್ಡವರಾಗಿ ದುಡಿದು ಸಂಪಾದಿಸಿ ತರುವರು. ಹೆಣ್ಮಕ್ಕಳು ದೊಡ್ಡವರಾದರೆ ವಿವಾಹ ಮಾಡಿಕೊಡಬೇಕು. ಅಷ್ಟರವರೆಗೆ ಅವರನ್ನು ಸಾಕಿ ಬೆಳೆಸುವುದು ನಷ್ಟವೆಂದು ಪರಿಗಣಿಸಿದ್ದರು. ಇಂದಿನಂತೆ ಅಂದು ಕೂಡಾ ಮಾನವ ಸಂಬಂಧಗಳು ವ್ಯಾಪಾರೀಕರಣಗೊಂಡಿತ್ತು. ಲಾಭ, ನಷ್ಟ ಆದಾಯಗಳನ್ನು ನೋಡಿ ಎಲ್ಲವನ್ನೂ ತೀರ್ಮಾನಿಸು ತ್ತಿದ್ದರು. ಆದ್ದರಿಂದ ಖರ್ಚು ಮತ್ತು ನಷ್ಟ ಮಾತ್ರ ಇರುವ ಹೆಣ್ಮಕ್ಕಳು ಬೇಡವೆಂಬುದೇ ಅವರ ತೀರ್ಮಾನವಾಗಿತ್ತು. ಇದನ್ನು ಪವಿತ್ರ ಕುರ್‌ಆನ್ ಬಲವಾಗಿ ಖಂಡಿಸಿತು: ''ಮತ್ತು ನಿಮ್ಮ ಮಕ್ಕಳನ್ನು ದಾರಿದ್ರ್ಯದ ಭಯದಿಂದ ವಧಿಸಬೇಡಿರಿ. ನಾವು ನಿಮಗೂ ಜೀವನೋಪಾಧಿಯನ್ನು ನೀಡುತ್ತೇವೆ. ಅವರಿಗೂ ನೀಡುವೆವು.'' (ಸೂರಃ ಅನ್ ಆಮ್– 151)

''ನಿಮ್ಮ ಮಕ್ಕಳನ್ನು ಬಡತನದ ಭೀತಿಯಿಂದ ಕೊಲ್ಲಬೇಡಿರಿ. ನಾವು ಅವರಿಗೂ ಆಹಾರ ನೀಡುವೆವು, ನಿಮಗೂ ನೀಡುವೆವು. ವಾಸ್ತವದಲ್ಲಿ ಅವರ ವಧೆಯು ಒಂದು ಘೋರ ಅಪರಾಧವಾಗಿದೆ.'' (ಸೂರಃ ಬನೀ ಇಸ್ರಾಈಲ್– 31)

ನಿರಂತರ ಕೌಟುಂಬಿಕ ಕಲಹಗಳು, ಗೋತ್ರ ಸಂಘರ್ಷಗಳು ನಡೆಯುತ್ತಿದ್ದ ಆ ಕಾಲದಲ್ಲಿ ಹೆಣ್ಮಕ್ಕಳ ಸುರಕ್ಷತೆಯು ದೊಡ್ಡ ಸಮಸ್ಯೆಯಾಗಿತ್ತು. ಅದೇ ವೇಳೆ ಗಂಡು ಮಕ್ಕಳು ಆಹಾರ ಸಾಮಗ್ರಿಗಳ ಶೇಖರಣೆ, ಆಯುಧ ಸಜ್ಜೀಕರಣ ಕಾರ್ಯ, ಯುದ್ಧಗಳಲ್ಲಿ ಭಾಗವಹಿಸುತ್ತಿದ್ದರು. ಇದು ಕೂಡಾ ಹೆಣ್ಮಕ್ಕಳ ನಾಶಕ್ಕೆ ಕಾರಣವಾಗಿತ್ತು.

ಯುದ್ಧದ ಸಂದರ್ಭಗಳಲ್ಲಿ ಇಂದಿನಂತೆಯೇ ಅಂದು ಕೂಡಾ ಸ್ತ್ರೀಯರ ಮೇಲೆ ಅತ್ಯಾಚಾರ ನಡೆಸಲಾಗುತ್ತಿತ್ತು. ಮಾನಭಂಗ ಗೊಳಿಸಲಾಗುತ್ತಿತ್ತು. ಹಾಗೆಯೇ ಹೆಣ್ಮಕ್ಕಳನ್ನು ಅಪಹರಿಸಿ ಗುಲಾಮರನ್ನಾಗಿಸುತ್ತಿದ್ದರು. ಈ ಕಾರಣಗಳಿಂದ ಕುಟುಂಬದಲ್ಲಿ ಉಂಟಾಗುವ ಅಪಮಾನವನ್ನು ನಿರ್ಮೂಲನಗೊಳಿಸಲು ಅವರು ಹೆಣ್ಮಕ್ಕಳನ್ನು ಜೀವಿಸಲು ಬಿಡುತ್ತಿರಲಿಲ್ಲ.

ಆ ಕಾಲದಲ್ಲಿ ಈ ನೀಚ ಕೃತ್ಯವನ್ನು ತಡೆಯಲು ಪ್ರಯತ್ನಿಸಿದ ಸಜ್ಜನರೂ, ಮಾನವ ಪ್ರೇಮಿಗಳೂ ಇದ್ದರು. ಪ್ರಸಿದ್ಧ ಕವಿ ಫರಝ್‌ದಕ್‌ನ ಪಿತಾಮಹ ಸಅ್‌ಸಅ್ ಬಿನ್ ನಾಜಿಯತುಲ್ ಮುಜಾಹಿಶ್ ಹೇಳುತ್ತಾರೆ: ''ನಾನು ಪ್ರವಾದಿಯವರ(ಸ) ಸನ್ನಿಧಿಗೆ ಹೋದೆ. ಅವರು ನನಗೆ ಇಸ್ಲಾಮಿನ ಕುರಿತು ಹೇಳಿದರು. ನಾನು ಇಸ್ಲಾಮ್ ಸ್ವೀಕರಿಸಿದೆ. ಅವರು ನನಗೆ ಕುರ್‌ಆನ್ ಸೂಕ್ತಗಳನ್ನು ಕಲಿಸಿದರು. ಆಗ ನಾನು ಕೇಳಿದೆ: ಪ್ರವಾದಿವರ್ಯರೇ(ಸ),

ಇಸ್ಲಾಮ್ ಸ್ವೀಕರಿಸುವುದಕ್ಕಿಂತ ಮುಂಚೆ ಕೆಲವು ಸತ್ಕರ್ಮಗಳನ್ನು ಮಾಡಿದ್ದೆ, ಅದರ ಪ್ರತಿಫಲ ನನಗೆ ಸಿಗಬಹುದೇ? ಪ್ರವಾದಿ(ಸ) ನೀವೇನು ಮಾಡಿದ್ದೀರಿ? ಎಂದು ಕೇಳಿದರು. ನಾನು ಹೇಳಿದೆ, ಅಜ್ಞಾನ ಕಾಲದಲ್ಲಿ 360 ಹೆಣ್ಮಕ್ಕಳನ್ನು ಜೀವಂತ ಹೂಳುವುದರಿಂದ ರಕ್ಷಿಸಿರುವುದು ಅವುಗಳಲ್ಲೊಂದಾಗಿದೆ. ಪ್ರತಿಯೊಂದು ಹೆಣ್ಣುಮಗುವಿನ ಜೀವ ರಕ್ಷಿಸಲು ಎರಡು ಒಂಟೆಯನ್ನು ನಷ್ಟ ಪರಿಹಾರವಾಗಿ ನೀಡಿದ್ದೇನೆ. ನನಗೆ ಅದಕ್ಕೆ ಪ್ರತಿಫಲ ಸಿಗುವುದೇ? ಪ್ರವಾದಿಯವರು(ಸ) ಹೇಳಿದರು, ''ಇಸ್ಲಾಮ್ ಸ್ವೀಕರಿಸಲು ಸೌಭಾಗ್ಯ ಲಭಿಸಿತೆಂಬುದೇ ನಿಮಗೆ ಅದಕ್ಕಿರುವ ಪ್ರತಿಫಲ.''

ಹೆಣ್ಮಕ್ಕಳನ್ನು ಶಾಪ, ಅಪಮಾನವೆಂದು ಭಾವಿಸುವ ಸಮಾಜ ಇತಿಹಾಸದ ಎಲ್ಲ ಕಾಲಗಳಲ್ಲಿಯೂ ಇದ್ದಂತೆ ಇಂದಿಗೂ ಇವೆ. ನಮ್ಮ ದೇಶದ ಸ್ಥಿತಿಯೂ ಇದಕ್ಕಿಂತ ಭಿನ್ನವಲ್ಲ. ಪ್ರತಿ ವರ್ಷ ಲಕ್ಷಗಟ್ಟಲೆ ಹೆಣ್ಮಕ್ಕಳು ಗರ್ಭಾವಸ್ಥೆಯಲ್ಲಿಯೇ ಕ್ರೂರವಾಗಿ ಕೊಲ್ಲಲ್ಪಡುತ್ತಿದ್ದಾರೆ. ಗರ್ಭಸ್ಥ ಶಿಶುವಿನ ಲಿಂಗ ನಿರ್ಣಯವನ್ನು ಕಾನೂನು ಮೂಲಕ ನಿಷೇಧಿಸಲಾಗಿದ್ದರೂ ಅದು ನಿರಂತರವಾಗಿ ನಡೆಯುತ್ತಿದೆ. ಮಗು ಹೆಣ್ಣಾಗಿದ್ದರೆ ಗರ್ಭದಲ್ಲಿಯೇ ಅದನ್ನು ಕೊಂದು ಬಿಡಲಾಗುತ್ತದೆ. ಆದ್ದರಿಂದಲೇ ನಮ್ಮ ದೇಶದಲ್ಲಿ 1000 ಗಂಡು ಮಕ್ಕಳಿಗೆ 920ಕ್ಕಿಂತಲೂ ಕಡಿಮೆ ಹೆಣ್ಮಕ್ಕಳು ಇರುವುದು. ಇಂದು ಲೋಕದ ಅತಿದೊಡ್ಡ ಕೊಲೆ ನಡೆಯುವ ಸ್ಥಳ ಯುದ್ಧ ಭೂಮಿಗಳಲ್ಲ, ದೊಡ್ಡ ದೊಡ್ಡ ಆಸ್ಪತ್ರೆಗಳ ಓಪರೇಶನ್ ಥಿಯೇಟರ್‌ಗಳಾಗಿವೆ.

ಕುರ್‌ಆನ್ ಈ ಕ್ರೂರ ಕೃತ್ಯವನ್ನು ಅತ್ಯಂತ ಕಠಿಣವಾಗಿ ಖಂಡಿಸುತ್ತದೆ. ಈ ವಿಷಯದಲ್ಲಿ ದೇವ ಕೋಪವು ಅತೀ ಹೆಚ್ಚು ಪ್ರಕಟವಾದ ಸೂಕ್ತವು ಅವತೀರ್ಣವಾಯಿತು. ಮರಣಾನಂತರ ಪರಲೋಕದಲ್ಲಿ ಹೆಣ್ಮಕ್ಕಳನ್ನು ಕೊಂದ ಮಾತಾಪಿತರನ್ನು ವಿಚಾರಣೆ ನಡೆಸುವುದಿಲ್ಲ, ಬದಲಾಗಿ ಕೊಲ್ಲಲ್ಪಟ್ಟ ಹೆಣ್ಮಕ್ಕಳೊಂದಿಗೆ 'ಯಾವ ತಪ್ಪಿಗಾಗಿ ಮಾತಾಪಿತರು ಅವರನ್ನು ಕೊಂದರು' ಎಂದು ಕೇಳುವನು. ಆಗ ನಿರಪರಾಧಿಗಳಾದ ಮಕ್ಕಳು ತಮ್ಮೊಂದಿಗೆ ಮಾಡಿದ ಕ್ರೂರ ಕೃತ್ಯವನ್ನು ವಿವರಿಸುವರು. ಇದರ ಬಗ್ಗೆ ಕುರ್‌ಆನ್ ಹೇಳುತ್ತದೆ: ''ಜೀವಂತ ಹೂಳಲ್ಪಟ್ಟ ಹೆಣ್ಣು ಮಗುವಿನೊಡನೆ ಕೇಳಲಾಗುವಾಗ ಯಾವ ತಪ್ಪಿಗಾಗಿ ಅವಳನ್ನು ಕೊಲ್ಲಲಾಯಿತೆಂದು.'' (ಸೂರಃ ಅತ್ತಕ್‌ವೀರ್: 8-9) ಕುರ್‌ಆನ್ ಈ ಹೀನಾಯ ಕೃತ್ಯವನ್ನು ಕೊನೆಗೊಳಿಸಿದ್ದು ಮಾತ್ರವಲ್ಲ, ಹೆಣ್ಣು ಮಗುವಿನ ಜನನ ಸಂಕಷ್ಟವೆಂದೋ ಅನಿವಾರ್ಯವಾಗಿ ಸಹಿಸಲೇಬೇಕಾದ ಆಪತ್ತಾಗಿದೆ ಎಂದೋ ಇರುವ ಕಲ್ಪನೆಯನ್ನೇ ಅಳಿಸಿಹಾಕಿತು. ಹೆಣ್ಮಕ್ಕಳ ಜನನ ಶಾಪವಾಗಲಿ, ಸಂಕಷ್ಟವಾಗಲಿ ಅಲ್ಲ, ಬದಲಾಗಿ, ಪುಣ್ಯವೂ ಅನುಗ್ರಹವೂ ಆಗಿದೆ ಎಂಬ ಪ್ರಜ್ಞೆಯನ್ನು ಮೂಡಿಸಿತು. ಹೆಣ್ಮಕ್ಕಳನ್ನು ಪೋಷಿಸಿ, ಬೆಳೆಸಿ ಅವರಿಗೆ ಉತ್ತಮ ಶಿಕ್ಷಣ ತರಬೇತಿ ನೀಡಿ ಅವರನ್ನು ಯೋಗ್ಯರನ್ನಾಗಿ ಮಾಡುವುದು ಅತಿ ದೊಡ್ಡ ಸತ್ಕರ್ಮವಾಗಿದೆಯೆಂದು ಕಲಿಸಿಕೊಟ್ಟಿತು.

ಪ್ರವಾದಿಯವರು(ಸ) ಹೇಳಿದರು: 'ಹೆಣ್ಣು ಮಕ್ಕಳ ಮೂಲಕ ಪರೀಕ್ಷೆಗೊಳಗಾಗಿ, ತರುವಾಯ ಅವರೊಂದಿಗೆ ಸದ್ವರ್ತನೆ ತೋರುವ ವ್ಯಕ್ತಿಯ ಪಾಲಿಗೆ ಆ ಹೆಣ್ಣು ಮಕ್ಕಳು

ಆತನನ್ನು ನರಕದಿಂದ ರಕ್ಷಿಸುವ ಗುರಾಣಿಗಳಾಗುವರು.' (ಮುತ್ತಫಕುನ್ ಅಲೈಹಿ)

''ಯಾರಾದರೂ, ಇಬ್ಬರು ಹುಡುಗಿಯರನ್ನು ಅವರು ಪ್ರೌಢೆಯರಾಗುವ ತನಕ ಪೋಷಿಸಿದರೆ ನಾನು ಮತ್ತು ಅವನು ಈ ರೀತಿ ಸ್ವರ್ಗದಲ್ಲಿ ಪ್ರವೇಶಿಸುವೆವು ಎನ್ನುತ್ತಾ ಪ್ರವಾದಿ(ಸ) ತಮ್ಮ ತೋರ್ಬೆರಳು ಮತ್ತು ಮಧ್ಯದ ಬೆರಳನ್ನು ಎತ್ತಿ ತೋರಿಸಿದರು.'' (ಮುಸ್ಲಿಮ್)

ಪ್ರವಾದಿಯವರು(ಸ) ಹೇಳಿದರು: ''ಯಾರು ಮೂವರು ಹೆಣ್ಣು ಮಕ್ಕಳನ್ನು ಅಥವಾ ಸಹೋದರಿಯರನ್ನು ಪೋಷಿಸಿ ಬೆಳೆಸಿ, ಅವರಿಗೆ ಉತ್ತಮ ಶಿಕ್ಷಣ ನೀಡಿ, ಅವರು ಪ್ರಾಯ ಪೂರ್ತಿಯಾಗುವವರೆಗೆ ಅವರೊಂದಿಗೆ ಕರುಣೆ ತೋರಿದನೋ ಅವನಿಗೆ ಸ್ವರ್ಗ ಕಡ್ಡಾಯವಾಗಿದೆ. ಒಬ್ಬ ವ್ಯಕ್ತಿ ಕೇಳಿದರು: ''ಎರಡು ಹೆಣ್ಣು ಮಕ್ಕಳನ್ನು ಪೋಷಿಸಿ ಬೆಳೆಸಿದರೆ?'' ಪ್ರವಾದಿ(ಸ) ಹೇಳಿದರು: ''ಇಬ್ಬರು ಹೆಣ್ಣು ಮಕ್ಕಳನ್ನು ಬೆಳೆಸಿದರೂ.'' (ಹದೀಸ್ ಮರ್ಫೂಅ್) ''ಒಬ್ಬನಿಗೆ ಒಂದೇ ಹೆಣ್ಣು ಮಗುವಿದ್ದು, ಅವನು ಅದನ್ನು ಜೀವಂತ ಹೂಳದೆ, ಅದನ್ನು ಅಪಮಾನಕಾರಿಯೆಂದು ಪರಿಗಣಿಸದೆ ಮತ್ತು ಅದಕ್ಕಿಂತ ತನ್ನ ಗಂಡು ಮಗನಿಗೆ ಪ್ರಾಶಸ್ತ್ಯ ನೀಡದೆ ಇದ್ದರೆ ಅಲ್ಲಾಹನು ಅವನನ್ನು ಸ್ವರ್ಗದಲ್ಲಿ ಪ್ರವೇಶಗೊಳಿಸುವನು'' ಎಂದು ಪ್ರವಾದಿ(ಸ) ಹೇಳಿದರು. (ಅಬೂದಾವೂದ್)

ಹೀಗೆ ಪವಿತ್ರ ಕುರ್‌ಆನ್ ಮತ್ತು ಪ್ರವಾದಿ ವಚನಗಳು ಹೆಣ್ಣು ಮಕ್ಕಳು ಶಾಪ ಮತ್ತು ಸಂಕಷ್ಟವಾಗಿದ್ದಾರೆಂಬ ಕಲ್ಪನೆಯನ್ನು ನೀಗಿಸಿ, ಅವರೊಂದಿಗಿನ ಕ್ರೂರತೆ, ಅನ್ಯಾಯವನ್ನು ನಿರ್ಮೂಲನಗೊಳಿಸಿತು. ಅವರನ್ನು ಪ್ರೀತಿಪೂರ್ವಕ ಪೋಷಿಸಿ, ಬೆಳೆಸಲು ಸಮಾಜವನ್ನು ಸಜ್ಜುಗೊಳಿಸಿತು. ಹೆಣ್ಣು ಮಕ್ಕಳೊಂದಿಗಿನ ಧೋರಣೆಯು ಮಾನವ ಸಂಸ್ಕೃತಿಯ ಮಾಪನವಾಗಿದೆಯೆಂದೂ, ಜಯಾಪಜಯಗಳ ಮಾನದಂಡವೆಂದೂ ಕಲಿಸಿಕೊಟ್ಟಿತು. ಹೀಗೆ ಪುಣ್ಯ ಮತ್ತು ದೇವ ಸಂಪ್ರೀತಿಯನ್ನು ಬಯಸುವವರೆಲ್ಲರೂ ಹೆಣ್ಣು ಮಕ್ಕಳನ್ನು ಪೋಷಿಸಿ ಬೆಳೆಸುವುದರ ಬಗ್ಗೆ ಜಾಗರೂಕತೆ ಪಾಲಿಸ ತೊಡಗಿದರು. ವಿಶ್ವಾಸಿಗಳ ಸಮಾಜವು ಇಂದಿಗೂ ಈ ಮಹತ್ಕಾರ್ಯವನ್ನು ಮುಂದುವರಿಸುತ್ತದೆ. ಲೋಕಾಂತ್ಯದವರೆಗೂ ಅವಿರತವಾಗಿ ಮುಂದುವರಿಯುವುದು.

ವಾಸ್ತವದಲ್ಲಿ ಮಕ್ಕಳನ್ನು ದಯಪಾಲಿಸುವುದು ಅಲ್ಲಾಹನಾಗಿದ್ದಾನೆ. ಅವರ ಲಿಂಗ ನಿರ್ಣಯ ಮಾಡುವುದು ಅವನೇ. ಕುರ್‌ಆನ್ ಹೀಗೆ ಸ್ಪಷ್ಟಪಡಿಸುತ್ತದೆ: **''ತಾನಿಚ್ಛಿಸಿದವರಿಗೆ ಹೆಣ್ಣು ಮಕ್ಕಳನ್ನು ಕೊಡುತ್ತಾನೆ, ತಾನಿಚ್ಛಿಸಿದವರಿಗೆ ಗಂಡು ಮಕ್ಕಳನ್ನು ಕೊಡುತ್ತಾನೆ. ತಾನಿಚ್ಛಿಸಿದವರಿಗೆ ಗಂಡು-ಹೆಣ್ಣುಗಳೆರಡನ್ನೂ ಸೇರಿಸಿ ಕೊಡುತ್ತಾನೆ.''** (ಸೂರಃ ಅಶ್ಶೂರಾ: 49-50) ಆದರೆ ಕೆಲವರು ಹೆಣ್ಣು ಮಕ್ಕಳಿಗೆ ಜನ್ಮ ನೀಡುವುದು ಸ್ತ್ರೀಗಳ ತಪ್ಪಾಗಿಯೂ, ಕೊರತೆಯಾಗಿಯೂ ಕಾಣುತ್ತಾರೆ. ಪುರಾತನ ಕಾಲದಲ್ಲಿ ಅಬೂ ಹಂಝ ಎಂಬ ಆಡಳಿತಾಧಿಕಾರಿ ಇದ್ದರು. ಅವರು ವಿವಾಹವಾದ ಮಹಿಳೆ ಗಂಡು ಮಕ್ಕಳಿಗೆ ಜನ್ಮ ನೀಡಲಿಲ್ಲ, ಆದ್ದರಿಂದ ಅವರು

ಮನೆಗೆ ಬರಲಿಲ್ಲ, ಇದರಿಂದ ಮನನೊಂದ ಅಬೂ ಹಂಝಿನ ಪತ್ನಿ ಹಾಡಿದ ಹಾಡಿನಲ್ಲಿ ಈ ದುಃಖವು ಸ್ಪಷ್ಟವಾಗುತ್ತದೆ.

''ಅಬೂ ಹಂಝುರಿಗೇನಾಯಿತು?
ನಮ್ಮ ಹತ್ತಿರ ಬರುವುದಿಲ್ಲವಲ್ಲ,
ನಮ್ಮ ಹತ್ತಿರದ ಮನೆಯಲ್ಲಿದ್ದರೂ
ನಾವು ಗಂಡು ಮಕ್ಕಳಿಗೆ ಜನ್ಮ ನೀಡದ್ದಕ್ಕೆ ಕುಪಿತನಾದನು.
ಅಲ್ಲಾಹನಾಣೆ. ಆ ವಿಷಯವು ನಮ್ಮ ನಿಯಂತ್ರಣದಲ್ಲಿಲ್ಲ.''

ನಮಗೆ ನೀಡುವುದನ್ನು ನಾವು ಸ್ವೀಕರಿಸುತ್ತಿದ್ದೇವಷ್ಟೇ. ವಾಸ್ತವದಲ್ಲಿ ಲಿಂಗ ನಿರ್ಣಯದಲ್ಲಿ ಸ್ತ್ರೀಯ ಯಾವ ಪಾತ್ರವೂ ಇಲ್ಲ, ಅಲ್ಲಾಹನು ಪುರುಷ ಬೀಜದ ಮೂಲಕ ಅದನ್ನು ನಿರ್ಣಯಿಸುತ್ತಾನೆ. ಈ ವಿಷಯವು ವೈಜ್ಞಾನಿಕವಾಗಿ ಸ್ಪಷ್ಟಪಡಿಸುವುದಕ್ಕಿಂತ ಮುಂಚಿತವಾಗಿ ಕುರ್‌ಆನ್ ಸ್ಪಷ್ಟಪಡಿಸಿದೆ. **''ಒಂದು ಹನಿಯು ತೊಟ್ಟಿಕ್ಕುವಾಗ, ಅವನೇ ಅದರಿಂದ ಗಂಡು ಮತ್ತು ಹೆಣ್ಣುಗಳ ಜೊತೆಯನ್ನುಂಟು ಮಾಡಿದನು.''** (ಸೂರಃ ಅನ್ನಜ್ಮ್: 45-46)

ಈ ವಾಸ್ತವಿಕತೆಯನ್ನು ಅರ್ಥ ಮಾಡದೆ ಹೆಣ್ಣು ಮಕ್ಕಳ ಜನನದ ಪಾಪವನ್ನು ಸ್ತ್ರೀಯ ಮೇಲೆ ಹೊರಿಸಿ, ಅವರನ್ನು ಏಕಾಂತಗೊಳಿಸಿ, ದೂರಗೊಳಿಸಿ ವಿಚ್ಛೇದನ ನಡೆಸುವ ಅಜ್ಞಾನಿಗಳು ಇಂದಿಗೂ ಇದ್ದಾರೆ. ಇಲ್ಲಿ ಅವರು ಒಂದೇ ಸಮಯದಲ್ಲಿ ಎರಡು ತಪ್ಪುಗಳನ್ನೆಸಗುತ್ತಾರೆ. ಹೆಣ್ಣು ಮಕ್ಕಳನ್ನು ಅನುಗ್ರಹ, ಪುಣ್ಯವೆಂದು ಭಾವಿಸುವ ಬದಲು ಶಾಪ ಮತ್ತು ಸಂಕಷ್ಟವೆಂದೂ ಪರಿಗಣಿಸುತ್ತಾರೆ. ಗಂಡು ಮತ್ತು ಹೆಣ್ಣು ಮಕ್ಕಳ ಜನನ ನನ್ನ ಬೀಜದಿಂದಾಗಿದೆ ಎಂಬುದನ್ನು ತಿಳಿಯದೆ, ಆ ದೋಷವನ್ನು ನಿರಪರಾಧಿಗಳಾದ ಸ್ತ್ರೀಯರ ಮೇಲೆ ಹೊರಿಸುತ್ತಾರೆ. ಇಂತಹ ಹೇಯ ಕೃತ್ಯವನ್ನು ಕೊನೆಗೊಳಿಸಲು ವಿಶ್ವಾಸಿಗಳು ಬಾಧ್ಯಸ್ಥರಾಗಿದ್ದಾರೆ.

❖❖❖❖

ಹೆಸರಲ್ಲೂ ಕೆಲವು ವಿಶೇಷತೆಗಳಿವೆ

ಶತಮಾನಗಳ ಹಿಂದೆ ಗಂಡು ಮಕ್ಕಳಿಗೆ ಅಜ್ಜಂದಿರ ಹಾಗೂ ಹೆಣ್ಣು ಮಕ್ಕಳಿಗೆ ಅಜ್ಜಿಯಂದಿರ ಹೆಸರನ್ನಿಡುವ ರೂಢಿ ಇತ್ತು. ಅದೇ ಆಧಾರದಲ್ಲಿ ನನಗೆ ತಾಯಿಯ ತಂದೆ ಹಾಗೂ ಅಣ್ಣನಿಗೆ ತಂದೆಯ ತಂದೆಯ ಹೆಸರಿಡಲಾಗಿತ್ತು. ಎಂಟನೇ ತರಗತಿಗೆ ಮಂಚೇರಿ ಸರಕಾರಿ ಹೈಸ್ಕೂಲ್‌ಗೆ ಸೇರಿದಾಗ ಅರಬಿ ಭಾಷೆಯನ್ನು ಪ್ರಥಮ ಭಾಷೆಯಾಗಿ ತೆಗೆದವರನ್ನೆಲ್ಲ ಒಂದೇ ತರಗತಿಯಲ್ಲಿ ಕೂರಿಸಲಾಗಿತ್ತು. ಕ್ಲಾಸ್ ಟೀಚರ್ ರಾಮಯ್ಯರವರು ಒಂದು ಹೆಸರು ಕರೆಯ ತೊಡಗಿದರು. ನನ್ನನ್ನು ಚೆಕ್ಕು ಎಂದು ಕರೆದಾಗ ಮಕ್ಕಳೆಲ್ಲರೂ ನಕ್ಕುಬಿಟ್ಟರು. ಇದರಲ್ಲಿ ರಾಮಯ್ಯ ಮಾಸ್ಟರ್‌ನ ತಪ್ಪೇನೂ ಇರಲಿಲ್ಲ. ಚೇಕ್ಕು ಎಂದು ಇಂಗ್ಲೀಷಿನಲ್ಲಿ ಬರೆದರೆ ಚೆಕ್ಕು ಎಂದು ಓದಬಹುದಲ್ಲವೇ? ಅಂದು ಅದೇನೂ ದೊಡ್ಡ ಸಮಸ್ಯೆಯಾಗಿರಲಿಲ್ಲ. ಆದರೆ ಕ್ರಮೇಣ ಅರಬಿಯಲ್ಲಿ ಬರೆಯಬೇಕಾಗಿ ಬಂದಾಗ ಸಮಸ್ಯೆಯಾಯಿತು. ಹೀಗೆ ಮೌಲವಿ ಅಬೂಸಬಾಹ್ ಅಹ್ಮದಲಿಯವರ ಆದೇಶ ಪ್ರಕಾರ, ಮಾತಾಪಿತರ ಅನುಮತಿಯೊಂದಿಗೆ 17ನೇ ವಯಸ್ಸಿನಲ್ಲಿ ನನ್ನ ಹೆಸರನ್ನು ಬದಲಾಯಿಸಿದೆ.

ಹೆಸರಿನಲ್ಲಿಯೂ ಕೆಲವು ಸಮಸ್ಯೆಗಳಿರುತ್ತವೆ ಎಂದು ಸ್ಪಷ್ಟಪಡಿಸಲಿಕ್ಕಾಗಿ ನನ್ನ ಅನುಭವ ವನ್ನು ನಾನಿಲ್ಲಿ ಬರೆದಿರುತ್ತೇನೆ. ಉತ್ತಮ ಅರ್ಥವಿರುವ, ಕರೆಯಲು ಸುಲಭವಾದ ಹಾಗೂ ಪ್ರಧಾನ ಭಾಷೆಗಳಲ್ಲಿ ಬರೆಯಲು ಸಾಧ್ಯವಿರುವಂತಹ ಹೆಸರುಗಳನ್ನಿಡಬೇಕು. ಕೇಳಲು ಆಸಕ್ತಿಯಿಲ್ಲದ, ಕರೆಯಲು ಕಷ್ಟವಿರುವ, ಅರ್ಥವಿಲ್ಲದ, ಕೆಟ್ಟ ಅರ್ಥವಿರುವ ಹಾಗೂ ಅರಬಿ, ಇಂಗ್ಲೀಷ್‌ನಲ್ಲಿ ಬರೆಯಲು ಅಸಾಧ್ಯವಾದ ಹೆಸರುಗಳನ್ನಿಡುವುದನ್ನು ಬಿಟ್ಟು ಬಿಡುವುದು ಉತ್ತಮ. ಉತ್ತಮ ಹೆಸರು ಮಗುವಿನ ಆತ್ಮವಿಶ್ವಾಸವನ್ನು (Self esteem) ಹೆಚ್ಚಿಸಲು ಪರ್ಯಾಪ್ತಗೊಳಿಸುವ ಘಟಕಗಳಲ್ಲೊಂದಾಗಿದೆ. ಪ್ರವಾದಿಯವರು(ಸ) ಹೇಳುತ್ತಾರೆ: ''ಅಂತ್ಯ ದಿನದಂದು ನಿಮ್ಮನ್ನು ನಿಮ್ಮ ತಂದೆಯಂದಿರ ಹೆಸರುಗಳೊಂದಿಗೆ ಕರೆಯಲಾಗುತ್ತದೆ. ಆದ್ದರಿಂದ ಉತ್ತಮ ಹೆಸರುಗಳನ್ನಿಡಿರಿ.'' (ಅಬೂದಾವೂದ್)

ಕೆಟ್ಟ ಅರ್ಥ ಬರುವ ಹೆಸರುಗಳನ್ನು ಪ್ರವಾದಿ(ಸ) ಬದಲಾಯಿಸಲು ಹೇಳಿದ ಅನೇಕ ಘಟನೆಗಳಿವೆ. ಉಮರ್ ಫಾರೂಕ್‌ರವರ ಮಗಳ ಹೆಸರು ಧಿಕ್ಕಾರಿ ಎಂಬ ಅರ್ಥ ಬರುವ 'ಆಸಿಯ' ಎಂದಾಗಿತ್ತು. ಪ್ರವಾದಿ(ಸ) ಅದನ್ನು 'ಜಮೀಲ' (ಸುಂದರಿ) ಎಂದು ಬದಲಾಯಿಸಿ

ಟ್ಟರು. (ತಿರ್ಮಿದಿ) ಹಾಗೆಯೇ ಅಲ್ಲಾಹನ ಹೆಸರು ಸೂಚಿಸುವ ಹೆಸರುಗಳನ್ನಿಡುವುದನ್ನು ಪ್ರವಾದಿಯವರು(ಸ) ತಡೆದರು. ಅಲ್ಲಾಹನ ದಾಸ್ಯತನವನ್ನು ತಿಳಿಸುವ ಅಬ್ದುಲ್ಲ, ಅಬ್ದುರ್ರಹ್ಮಾನ್ ಎಂಬಂತಹ ಹೆಸರುಗಳನ್ನಿಡುವುದು ಅಲ್ಲಾಹನಿಗೆ ಪ್ರಿಯವಾಗಿದೆಯೆಂಬುದನ್ನು ಕಲಿಸಿಕೊಟ್ಟರು. (ಮುಸ್ಲಿಮ್) ಒಳ್ಳೆಯ ಹೆಸರು ಇರಬೇಕೆಂಬುದು ಮಗುವಿನ ಹಕ್ಕಾಗಿದೆ. ಆದ್ದರಿಂದ ತಂದೆ-ತಾಯಿಗಳು ಮಗುವಿಗೆ ಹೆಸರಿಡುವಾಗ ಈ ವಿಷಯವನ್ನು ಮರೆಯಬಾರದು.

ಮಗು ಜನಿಸಿದ ಏಳನೇ ದಿನ ತಲೆಗೂದಲು ಬೋಳಿಸಿ, ಅಕೀಕಃ (ಮೃಗ ಬಲಿ) ನಡೆಸಿ, ಹೆಸರಿಡಬೇಕೆಂದು ಪ್ರವಾದಿಯವರು(ಸ) ಹೇಳಿರುವುದಾಗಿ ಹದೀಸ್ ಗ್ರಂಥಗಳಲ್ಲಿವೆ.

(ಅಸ್‌ಹಾಬುಸ್ಸುನನ್)

ಆದರೆ ಅಬೂ ಅಸ್‌ಯದ್‌ರ ಮಗನಿಗೆ ಪ್ರವಾದಿಯವರು(ಸ) ಜನಿಸಿದ ಅದೇ ದಿನ 'ಮುಂದಿರ್' ಎಂಬ ನಾಮಕರಣ ಮಾಡಿದ್ದರು.

ಮಕ್ಕಳನ್ನು ಯಾವಾಗಲೂ ಅವರ ತಂದೆಯಂದಿರಿಗೆ ಸೇರಿಸಿ ಹೇಳಬೇಕೆಂದು ಕುರ್‌ಆನ್ ಆದೇಶಿಸುತ್ತದೆ. (ಸೂರಃ ಅಲ್‌ಅಹ್‌ಝಾಬ್: 6) ಅಡ್ಡ ಹೆಸರುಗಳನ್ನಿಡುವುದನ್ನು ಅಲ್ಲಾಹನು ಬಲವಾಗಿ ತಡೆದನು. (ಸೂರಃ ಅಲ್ ಹುಜರಾತ್: 11)

ಮಗು ಹುಟ್ಟಿದ ಕೂಡಲೇ ಪ್ರಥಮವಾಗಿ ಕೇಳುವ (ಶಬ್ದ) ಧ್ವನಿಯು ಅವನನ್ನು ಸೃಷ್ಟಿಸಿದ ಅಲ್ಲಾಹನ ಮಹಾನತೆಯ ಘೋಷಣೆಯಾಗಿರಬೇಕೆಂದು ಇಸ್ಲಾಮ್ ಆದೇಶಿಸುತ್ತದೆ. ಭವಿಷ್ಯದಲ್ಲಿ ಅವನು ಅಂಗೀಕರಿಸುವ, ಪ್ರಾಯೋಗಿಕವಾಗಿ ಮಾಡಬೇಕಾದ ಆದರ್ಶ ಅವನ ಎರಡು ಕಿವಿಗಳಲ್ಲಿಯೂ ಮಾರ್ದನಿಸಬೇಕು. ಆದ್ದರಿಂದ, ಮಗು ಹುಟ್ಟಿದ ಕೂಡಲೇ ಬಲ ಕಿವಿಯಲ್ಲಿ ಅದಾನ್ ಮತ್ತು ಎಡ ಕಿವಿಯಲ್ಲಿ ಇಕಾಮತ್ ಕೊಡಬೇಕೆಂದು ಪ್ರವಾದಿಯವರು(ಸ) ಆದೇಶಿಸಿದ್ದಾರೆ.

ಹ. ಅಲೀ(ರ)ಯವರಿಗೆ ಹಸನ್ ಹುಟ್ಟಿದಾಗ ಪ್ರವಾದಿ(ಸ) ಬಲ ಕಿವಿಯಲ್ಲಿ ಅದಾನ್ ಮತ್ತು ಎಡ ಕಿವಿಯಲ್ಲಿ ಇಕಾಮತ್ ಕೊಟ್ಟಿದ್ದರೆಂದು ಇಬ್ನು ಅಬ್ಬಾಸ್(ರ) ವರದಿ ಮಾಡಿದ್ದಾರೆ. (ಬೈಹಕಿ)

ಹಾಗೆಯೇ, ಮಗು ಜನಿಸಿದ ಕೂಡಲೇ ಉತ್ತುತ್ತೆಯ ನೀರು, ಜೇನು ತುಪ್ಪ ಅಥವಾ ಸಿಹಿ ನೀರನ್ನು ಅದರ ತಾಳುವಿಗೆ ತಾಗಿಸುವುದು ಪ್ರವಾದಿ ಚರ್ಯೆಯ ಒಂದು ಭಾಗವಾಗಿದೆ.

ಅಬೂ ಮೂಸಾ ತನ್ನ ಮಗುವನ್ನು ಪ್ರವಾದಿಯವರ(ಸ) ಬಳಿಗೆ ಕರೆದೊಯ್ದಾಗ ಪ್ರವಾದಿ(ಸ) ಅದಕ್ಕೆ 'ಇಬ್ರಾಹೀಮ್' ಎಂದು ನಾಮಕರಣ ಮಾಡಿ ಉತ್ತುತ್ತೆಯ ನೀರನ್ನು ಬಾಯಿಗೆ ತಾಗಿಸಿ ಅನುಗ್ರಹಕ್ಕಾಗಿ ಪ್ರಾರ್ಥಿಸಿದರು. (ಮುತ್ತಫಕುನ್ ಅಲೈಹಿ)

ಅಬೂತಲ್ಹಾ ಮತ್ತು ಉಮ್ಮು ಸುಲೈಮ್‌ರಿಗೆ ಮಗು ಜನಿಸಿದಾಗ ಪ್ರವಾದಿಯವರ(ಸ) ಸನ್ನಿಧಿಗೆ ಕರೆದೊಯ್ದರು. ಆಗ ಪ್ರವಾದಿಯವರು(ಸ) ಉತ್ತುತ್ತೆಯನ್ನು ಜಗಿದು ಅದರ ನೀರನ್ನು ಮಗುವಿನ ಬಾಯಿಗೆ ತಾಗಿಸಿದರು. ಈ ರೀತಿ ನವಜಾತ ಶಿಶುವಿಗೆ ಸಿಹಿ ತಾಗಿಸುವುದು

ಉತ್ತಮವಾಗಿದೆ.

ಹುಟ್ಟಿದ ಏಳನೇ ದಿನ ಮಗುವಿನ ತಲೆಗೂದಲು ಬೋಳಿಸಿ ಅದರ ತೂಕಕ್ಕೆ ಸಮಾನವಾದ ಬೆಳ್ಳಿಯನ್ನು ದಾನ ಮಾಡುವುದು, ಕುರ್ಬಾನಿ ಮಾಡಿ ಮಾಂಸವನ್ನು ಹಂಚುವುದು ಕೂಡಾ ಪ್ರವಾದಿಯವರ(ಸ) ಚರ್ಯೆಯಲ್ಲಿರುವ ಪುಣ್ಯಕರ್ಮಗಳಾಗಿವೆ.

ಜಅ್‌ಫರ್ ಬಿನ್ ಮುಹಮ್ಮದ್ ತನ್ನ ತಂದೆಯಿಂದ ವರದಿ ಮಾಡಿರುವುದಾಗಿ ಇಮಾಮ್ ಮಾಲಿಕ್ ತನ್ನ ಪ್ರಸಿದ್ಧ ಗ್ರಂಥ 'ಮುವತ್ತ'ದಲ್ಲಿ ಉಲ್ಲೇಖಿಸಿದ್ದಾರೆ.

''ಫಾತಿಮಾ(ರ)ರವರು ಹಸನ್, ಹುಸೈನ್, ಝೈನಬ್, ಉಮ್ಮುಕುಲ್ಸೂಮ್ ಇವರ ಕೂದಲು ಬೋಳಿಸಿ ಅದರಷ್ಟು ತೂಕದ ಬೆಳ್ಳಿ ದಾನ ಮಾಡಿದ್ದರು.''

ಮುಹಮ್ಮದ್ ಬಿನ್ ಅಲೀ ವರದಿ ಮಾಡುತ್ತಾರೆ, ''ಪ್ರವಾದಿ(ಸ) ಹಸನ್(ರ)ರ ಪರವಾಗಿ ಒಂದು ಆಡನ್ನು ಅಕೀಕಃ ಮಾಡಿದರು. ತರುವಾಯ ಫಾತಿಮಾ(ರ)ರೊಂದಿಗೆ ಹೇಳಿದರು, ನೀನು ಅವನ ತಲೆಗೂದಲು ಬೋಳಿಸಬೇಕು. ತರುವಾಯ ಅದರ ತೂಕದಷ್ಟು ಬೆಳ್ಳಿ ದಾನ ಮಾಡಬೇಕು. ಹಾಗೆಯೇ ಫಾತಿಮಾ(ರ) ಅದರ ತೂಕ ಮಾಡಿದರು. ಅದು ಒಂದು ದಿರ್ಹಮ್ ಅಥವಾ ಅದಕ್ಕಿಂತಲೂ ಸ್ವಲ್ಪ ಕಡಿಮೆಯಿತ್ತು.''

ಪ್ರಸವದ ನಂತರ ಏಳನೇ ದಿನ ತಲೆಗೂದಲು ಬೋಳಿಸಿ ಅಕೀಕಃ ನೀಡಲು ಸಾಧ್ಯವಾಗದಿದ್ದರೆ 14ನೇ ದಿನ ಅಥವಾ 21ನೇ ದಿನದಂದು ಮಾಡಬಹುದು. ಆದರೆ, ಏಳನೇ ದಿನ ನಿರ್ವಹಿಸುವುದು ಅತ್ಯಂತ ಪುಣ್ಯ ಕಾರ್ಯವಾಗಿದೆ. ಆ ದಿವಸಗಳಲ್ಲಿ ಸಾಧ್ಯವಾಗದಿದ್ದರೆ ಬೇರೆ ದಿನಗಳಲ್ಲೂ ಮಾಡಬಹುದು. ಪ್ರವಾದಿ(ಸ)ರ ಕಾಲದಲ್ಲಿ ಆಡನ್ನು ದಿಬಹ್ ಮಾಡುತ್ತಿದ್ದರು. ಬೇರೆ ಜಾನುವಾರುಗಳನ್ನೂ ದಿಬಹ್ ಮಾಡಬಹುದೆಂದು ವಿದ್ವಾಂಸರು ಅಭಿಪ್ರಾಯ ಪಡುತ್ತಾರೆ.

ಮುಂಜಿ ಮಾಡುವುದು ಸುನ್ನತ್ (ಪ್ರವಾದಿ ಚರ್ಯೆ) ಆಗಿದೆ. ಪುರುಷರಿಗೆ ಮಾಲಿನ್ಯಗಳಿಂದ ಸಂಪೂರ್ಣ ಮುಕ್ತಿ ಪಡೆಯಲು ಮತ್ತು ಆರೋಗ್ಯ ಸಂರಕ್ಷಣೆಗೆ ಅದು ಬಹಳ ಉಪಯುಕ್ತವಾಗಿದೆ. ವೈದ್ಯಕೀಯ ಶಾಸ್ತ್ರದಲ್ಲಿ ಬಹಳಷ್ಟು ಸೌಕರ್ಯಗಳಿರುವುದರಿಂದ ಜನಿಸಿದ ಸ್ವಲ್ಪ ದಿನದಲ್ಲೇ ಮುಂಜಿ ಮಾಡಿಸುವುದು ಉತ್ತಮವಾಗಿದೆ ಮತ್ತು ಅದರಿಂದಾಗಿ ಮಕ್ಕಳಿಗೆ ನೋವು ಕಡಿಮೆಗೊಳಿಸಲು ಉಪಯುಕ್ತವಾಗಿದೆಯೆಂಬ ಅಭಿಪ್ರಾಯವಿದೆ. ಆದರೆ ಮಕ್ಕಳ ನೋವು ನಮಗೆ ತಿಳಿಯುವುದಿಲ್ಲ, ಆ ಪ್ರಾಯದಲ್ಲಿ ಆಂಟಿ ಬಯೋಟಿಕ್‌ಗಳನ್ನು ನೀಡುವುದು ಅಪಾಯಕಾರಿ ಎಂದು ಅಭಿಪ್ರಾಯ ಪಡುವವರೂ ಇದ್ದಾರೆ.

❖❖❖❖

ಎದೆಹಾಲು ತಡೆಯಬಾರದು

ಒಂದು ವ್ಯಾಪಾರೀ ತಂಡ ಮದೀನಾಕ್ಕೆ ಬಂತು. ಅನೇಕ ಸ್ತ್ರೀಯರೂ ಮಕ್ಕಳೂ ಅವರ ಜೊತೆಯಲ್ಲಿದ್ದರು. ಡೇರೆ ಹಾಕಿ ಅಲ್ಲಿ ವಿಶ್ರಾಂತಿ ಪಡೆಯುತ್ತಿದ್ದರು. ಪಟ್ಟಣಕ್ಕೆ ಬಂದ ಈ ವ್ಯಾಪಾರೀ ತಂಡಕ್ಕೆ ಕಾವಲು ನಿಲ್ಲಬೇಕಾದುದು ಅಗತ್ಯವೆಂದು ಖಲೀಫ ಉಮರ್ ಫಾರೂಕ್(ರ) ಭಾವಿಸಿದರು. ಆದರೆ, ಏನು ಮಾಡುವುದು? ತನ್ನ ಬಳಿ ಕಾವಲುಗಾರರಿಲ್ಲ, ಯಾತ್ರಾ ತಂಡಕ್ಕೆ ಕಾವಲು ನಿಲ್ಲಲು ಖಲೀಫಾ ಸ್ವತಃ ಸನ್ನದ್ಧರಾದರು. ಆದರೆ, ಅದು ಸರಿಯಲ್ಲ ತಾನೆ. ಸ್ತ್ರೀಯರೂ, ಮಕ್ಕಳೂ ಇರುವ ಡೇರೆಗೆ ತಾನೊಬ್ಬನೇ ಕಾವಲು ಕಾಯುವುದು ಉಚಿತವಲ್ಲ, ಆದ್ದರಿಂದ ಒಬ್ಬ ಸ್ನೇಹಿತನನ್ನು ಹುಡುಕಿದರು. ಕೊನೆಗೆ ಅಬ್ದುರ್ರಹ್ಮಾನ್ ಬಿನ್ ಔಫ್ ಸಹಾಯಕ್ಕೆ ಲಭಿಸಿದರು. ಇಬ್ಬರೂ ರಾತ್ರಿ ನಿದ್ದೆಗೆಟ್ಟು ಯಾತ್ರಾ ತಂಡಕ್ಕೆ ಕಾವಲು ನಿಂತರು.

ಅರ್ಧರಾತ್ರಿಯ ವೇಳೆ ಎಲ್ಲರೂ ಗಾಢ ನಿದ್ರೆಯಲ್ಲಿದ್ದಾರೆ. ಡೇರೆಯೊಳಗಿನಿಂದ ಒಂದು ಮಗುವಿನ ಅಳು. ಸ್ವಲ್ಪ ಸಮಯದಲ್ಲಿ ಅಳು ನಿಲ್ಲಿಸಬಹುದೆಂದು ಭಾವಿಸಿ ಖಲೀಫಾ ಪ್ರಾರ್ಥನೆಯಲ್ಲಿ ನಿರತರಾದರು. ತುಂಬಾ ಹೊತ್ತು ಮಗು ಅಳು ನಿಲ್ಲಿಸದಿದ್ದಾಗ ಖಲೀಫಾ ಶಬ್ದ ಬಂದ ಕಡೆಗೆ ಹೋದರು. ಆ ಮಗುವಿನ ತಾಯಿಯನ್ನು ಕರೆದು ಹೇಳಿದರು: ''ಏನಿದು? ಮಗು ಅಳುವುದು ಎಷ್ಟು ಹೊತ್ತಾಯಿತು? ಉತ್ತಮ ರೀತಿಯಲ್ಲಿ ಅದನ್ನು ಮಲಗಿಸಿರಿ, ಅಲ್ಲಾಹನನ್ನು ಭಯಪಡಿರಿ...''

ಇಷ್ಟು ಹೇಳಿ ಉಮರ್ ಫಾರೂಕ್ ತನ್ನ ಸ್ಥಳಕ್ಕೆ ಮರಳಿದರು. ಆದರೆ ಮಗು ಇನ್ನಷ್ಟು ಜೋರಾಗಿ ಅಳತೊಡಗಿತು. ಅವರು ಪುನಃ ಹೋಗಿ ಆ ತಾಯಿಗೆ ಉಪದೇಶಿಸಿದರು. ಪುನಃ ಮಗು ಜೋರಾಗಿ ಅಳುತ್ತಲೇ ಇತ್ತು. ಈ ಬಾರಿ ಉಮರ್(ರ) ಗಟ್ಟಿಯಾಗಿ ಆ ತಾಯಿಗೆ ಹೇಳಿದರು: ''ಹೇ ಏನಿದು? ನೀವು ಕರುಣೆಯಿಲ್ಲದ ತಾಯಿಯೆಂದು ತೋರುತ್ತದೆ. ಈ ಅರ್ಧರಾತ್ರಿಯಲ್ಲಿ ಈ ಮಗುವನ್ನು ಈ ರೀತಿ ಯಾಕೆ ಚೀರಾಡುಸುತ್ತೀರಿ?''

ಇದನ್ನು ಕೇಳಿದ ಆ ಸ್ತ್ರೀಗೆ ಸಿಟ್ಟು ಬಂತು. ಸಿಟ್ಟಿನಿಂದ ಅವರು ಹೇಳಿದರು: ''ಛೆ, ನೀವು ಏನು ಹೇಳುತ್ತಿರುವಿರಿ? ನೀವು ನನ್ನನ್ನು ತುಂಬಾ ಹೊತ್ತಿನಿಂದ ಆಕ್ಷೇಪಿಸುತ್ತಿದ್ದೀರಿಲ್ಲ, ನಾನು ನನ್ನ ಮಗುವಿನ ಎದೆಹಾಲು ಬಿಡಿಸಲು ಪ್ರಯತ್ನಪಡುತ್ತಿದ್ದೇನೆ. ಅವನು ಅದಕ್ಕೆ ಅನುಮತಿಸುವುದಿಲ್ಲ.''

ಎದೆಹಾಲು ಬಿಡಿಸುವುದೇ? ಯಾಕೆ? ಅವನಿಗೆ ಅಷ್ಟು ಪ್ರಾಯವಾಯಿತೇ? ಖಲೀಫಾ

ಪ್ರಶ್ನಿಸಿದರು. ''ಎದೆಹಾಲು ಬಿಡಿಸಿದ ಮಕ್ಕಳಿಗೆ ಮಾತ್ರ ಖಲೀಫಾ ಉಮರ್ ಖರ್ಚಿಗೆ ಕೊಡುತ್ತಾರೆ. ಅದಕ್ಕಾಗಿ ಮಾತ್ರ 8-9 ತಿಂಗಳ ಈ ಮಗುವಿನ ಎದೆಹಾಲು ಬಿಡಿಸುತ್ತಿದ್ದೇನೆ.'' ಆ ತಾಯಿ ಉತ್ತರ ಕೊಟ್ಟರು.

ತಾನು ಮಾತನಾಡುತ್ತಿರುವುದು ಉಮರ್‌ರೊಂದಿಗೆ ಎಂಬುದು ಆ ಸ್ತ್ರೀಗೆ ಏನು ಗೊತ್ತು? ತಮ್ಮ ತಂಡಕ್ಕೆ ಆಡಳಿತಾಧಿಕಾರಿ ಕಾವಲು ಕಾಯುತ್ತಿರಬಹುದೆಂದು ಹೇಗೆ ತಾನೆ ನಿರೀಕ್ಷಿ ಸುವುದು! ಪ್ರಭಾತವಾಯಿತು. ಫಜ್ರ್ ನಮಾಝ್ ಖಲೀಫಾ ಉಮರ್ ಫಾರೂಕ್‌ರವರ ನಾಯಕತ್ವದಲ್ಲಿ ಫಜ್ರ್ ನಮಾಝ್ ಆರಂಭವಾಯಿತು. ಮಗುವಿನ ಅಳು ನಿಮಿತ್ತ ಅವರ ಕುರ್‌ಆನ್ ಪಾರಾಯಣ ಜನರಿಗೆ ಸ್ಪಷ್ಟವಾಗಿ ಕೇಳಲಾಗಲಿಲ್ಲ. ನಮಾಝ್‌ನ ನಂತರ ಖಲೀಫ ಎದ್ದು ನಿಂತು ಗದ್ಗದಿತರಾಗಿ ಹೇಳಿದರು: ''ಸತ್ಯವಿಶ್ವಾಸಿಗಳೇ, ನಿಮ್ಮ ಉಮರ್ ನಾಶವಾದಂತೆಯೇ ಸರಿ! ಎಷ್ಟು ಮಕ್ಕಳು ನನ್ನ ಕಾರಣದಿಂದ ಅತ್ತು ಅತ್ತು ದುರ್ಬಲರಾಗಿರಬಹುದು! ಆದ್ದರಿಂದ ತಿಳಿಯಿರಿ. ಇಂದಿನಿಂದ ಯಾವ ತಾಯಿಯೂ ತನ್ನ ಮಗುವಿನ ಹಾಲು ಬಿಡಿಸುವುದರಲ್ಲಿ ತ್ವರೆ ಮಾಡಬಾರದು. ಜನಿಸುವ (ಹುಟ್ಟುವ) ಪ್ರತಿಯೊಂದು ಮಗುವಿಗೂ ಹುಟ್ಟಿದಂದಿನಿಂದಲೇ ಸರಕಾರಿ ಬೊಕ್ಕಸದಿಂದ ಜೀವನಾಂಶ ನೀಡಲಾಗುವುದು.''

ಎರಡು ವರ್ಷ ಎದೆಹಾಲು ನೀಡಬೇಕಾದುದು ಮಗುವಿನ ಹಕ್ಕಾಗಿದೆ. ಯಾವ ಕಾರಣದಿಂದಲೂ ಅದಕ್ಕೆ ಧಕ್ಕೆ ಬರಬಾರದೆಂದು ಖಲೀಫಾ ಉಮರ್ ಭಾವಿಸಿದ್ದರು. ಆದ್ದರಿಂದಲೇ ಅವರು ಕಾನೂನು ನಿಯಮವನ್ನು ಬದಲಾಯಿಸಿದರು. ಎದೆಹಾಲು ಅವಧಿಯ ಬಗ್ಗೆ ಕುರ್‌ಆನ್ ಹೇಳುತ್ತದೆ: ''**ತಮ್ಮ ಶಿಶುಗಳು ಪೂರ್ಣ ಸ್ತನಪಾನಾವಧಿಯ ವರೆಗೆ ಹಾಲು ಕುಡಿಯಬೇಕೆಂದು ಪಿತರು ಬಯಸಿದರೆ, ತಾಯಂದಿರು ತಮ್ಮ ಶಿಶುಗಳಿಗೆ ಎರಡು ವರ್ಷಪೂರ್ತಿಯಾಗಿ ಹಾಲುಣಿಸಬೇಕು. ಆಗ ಶಿಶುವಿನ ತಂದೆಯು ಅವರಿಗೆ ನ್ಯಾಯೋಚಿತ ರೀತಿಯಿಂದ ಅನ್ನ, ಬಟ್ಟೆಕೊಡಲು ಬಾಧ್ಯಸ್ಥನಾಗುವನು.**'' (ಸೂರಃ ಅಲ್‌ಬಕರ: 233)

''**ಅವನ ತಾಯಿಯು ನಿತ್ರಾಣದ ಮೇಲೆ ನಿತ್ರಾಣವನ್ನು ಸಹಿಸಿ ಅವನನ್ನು ತನ್ನ ಗರ್ಭದಲ್ಲಿರಿಸಿದಳು ಮತ್ತು ಅವನ ಸ್ತನಪಾನ ಬಿಡುವುದರಲ್ಲಿ 2 ವರ್ಷಗಳು ತಗಲಿದುವು.**''

(ಸೂರಃ ಲುಕ್ಮಾನ್: 14)

ಸ್ತನಪಾನಕ್ಕೆ ಇಸ್ಲಾಮ್ ಅತ್ಯಧಿಕ ಪ್ರಾಮುಖ್ಯತೆ ನೀಡುತ್ತದೆ. ಇಸ್ಲಾಮಿನ ದೃಷ್ಟಿಕೋನದಲ್ಲಿ ಜನ್ಮಕೊಟ್ಟ ತಾಯಿ ಮತ್ತು ಸ್ತನಪಾನ ಮಾಡಿದ ತಾಯಿ ಸಮಾನವಾಗಿದ್ದಾರೆ. ''**ನಿಮಗೆ ಈ ಸ್ತ್ರೀಯರು ವಿವಾಹಕ್ಕೆ ನಿಷಿದ್ಧರು- ನಿಮ್ಮ ಮಾತೆಯರು, ಪುತ್ರಿಯರು, ಸಹೋದರಿಯರು, ಸೋದರತ್ತೆಯರು, ತಾಯಿಯ ಸೋದರಿಯರು, ಸೋದರ ಪುತ್ರಿಯರು, ಸೋದರಿ ಪುತ್ರಿಯರು ನಿಮಗೆ ಮೊಲೆಹಾಲುಣಿಸಿದ ಸಾಕು ತಾಯಂದಿರು, ನಿಮ್ಮೊಂದಿಗೆ ಸ್ತನಪಾನ ಸಂಬಂಧವಿರುವ ಸೋದರಿಯರು, ನಿಮ್ಮ ಪತ್ನಿಯರ ತಾಯಂದಿರು...**'' (ಸೂರಃ ಅನ್ನಿಸಾ: 23)

ಇಲ್ಲಿ ರಕ್ತ ಸಂಬಂಧಕ್ಕಿರುವಷ್ಟೇ ಪಾವಿತ್ರ್ಯತೆ ಸ್ತನಪಾನ ಸಂಬಂಧಕ್ಕೂ ಇವೆ ಎಂಬುದನ್ನು ಕುರ್‌ಆನ್ ಸ್ಪಷ್ಟಪಡಿಸುತ್ತದೆ. ತನ್ಮೂಲಕ ಸ್ತನಪಾನದ ಮಹತ್ವವನ್ನು ಎತ್ತಿ ಹಿಡಿದಿದೆ.

ಎದೆಹಾಲು ಮುಖಾಂತರ ಮಗುವಿಗೆ ಪೋಷಕಾಂಶ ಲಭಿಸುವುದರೊಂದಿಗೆ ತಾಯಿಯ ಪ್ರೀತಿ, ವಾತ್ಸಲ್ಯ ಹಾಗೂ ಕರುಣೆಯ ಭಾವನೆಗಳೂ ಲಭಿಸುತ್ತಿರುತ್ತವೆ. ಮಗುವಿನ ದೈಹಿಕಾರೋಗ್ಯಕ್ಕೆ ಎದೆಹಾಲಿನಷ್ಟು ಪ್ರಯೋಜನಕಾರಿಯಾದ ಇನ್ನೊಂದು ವಸ್ತುವಿಲ್ಲ. 'ಎದೆ ಹಾಲು ಅಮೃತ ಸಮಾನ' ಎಂದು ಹೇಳಲು ಇದೇ ಕಾರಣ. ಆದ್ದರಿಂದ, ಸೌಂದರ್ಯ ನಷ್ಟವಾಗುವುದೆಂದು ಹೆದರಿಯೋ, ಆಲಸ್ಯದಿಂದಲೋ ಮಗುವಿನ ಎದೆಹಾಲನ್ನು ತಡೆಯುವ ತಾಯಂದಿರು ತೋರುವ ಹಕ್ಕು ವಂಚನೆ ಅತಿ ದೊಡ್ಡ ಅನ್ಯಾಯವಾಗಿದೆ. ಅಂತಹ ತಾಯಂದಿರು ವೃದ್ಧಾಪ್ಯದಲ್ಲಿ ತಮ್ಮ ಮಕ್ಕಳ ನಿರ್ಲಕ್ಷ್ಯಕ್ಕೆ ಕಾರಣವಾಗುವುದರಲ್ಲಿ ಅಚ್ಚರಿ ಪಡಬೇಕಾಗಿಲ್ಲ.

❖❖❖❖

ಮಕ್ಕಳು ಅನುಗ್ರಹ ಮತ್ತು ಶಾಪ

ಎರಡು ರೀತಿಯ ಮಕ್ಕಳನ್ನು ಕುರ್‌ಆನ್ ಪರಿಚಯ ಪಡಿಸುತ್ತದೆ. ''ತನ್ನ ಮಾತಾಪಿತರೊಂದಿಗೆ ಸೌಜನ್ಯದಿಂದ ವರ್ತಿಸಬೇಕೆಂದು ನಾವು ಮಾನವನಿಗೆ ಆದೇಶಿಸಿದೆವು. ಅವನ ತಾಯಿಯು ಬಹಳ ಕಷ್ಟಪಟ್ಟು ಅವನನ್ನು ಗರ್ಭದಲ್ಲಿರಿಸಿದಳು ಮತ್ತು ಕಷ್ಟಪಟ್ಟೇ ಅವನನ್ನು ಹೆತ್ತಳು. ಅವನ ಗರ್ಭಾವಧಿಯಲ್ಲಿ ಮತ್ತು ಮೊಲೆಹಾಲು ಬಿಡಿಸುವುದರಲ್ಲಿ ಮೂವತ್ತು ತಿಂಗಳುಗಳು ತಗಲಿದವು. ಅವನು ಸಂಪೂರ್ಣ ಪ್ರಾಬಲ್ಯಕ್ಕೆ ಬಂದು ನಲ್ವತ್ತು ವರ್ಷದವನಾದಾಗ, ''ನನ್ನ ಪ್ರಭೂ, ನೀನು ನನಗೂ ನನ್ನ ಮಾತಾಪಿತರಿಗೂ ಕರುಣಿಸಿರುವ ಅನುಗ್ರಹಗಳ ಬಗ್ಗೆ ಕೃತಜ್ಞತೆ ಸಲ್ಲಿಸುವ ಹಾಗೂ ನೀನು ಸಂತೃಪ್ತನಾಗುವಂತಹ ಸತ್ಕರ್ಮಗಳನ್ನು ಮಾಡುವ ಸೌಭಾಗ್ಯವನ್ನು ನನಗೆ ನೀಡು ಮತ್ತು ನನ್ನ ಮಕ್ಕಳನ್ನೂ ಸಜ್ಜನರಾಗಿ ಮಾಡಿ ನನಗೆ ಸುಖ ನೀಡು. ನಾನು ನಿನ್ನ ಸನ್ನಿಧಿಯಲ್ಲಿ ಪಶ್ಚಾತ್ತಾಪ ಪಡುತ್ತೇನೆ ಮತ್ತು ಖಂಡಿತವಾಗಿಯೂ ನಾನು ಶರಣಾಗತ (ಮುಸ್ಲಿಮ್) ದಾಸರಲ್ಲಾಗಿರುತ್ತೇನೆ'' ಎಂದನು. ನಾವು ಇಂತಹವರ ಅತ್ಯುತ್ತಮ ಕರ್ಮಗಳನ್ನು ಸ್ವೀಕರಿಸುತ್ತೇವೆ ಮತ್ತು ಅವರ ಪಾಪಗಳನ್ನು ಮನ್ನಿಸುತ್ತೇವೆ. ಅವರೊಡನೆ ಮಾಡಲಾಗುತ್ತಿರುವ ಸತ್ಯವಾಗ್ದಾನಗಳ ಪ್ರಕಾರ ಅವರು ಸ್ವರ್ಗದವರೊಂದಿಗೆ ಸೇರಿಕೊಳ್ಳುವರು.'' ಇನ್ನು ತನ್ನ ಮಾತಾಪಿತರೊಡನೆ, ''ಛೀ, ನಿಮ್ಮದೆಂತಹ ಕಿರುಕುಳ! ನಾನು ಮರಣಾನಂತರ ಗೋರಿಯಿಂದ ಹೊರ ತರಲ್ಪಡುವೆನೆಂದು ನೀವು ನನ್ನನ್ನು ಹೆದರಿಸುತ್ತಿರುವಿರಾ? ವಸ್ತುತಃ ನನಗಿಂತ ಮುಂಚೆ ಅನೇಕ ವಂಶಗಳು ಗತಿಸಿವೆ. (ಅವರಲ್ಲಾರೂ ಎದ್ದು ಬಂದದ್ದಿಲ್ಲ)'' ಎಂದು ಹೇಳಿದನು. ಅವನ ಮಾತಾಪಿತರು ಅಲ್ಲಾಹನಿಗೆ ಮೊರೆಯಿಟ್ಟು, ''ಓ ಭಾಗ್ಯಹೀನನೇ! ಒಪ್ಪಿಕೋ. ಅಲ್ಲಾಹನ ವಾಗ್ದಾನವು ಸತ್ಯವಾದುದು'' ಎನ್ನುತ್ತಾರೆ. ಆದರೆ ಅವನು, ''ಇವೆಲ್ಲ ಪೂರ್ವ ಕಾಲದ ಕಟ್ಟುಕತೆಗಳಾಗಿವೆ'' ಎನ್ನುತ್ತಾನೆ. ಯಾತನೆಯ ತೀರ್ಮಾನವು ಅನ್ವಯವಾಗಿರುವುದು ಇದೇ ಜನರ ಮೇಲೆ. ಇವರಿಗಿಂತ ಮೊದಲು ಗತಿಸಿರುವ (ಇದೇ ತರದ) ಯಕ್ಷ ಮತ್ತು ಮಾನವರ ಹಿಂಡುಗಳ ಸಾಲಿಗೆ ಇವರೂ ಸೇರಿಕೊಳ್ಳುವರು. ನಿಸ್ಸಂದೇಹವಾಗಿಯೂ ಇವರು ನಷ್ಟಕ್ಕೊಳಗಾದವರಾಗಿದ್ದಾರೆ. ಎರಡು ತಂಡಗಳ ಪೈಕಿ ಪ್ರತಿಯೊಂದು ತಂಡದವರಿಗೂ ಅವರವರ ಕರ್ಮಕ್ಕನುಸಾರವಾದ ಸ್ಥಾನವಿದೆ. ಅಲ್ಲಾಹನು ಅವರಿಗೆ ಅವರ ಕರ್ಮಗಳ ಪರಿಪೂರ್ಣ ಪ್ರತಿಫಲ ನೀಡುವಂತಾಗಲಿಕ್ಕಾಗಿ ಅವರ ಮೇಲೆ ಖಂಡಿತ ಅನ್ಯಾಯವಾಗದು.'' (ಅಲ್‌ಅಹ್ ಕಾಫ್: 15-19)

ಸಚ್ಚರಿತರಾದ ಸಂತಾನಗಳು ಮಾತಾಪಿತರ ಪಾಲಿಗೆ ಇಹಪರಗಳಲ್ಲಿ ಅನುಗ್ರಹವಾಗಿ ದ್ದಾರೆ. ಅವರು ಭೂಮಿಯ ಮೇಲೆ ಸಂತೋಷ, ಸಂತೃಪ್ತಿಯನ್ನು ಒದಗಿಸುತ್ತಾರೆ. ಗೌರವಾಭಿಮಾನ ವನ್ನು ಬೆಳೆಸುತ್ತಾರೆ. ಜೀವನವನ್ನು ಆಹ್ಲಾದಭರಿತಗೊಳಿಸಿ, ಅಲಂಕಾರವನ್ನಾಗಿ ಮಾಡುತ್ತಾರೆ. **''ಈ ಸೊತ್ತು ಮತ್ತು ಈ ಸಂತತಿಗಳು ಕೇವಲ ಲೌಕಿಕ ಜೀವನದ ಕ್ಷಣಿಕ ಸೊಬಗು ಮಾತ್ರ.''** (ಅಲ್‌ಕಹ್ಫ್:46) ಪ್ರತಿಯೊಬ್ಬ ತಂದೆ-ತಾಯಿಯೂ ಸಚ್ಚರಿತರಾದ ಮಕ್ಕಳ ಸಾಮೀಪ್ಯವನ್ನು ಬಯಸುತ್ತಾರೆ. ಪ್ರತಿಯೊಂದು ಮನೆಗೂ ಅವರು ಅಲಂಕಾರವಾಗಿರುತ್ತಾರೆ. ಅಂತಹ ಮಕ್ಕಳು ಮಾತಾಪಿತರಿಗೆ ಮನಶ್ಶಾಂತಿಯನ್ನು ಒದಗಿಸುತ್ತಾರೆ. ಅವರ ಕಣ್ಮನಗಳನ್ನು ತಣಿಸುತ್ತಾರೆ. ಆದ್ದರಿಂದಲೇ ತಮ್ಮ ಮಕ್ಕಳು ಸಚ್ಚಾರಿತ್ರ್ಯವಂತರಾಗಲು ಪ್ರಾರ್ಥಿಸಬೇಕೆಂದು ಇಸ್ಲಾಮ್ ಬಯಸುತ್ತದೆ.

ಒಳ್ಳೆಯ ಮಕ್ಕಳು ಭೂಮಿಯ ಮೇಲೆ ಒಳ್ಳೆಯ ಹೆಸರು ನೀಡುವಂತೆಯೇ ಪರಲೋಕದ ಪ್ರತಿಫಲವನ್ನೂ ಹೆಚ್ಚಿಸುತ್ತಾರೆ. ಮಕ್ಕಳ ಸತ್ಕರ್ಮಗಳು ಹಾಗೂ ಪ್ರಾರ್ಥನೆಗಳು ಮಾತಾಪಿತರ ಸತ್ಕರ್ಮಗಳ ಹೆಚ್ಚಳಕ್ಕೆ ಕಾರಣವಾಗುತ್ತದೆ. ಸಜ್ಜನ ಮಕ್ಕಳು ಮರಣದ ಬಳಿಕವೂ ಭೂಮಿಯ ಮೇಲೆ ಉಳಿಯುವ ಸತ್ಕರ್ಮಗಳಾಗಿದ್ದಾರೆ ಎಂದು ಪ್ರವಾದಿಯವರು(ಸ) ಕಲಿಸಿದ್ದಾರೆ.

''ಮಾನವ ಮರಣ ಹೊಂದಿದಾಗ ಆತನ ಕರ್ಮಗಳೆಲ್ಲವೂ ಅವನಿಂದ ಬೇರ್ಪಡುತ್ತವೆ. ಶಾಶ್ವತ ದಾನ, ಪ್ರಯೋಜನಕಾರಿಯಾದ ವಿದ್ಯೆ, ಅವನಿಗಾಗಿ ಪ್ರಾರ್ಥಿಸುವ ಮಕ್ಕಳು- ಈ ಮೂರರ ಹೊರತು.''

ಇಂತಹ ಸಜ್ಜನರಾದ ಮಕ್ಕಳು ಸ್ವರ್ಗದಲ್ಲಿ ಮಾತಾಪಿತರನ್ನು ಸಂಧಿಸಿ ಒಂದಾಗಿ ಬಾಳಲು ಅವಕಾಶ ಒದಗಿಸುತ್ತಾರೆ. ಅಲ್ಲಾಹನು ತಿಳಿಸುತ್ತಾನೆ: **''ಸತ್ಯವಿಶ್ವಾಸಿಗಳನ್ನೂ, ವಿಶ್ವಾಸದ ಯಾವ ಮಟ್ಟದಲ್ಲಾದರೂ ಅವರನ್ನು ಅನುಸರಿಸಿದ ಅವರ ಸಂತಾನಗಳನ್ನೂ ನಾವು ಸ್ವರ್ಗದಲ್ಲಿ ಅವರೊಂದಿಗೆ ಸೇರಿಸುವೆವು ಮತ್ತು ಅವರ ಕರ್ಮದಲ್ಲೇನೂ ಅವರಿಗೆ ಕೊರತೆ ಮಾಡಲಾರೆವು. ಪ್ರತಿಯೊಬ್ಬನೂ ತನ್ನ ದುಡಿಮೆಯ ಬದಲಿಗೆ ಅಡವಾಗಿದ್ದಾನೆ. ನಾವು ಅವರಿಗೆ ಎಲ್ಲ ತರದ ಫಲವನ್ನೂ, ಮಾಂಸವನ್ನೂ, ಅವರ ಮನಸ್ಸು ಇಷ್ಟಪಡುವಂತಹದ್ದೆಲ್ಲವನ್ನೂ ಧಾರಾಳವಾಗಿ ಕೊಡುತ್ತಲೇ ಇರುವೆವು. ಅವರು ಪರಸ್ಪರರಿಂದ ಪಾನ ಪಾತ್ರೆಗಳನ್ನು ತೆಗೆದುಕೊಳ್ಳುವರು. ಅಸಂಬದ್ಧ ಮಾತಾಗಲಿ, ದುರ್ನಡೆಯಾಗಲಿ ಅವರಲ್ಲಿರಲಾರದು. ಅವರಿಗಾಗಿಯೇ ಮೀಸಲಿರುವ ಬಾಲಕರು ಅವರ ಸೇವೆಗಾಗಿ ಧಾವಿಸುತ್ತಿರುವರು. ಅವರು ಬಚ್ಚಿಟ್ಟ ಮುತ್ತಿನಂತೆ ಸುಂದರರಾಗಿರುವರು.''** (ಅತ್ತೂರ್: 21-24)

ಆದರೆ ದುರಾಚಾರಿ (ದುಷ್ಟ) ಮಕ್ಕಳು ಮಾತಾಪಿತರಿಗೆ ಯಾವಾಗಲೂ ಶಾಪವಾಗಿರು ತ್ತಾರೆ. ಅವರ ಅಸಮಾಧಾನಕ್ಕೂ ದುಃಖಕ್ಕೂ ಕಾರಣವಾಗುತ್ತಾರೆ. ಮಾತಾಪಿತರಿಗೆ ಕೆಟ್ಟ ಹೆಸರು ತರುತ್ತಾರೆ. ಅವರ ಆತ್ಮಾಭಿಮಾನಕ್ಕೆ ಕುಂದುಂಟು ಮಾಡುತ್ತಾರೆ. ಕೆಟ್ಟ ಮಕ್ಕಳ

ಮಾತಾಪಿತರು ಪ್ರತಿದಿನವೂ ಬೆಂಕಿ ತಿಂದು ಜೀವಿಸುವವರಾಗಿರುತ್ತಾರೆ. ಅವರ ಮನಸ್ಸು ಸದಾ ಉರಿಯುತ್ತಿರುತ್ತದೆ. ಅಗ್ನಿ ಪರ್ವತದಂತೆ ಕುದಿಯುತ್ತಿರುತ್ತದೆ. ಪ್ರತಿದಿನ ಬೆಳಗಾಗುವಾಗ ತಮಗೆ ಎಂಹತ ವಿಪತ್ತನ್ನು ಮಕ್ಕಳು ತಂದೊಡ್ಡಬಹುದು ಎಂಬ ಆಶಂಕೆಯಲ್ಲಿರುತ್ತಾರೆ. ಜನರ ಮಧ್ಯೆ ಬೆರೆಯಲು, ಜನರನ್ನು ಭೇಟಿಯಾಗಲು ಅವರು ಬಹಳ ಕಷ್ಟಪಡುತ್ತಾರೆ. ಹೀಗೆ ಐಹಿಕ ಜೀವನವು ಅವರ ಪಾಲಿಗೆ ನರಕ ಸದೃಶವಾಗಿರುತ್ತದೆ. ಪರಲೋಕದಲ್ಲಿ ಅಂತಹ ಮಕ್ಕಳನ್ನು ಭೇಟಿಯಾಗಲು ಸಾಧ್ಯವಿಲ್ಲ, ಅವರು ನರಕ ಇಂಧನವಾಗಿರುತ್ತಾರಲ್ಲವೇ. ಮಕ್ಕಳು ಅನುಗ್ರಹ ಮತ್ತು ಶಾಪವಾಗುವ ಸಾಧ್ಯತೆಗಳಿರುವುದರಿಂದ ಇಸ್ಲಾಮ್ ಅವರ ಸಂರಕ್ಷಣೆಯನ್ನು ಕೇವಲ ನೈಸರ್ಗಿಕ ಭಾವನೆಗಳಿಗೆ ಬಿಟ್ಟು ಕೊಡುವುದಿಲ್ಲ, ಅದನ್ನು ಹೇಗೆ ನಿರ್ವಹಿಸಬೇಕೆಂದು ವಿವರಿಸಿಕೊಡುತ್ತದೆ. ಸಂತಾನ ಸಂರಕ್ಷಣೆಯು ಪುಣ್ಯ ಕಾರ್ಯವೂ, ಧಾರ್ಮಿಕ ಕರ್ತವ್ಯವೂ ಆಗಿದೆ. ಸಂತಾನವನ್ನು ಕಡೆಗಣಿಸುವುದು ಪಾಪವೂ, ಮರಣಾನಂತರ ಪರಲೋಕದಲ್ಲಿ ಶಿಕ್ಷಾರ್ಹ ಅಪರಾಧವೂ ಆಗಿದೆ.

ಮಕ್ಕಳಿಗೆ ಭೌತಿಕ ಸುಖ ಸೌಕರ್ಯಗಳನ್ನು ಒದಗಿಸಿಕೊಡಬೇಕೆಂದು ಇಸ್ಲಾಮ್ ಆದೇಶಿಸುತ್ತದೆ. ಅದಕ್ಕಾಗಿ ನಡೆಸುವ ಪ್ರಯತ್ನವು ಅಲ್ಲಾಹನ ಮಾರ್ಗದ ಖರ್ಚಾಗಿದೆಯೆಂದು ಕಲಿಸುತ್ತದೆ. ಕಅಬ್ ಬಿನ್ ಉಜ್‌ರಾ(ರ) ವರದಿ ಮಾಡುತ್ತಾರೆ: ''ಪ್ರವಾದಿಯವರ(ಸ) ಬಳಿಯಿಂದ ಓರ್ವ ವ್ಯಕ್ತಿ ಹಾದು ಹೋಗುತ್ತಿದ್ದನು. ಪ್ರವಾದಿಯವರ(ಸ) ಬಳಿ ಕುಳಿತಿದ್ದವರು ಅವನ ಪರಿಶ್ರಮ ಮತ್ತು ಉತ್ಸಾಹವನ್ನು ಕಂಡು ಹೀಗೆಂದರು- ಪ್ರವಾದಿವರ್ಯರೇ! ಅವನ ಈ ಪರಿಶ್ರಮ ಮತ್ತು ಉತ್ಸಾಹವು ಅಲ್ಲಾಹನ ಮಾರ್ಗದಲ್ಲಾಗಿರುತ್ತಿದ್ದರೆ ಎಷ್ಟು ಚೆನ್ನಾಗಿತ್ತು! ಪ್ರವಾದಿ(ಸ) ಹೇಳಿದರು- ಅವನು ತನ್ನ ಸಣ್ಣ ಸಣ್ಣ ಮಕ್ಕಳ ಉದರ ಪೋಷಣೆಗಾಗಿ ಈ ಪರಿಶ್ರಮ ನಡೆಸುತ್ತಿರುವವನೆಂದಾದರೆ ಅದು ಅಲ್ಲಾಹನ ಮಾರ್ಗದ ಪರಿಶ್ರಮವೆಂದೇ ಪರಿಗಣಿಸಲ್ಪಡುವುದು. ಅವನು ತನ್ನ ವಯೋವೃದ್ಧ ತಂದೆ-ತಾಯಿಗಳ ಪೋಷಣೆಗಾಗಿ ಪರಿಶ್ರಮಿಸುತ್ತಿದ್ದರೆ ಅದೂ ಅಲ್ಲಾಹನ ಮಾರ್ಗದಲ್ಲೆಂದು ಪರಿಗಣಿಸಲ್ಪಡುವುದು. ಅವನು ಯಾರ ಮುಂದೆಯೂ ಕೈ ಚಾಚುವಂತಾಗಬಾರದೆಂಬ ಸಂಕಲ್ಪದಿಂದ ಸ್ವತಃ ತನಗಾಗಿ ಪರಿಶ್ರಮಿಸಿದರೆ ಅದೂ ಅಲ್ಲಾಹನ ಮಾರ್ಗದ್ದೆಂದು ಪರಿಗಣಿಸಲ್ಪಡುವುದು. ಆದರೆ ಅವನ ಉದ್ದೇಶವು ಜನರ ಮುಂದೆ ತನ್ನ ಆರ್ಥಿಕ ಸುಸ್ಥಿತಿಯನ್ನು ಮೆರೆಯಬೇಕೆಂದೋ ಜನರಿಗೆ ತನ್ನ ಶ್ರೀಮಂತಿಕೆಯನ್ನು ಮೆರೆಯಬೇಕೆಂದೋ ಆಗಿದ್ದರೆ ಅವನ ಈ ಎಲ್ಲ ಪರಿಶ್ರಮಗಳೂ ಶೈತಾನನ ಮಾರ್ಗದಲ್ಲಿ ಎಂದು ಪರಿಗಣಿಸಲ್ಪಡುವುದು.

ಮಕ್ಕಳ ದೈಹಿಕ ಬೆಳವಣಿಗೆಗೆ ಪ್ರಯತ್ನಿಸುವಂತೆಯೇ, ಮಾನಸಿಕ ಮತ್ತು ಆಧ್ಯಾತ್ಮಿಕ ಬೆಳವಣಿಗೆಗೂ ಪ್ರಯತ್ನಿಸಬೇಕಾದುದು ಮಾತಾಪಿತರ ಕರ್ತವ್ಯವಾಗಿದೆ. ಅವರ ನಿರ್ಲಕ್ಷ್ಯ ದಿಂದಾಗಿ ಮಕ್ಕಳು ದುರಾಚಾರಿಗಳಾದರೆ ಅವರೂ ಪಾಪಿಗಳೂ, ಶಿಕ್ಷಾರ್ಹರೂ ಆಗಿರುತ್ತಾರೆ.

ಕೆಲವು ತಂದೆ-ತಾಯಿಗಳು ಎಷ್ಟೇ ಪ್ರಯತ್ನಪಟ್ಟರೂ ಮಕ್ಕಳು ಸರಿದಾರಿಗೆ ಬರಬೇಕೆಂದಿಲ್ಲ,

ಪ್ರವಾದಿ ನೂಹ್(ಅ)ರಿಂದ ಹಿಡಿದು ಸಜ್ಜನರಾದ ಹಲವಾರು ಮಂದಿಯ ಅನುಭವಗಳು ಇದಕ್ಕೆ ಸಾಕ್ಷಿಯಾಗಿವೆ. ನೂಹ್(ಅ) ಮಗನ ಬಗ್ಗೆ ಅಲ್ಲಾಹನು ರೀತಿ ಹೇಳುತ್ತಾನೆ: **''ಓ ನೂಹ್, ಅವನು ನಿನ್ನ ಕುಟುಂಬದವನಲ್ಲ. ಅವನೊಂದು ಕೆಟ್ಟುಹೋದ ಕಾರ್ಯ.''**

(ಸೂರಃ ಹೂದ್: 46)

ಆದರೆ ಕೆಲವರು ತಮ್ಮ ನಿರ್ಲಕ್ಷ್ಯದಿಂದಾಗಿ ಮಕ್ಕಳು ಪಥಭ್ರಷ್ಟರಾಗುವಾಗ ''ನೂಹ್(ಅ)ರಿಗೂ ದುಷ್ಟ ಮಗನಿದ್ದನಲ್ಲವೇ?'' ಎಂದು ಭಾವಿಸಿ ಸಮಾಧಾನ ಪಡುತ್ತಾರೆ. ಇದು ಸರಿಯಲ್ಲ, ಮಕ್ಕಳನ್ನು ಒಳ್ಳೆಯ ರೀತಿಯಲ್ಲಿ ಬೆಳೆಸಬೇಕಾದ ಕರ್ತವ್ಯವನ್ನು ಉತ್ತಮವಾಗಿ ನೆರವೇರಿಸಿದ ಬಳಿಕ ಅವರು ದಾರಿ ತಪ್ಪಿದರೆ ಮಾತ್ರ ಮಾತಾಪಿತರು ದೋಷಮುಕ್ತರಾಗುತ್ತಾರೆ.

❖❖❖❖

ಹಾಜಿರಾ ಮತ್ತು ಮರ್ಯಮ್ ಗಮನಾರ್ಹರಾದುದು

ಲೋಕದಲ್ಲಿ ಅತ್ಯಧಿಕ ಗಮನ ಸೆಳೆದ ಮಹಿಳೆ ಹಾಜಿರಾ ಆಗಿದ್ದಾರೆ. ಅತ್ಯಧಿಕ ಸ್ಮರಿಸಲ್ಪಡುವ ಹಾಗೂ ಅನುಕರಿಸಲ್ಪಡುವ ಮಹಿಳೆ ಕೂಡಾ ಅವರೇ ಆಗಿದ್ದಾರೆ. ಕುರ್‌ಆನಿನಲ್ಲಿ ಅವರ ಹೆಸರಿಲ್ಲ, ಆದರೆ ಅವರು ಹತ್ತಿದ ಎರಡು ಬೆಟ್ಟಗಳ ಹೆಸರಿದೆ. ಅವರ ಪಾದಸ್ಪರ್ಶವಾದ ಎರಡು ಬೆಟ್ಟಗಳು. ''ನಿಶ್ಚಯವಾಗಿಯೂ ಸಫಾ ಮತ್ತು ಮರ್ವಾಗಳು ಅಲ್ಲಾಹನ ಸಂಕೇತಗಳಲ್ಲಾಗಿರುತ್ತವೆ.'' (ಅಲ್‌ಬಕರಃ: 158). ಹಾಜಿರಾ ಸಫಾ-ಮರ್ವಾ ಬೆಟ್ಟಗಳನ್ನೇರಿದ್ದು ತಪಸ್ಸು ಮಾಡಲಿಕ್ಕಲ್ಲ, ಪ್ರಾರ್ಥನೆಗಳನ್ನು ಸಲ್ಲಿಸಲಿಕ್ಕೋ ಅಥವಾ ಇತರ ಆರಾಧನಾ ಕರ್ಮಗಳನ್ನು ನಿರ್ವಹಿಸಲಿಕ್ಕೋ ಅಲ್ಲ, ಬದಲಾಗಿ ತನ್ನ ಮಗುವಿನ ಬಾಯಾರಿಕೆಯನ್ನು ತಣಿಸಲು ನೀರನ್ನು ಹುಡುಕುವುದಕ್ಕಾಗಿತ್ತು. ಒಂದು ಮಗುವಿಗೆ ನೀರಿಗಾಗಿ ನಡೆಸಿದ ಈ ಘಟನೆಯನ್ನು ಲೋಕಾಂತ್ಯದವರೆಗಿನ ಮನುಷ್ಯರಿಗೆ ಆರಾಧನಾ ಕರ್ಮವಾಗಿ ನಿಶ್ಚಯಿಸಲ್ಪಡುವುದೆಂದರೆ ಕ್ಷುಲ್ಲಕ ವಿಷಯವೇನಲ್ಲ. ಹಾಜಿರಾರನ್ನು ಚರಿತ್ರೆಯಲ್ಲಿ ಅತ್ಯಧಿಕ ಸ್ಮರಿಸಲ್ಪಡಬೇಕಾದ ಸ್ತ್ರೀಯಾಗಿ ಮಾರ್ಪಡಿಸಲು ಕಾರಣವಾದ ಅಂಶ ಯಾವುದು? ಖಂಡಿತವಾಗಿಯೂ ಅವರ ಆತ್ಮಸ್ಥೈರ್ಯ, ಭರವಸೆ, ವಿಶ್ವಾಸದಾರ್ಢ್ಯತೆಗೆ ಇದರಲ್ಲಿ ಅತ್ಯಧಿಕ ಪಾತ್ರವಿದೆ. ಆದರೆ ಅವೆಲ್ಲಕ್ಕಿಂತಲೂ ಮುಖ್ಯವಾಗಿ (ಮಿಗಿಲಾಗಿ) ತನ್ನ ಮಾತೃತ್ವದ ಹೊಣೆಗಾರಿಕೆಯನ್ನು ಸುಂದರವಾಗಿ ನಿರ್ವಹಿಸಿದ ಶ್ರೇಯಸ್ಸು ಅದರಲ್ಲಿ ಅಡಕವಾಗಿದೆ. ಮರುಭೂಮಿಯಲ್ಲಿ, ಪತಿಯ ಗೈರು ಹಾಜರಿಯಲ್ಲಿ ಇಸ್ಮಾಈಲ್(ಅ)ರಿಗೆ ಉತ್ತಮ ಇಸ್ಲಾಮೀ ತರಬೇತಿ ನೀಡಿದರೆಂಬುದಕ್ಕೆ ಅವರ ಬಲಿದಾನದ ಸಂದರ್ಭವೇ ಸಾಕ್ಷಿಯಾಗಿದೆ. ಅಲ್ಲಾಹನ ಅನುಸರಣೆ ಮತ್ತು ತಂದೆ-ತಾಯಿಗಳ ವಿಧೇಯತೆಯಲ್ಲಿ ತನ್ನ ಕೊರಳನ್ನೇ ಒಡ್ಡಿದ ಧೀಮಂತ ಪುತ್ರನಿಗೆ ಜನ್ಮ ನೀಡಿ ಸಾಕಿ ಬೆಳೆಸಿದರೆಂಬುದೇ ಹಾಜಿರಾರು ಶ್ರೇಷ್ಠರೆನಿಸಿಕೊಳ್ಳಲು ಕಾರಣವಾಗಿದೆ. ಚರಿತ್ರೆಯಲ್ಲಿಯೇ ಅತ್ಯಧಿಕ ತ್ಯಾಗ-ಸಮರ್ಪಣೆಗೆ ಸಿದ್ಧನಾದ ಮಗನಿಗೆ ಜನ್ಮ ನೀಡಿ ಸಾಕಿ ಸಲಹುವುದೆಂದರೆ ಕ್ಷುಲ್ಲಕ ವಿಷಯವೇ? ಆ ಘಟನೆಯನ್ನು ಕುರ್‌ಆನ್ ಉಲ್ಲೇಖಿಸುವುದರ ಮೂಲಕ ಹಾಜಿರಾರಿಗೆ ಲಭಿಸಿದ ಅಂಗೀಕಾರ ಅತೀ ಮಹತ್ತರವಾದುದು.

''ಆ ಬಾಲಕನು ಅವರ ಜೊತೆ ದುಡಿಯುವ ಪ್ರಾಯಕ್ಕೆ ತಲುಪಿದಾಗ (ಒಂದು ದಿನ) ಇಬ್ರಾಹೀಮರು ಅವನೊಡನೆ, ''ಮಗೂ, ನಾನು (ಬಲಿಯರ್ಪಿಸಲಿಕ್ಕಾಗಿ) ನಿನ್ನ ಕೊರಳು

ಕೊಯ್ಯುತ್ತಿರುವುದನ್ನು ಕನಸಿನಲ್ಲಿ ಕಂಡೆನು. ಈಗ ನಿನ್ನ ಅಭಿಪ್ರಾಯವೇನೆಂದು ಹೇಳು ಎಂದರು. ಆಗ ಅವನು ''ಅಪ್ಪಾ ತಮಗೆ ಆಜ್ಞಾಪಿಸಲಾಗಿರುವುದನ್ನು ಮಾಡಿ ಬಿಡಿರಿ, ಅಲ್ಲಾಹನಿಚ್ಛಿಸಿದರೆ ತಾವು ನನ್ನನ್ನು ಸಹನೆಯುಳ್ಳವನಾಗಿ ಕಾಣುವಿರಿ'' ಎಂದನು. (ಸೂರಃಅಸ್ಸಾಫ್ಫಾತ್: 102)

ಇಂತಹ ಒಬ್ಬ ಧೀಮಂತ ಮಗನನ್ನು ಸಾಕಿ ಬೆಳೆಸಲು ಸಾಧ್ಯವಾದುದಕ್ಕಾಗಿ ಹಾಜಿರಾ ಚರಿತ್ರೆಯಲ್ಲಿ ಅತ್ಯಧಿಕ ಸ್ಮರಿಸಲ್ಪಡುವ ಮಹಿಳೆಯಾಗಿ ಮಾರ್ಪಟ್ಟರು.

ಅದೇ ರೀತಿಯಲ್ಲಿ ಪವಿತ್ರ ಕುರ್‌ಆನ್ ಹೆಸರೆತ್ತಿ ಹೇಳಿದ ಏಕೈಕ ಮಹಿಳೆ ಮರ್ಯಮ್ (ಅ) ಆಗಿದ್ದಾರೆ. ಪವಿತ್ರ ಕುರ್‌ಆನಿನಲ್ಲಿ ಅವರ ಹೆಸರಿನ ಒಂದು ಅಧ್ಯಾಯವೇ ಇದೆ. ಎಲ್ಲ ಕಾಲಗಳಲ್ಲಿಯೂ, ಎಲ್ಲ ಸ್ಥಳಗಳಲ್ಲಿಯೂ ಇರುವ ಸತ್ಯವಿಶ್ವಾಸಿಗಳಿಗೆ ಉತ್ತಮ ಮಾದರಿಯಾಗಿ ಕುರ್‌ಆನ್ ಅವರನ್ನು ಪರಿಚಯ ಪಡಿಸುತ್ತದೆ.

''ಮತ್ತು ಅವನು ಇಮ್ರಾನನ ಪುತ್ರಿ ಮರ್ಯಮರ ಉದಾಹರಣೆಯನ್ನೂ ಮುಂದಿಡುತ್ತಾನೆ. ಅವರು ತಮ್ಮ ಮಾನವನ್ನು ಕಾಪಾಡಿಕೊಂಡಿದ್ದರು. ತರುವಾಯ ನಾವು ಅವರೊಳಗೆ ನಮ್ಮ ಕಡೆಯಿಂದ ಆತ್ಮವನ್ನು ಊದಿದೆವು ಮತ್ತು ಅವರು ತಮ್ಮ ಪ್ರಭುವಿನ ಆದೇಶಗಳನ್ನೂ ಅವನ ಗ್ರಂಥಗಳನ್ನೂ ದೃಢೀಕರಿಸಿದ್ದರು ಮತ್ತು ಅವರು ಆಜ್ಞಾಪಾಲಕರಲ್ಲಾಗಿದ್ದರು.''

(ಸೂರಃ ಅತ್ತಹ್‌ರೀಮ್: 12)

ಪುರುಷ ಸ್ಪರ್ಶವಿಲ್ಲದೆ ಮಹಾನನಾದ ಈಸಾ(ಅ)ರನ್ನು ಗರ್ಭಧರಿಸಿ, ಹೆತ್ತು ಸಾಕಿ ಸಲಹಿದ ಮರ್ಯಮ್(ಅ)ರಿಗೆ ಅದರ ಹೆಸರಿನಲ್ಲಿ ಸಹಿಸಬೇಕಾಗಿ ಬಂದ ಸಂಕಷ್ಟಗಳೂ, ವೇದನೆಗಳೂ ಅವರ್ಣನೀಯವಾಗಿದೆ. ಮಾತೃ ಕರ್ತವ್ಯಗಳ ನಿರ್ವಹಣೆಯು ಎಷ್ಟು ಮಹತ್ತರವಾದುದು ಎಂಬುದನ್ನು ಈ ಇಬ್ಬರು ಮಹಿಳಾ ರತ್ನಗಳ ಅನುಭವವು ಸ್ಪಷ್ಟಪಡಿಸುತ್ತದೆ.

❖❖❖❖

ಮಕ್ಕಳೊಂದಿಗೆ ಕರುಣೆ ತೋರಿ

ಒಮ್ಮೆ ಅಕ್ರಅ್ ಬಿನ್ ಹಾಬಿಸ್(ರ) ಪ್ರವಾದಿಯವರ(ಸ) ಬಳಿಗೆ ಆಗಮಿಸಿದರು. ಆಗ ಪ್ರವಾದಿಯವರು(ಸ) ಅಲೀ(ರ)ಯವರ ಮಗ ಹಸನ್‌ರನ್ನು(ರ) ಮುದ್ದಿಸುತ್ತಿದ್ದರು. ಇದನ್ನು ಕಂಡು ಅಕ್ರಅ್‌ರಿಗೆ(ರ) ಆಶ್ಚರ್ಯವಾಯಿತು. ''ಪ್ರವಾದಿಯವರೇ! ತಾವೂ ಮಕ್ಕಳನ್ನು ಮುದ್ದಿಸುತ್ತಿರುವುದೇ? ನನಗೆ ಹತ್ತು ಮಂದಿ ಮಕ್ಕಳಿದ್ದಾರೆ. ಆದರೆ ನಾನೆಂದೂ ಅವರ ಪೈಕಿ ಯಾರನ್ನೂ ಮುದ್ದಿಸಿದ್ದಿಲ್ಲ!'' ಎಂದು ಹೇಳಿದರು. ಇದನ್ನು ಕೇಳಿ ಪ್ರವಾದಿ(ಸ) ಅವರತ್ತ ಕಣ್ಣೆತ್ತಿ ನೋಡುತ್ತಾ, ''ನಿಮ್ಮ ಮನದಲ್ಲಿ ಅಲ್ಲಾಹನು ಕರುಣೆ ಮತ್ತು ಅನುಕಂಪವನ್ನು ಇರಿಸದಿದ್ದರೆ ನಾನೇನು ಮಾಡಲಿ'' ಎಂದು ಉತ್ತರಿಸಿದರು.

ಇನ್ನೊಂದು ಸಂದರ್ಭದಲ್ಲಿ ಒಬ್ಬ ಗ್ರಾಮೀಣ ಅರಬನು ಪ್ರವಾದಿ ಸನ್ನಿಧಿಗೆ ಬಂದರು. ಅವರು ಕೇಳಿದರು, ''ನೀವು ಮಕ್ಕಳನ್ನು ಚುಂಬಿಸುತ್ತೀರಾ? ನಾವು ಅವರನ್ನು ಚುಂಬಿಸುವುದಿಲ್ಲ.'' ಆಗ ಪ್ರವಾದಿ(ಸ) ''ಅಲ್ಲಾಹನು ನಿಮ್ಮ ಹೃದಯದಿಂದ ಕರುಣೆಯನ್ನು ಕಿತ್ತುಕೊಂಡಿದ್ದರೆ ನಾನೇನು ಮಾಡಲಿ'' ಎಂದು ಹೇಳಿದರು.

ಮಕ್ಕಳೊಂದಿಗೆ ಸದಾ ಪ್ರೇಮ, ಕರುಣೆ, ಅನುಕಂಪ ಜನ್ಮಸಿದ್ಧವಾಗಿದೆ. ಮಾನವ ಪ್ರಕೃತಿಯಲ್ಲಿ ಅದು ರೂಢಮೂಲವಾಗಿದೆ. ಕಠಿಣ ಹೃದಯಿಗಳು ಮಾತ್ರ ಇದಕ್ಕೆ ಅಪವಾದವಾಗಿದ್ದಾರೆ. ಹುಟ್ಟುವ ಪ್ರತಿಯೊಂದು ಮಗುವಿಗೆ ಅಳುವುದಕ್ಕೆ ಮಾತ್ರ ಸಾಧ್ಯ. ಪರರ ಸಹಾಯವಿಲ್ಲದೆ ಜೀವಿಸಲು ಸಾಧ್ಯವಿಲ್ಲ, ದೀರ್ಘಕಾಲದ ಸಂರಕ್ಷಣೆ, ಪರರ ಸಹಾಯವು ಮನುಷ್ಯ ಮಕ್ಕಳಿಗೆ ಅನಿವಾರ್ಯವಾಗಿದೆ. ಪ್ರಕೃತಿ ದತ್ತವಾದ ಈ ಅಗತ್ಯ ನಿರ್ವಹಣೆಗಾಗಿ ಸಾಧ್ಯವಾಗುವ ರೀತಿಯಲ್ಲಿ ತಂದೆ-ತಾಯಿಗಳ ಮನಸ್ಸನ್ನು ಸಜ್ಜುಗೊಳಿಸಲಾಗಿದೆ. ಅವರ ಹೃದಯವು ಮಕ್ಕಳೊಂದಿಗೆ ಇರುವ ಕಾರುಣ್ಯದಿಂದ ತುಂಬಿ ತುಳುಕುವಂತಿರಬೇಕು. ಆದ್ದರಿಂದಲೇ ಪ್ರವಾದಿಯವರು(ಸ) ಈ ರೀತಿ ಹೇಳಿರುವರು, ''ಮಕ್ಕಳೊಂದಿಗೆ ಕರುಣೆ ತೋರದವನು ಮತ್ತು ಹಿರಿಯರನ್ನು ಗೌರವಿಸದವನು ನಮ್ಮವನಲ್ಲ.'' (ಅಬೂದಾವೂದ್, ತಿರ್ಮಿದಿ)

''ನೀವು ಮಕ್ಕಳನ್ನು ಪ್ರೀತಿಸಿರಿ. ಅವರೊಂದಿಗೆ ಕರುಣೆ ತೋರಿರಿ. ವಾಗ್ದಾನ ಮಾಡಿದರೆ ಪೂರೈಸಿರಿ. ನೀವು ಅವರಿಗೆ ಆಹಾರ ಕೊಡುತ್ತೀರೆಂಬುದಲ್ಲದೆ ಬೇರೇನೂ ಅವರಿಗೆ ಅರ್ಥ ಮಾಡಲು ಸಾಧ್ಯವಿಲ್ಲ.'' (ಅತ್ತಹಾವಿ)

ಒಮ್ಮೆ ಓರ್ವ ಮಹಿಳೆ ಆಯಿಶಾರ(ರ) ಬಳಿಗೆ ಬಂದರು. ಅವರು ಅವರಿಗೆ ಮೂರು ಖರ್ಜೂರ ಕೊಟ್ಟರು. ಆ ಮಹಿಳೆ ಎರಡನ್ನು ತನ್ನ ಇಬ್ಬರು ಹೆಣ್ಣು ಮಕ್ಕಳಿಗೆ ನೀಡಿದಳು. ಒಂದನ್ನು ತನಗಾಗಿ ತೆಗೆದಿರಿಸಿದಳು. ಆ ಹೆಣ್ಣು ಮಕ್ಕಳು ತಮ್ಮ ಖರ್ಜೂರವನ್ನು ತಿಂದ ಬಳಿಕ ತಾಯಿಯ ಕಡೆಗೆ ನೋಡಿದರು. ಅವರು ತನ್ನ ಕೈಯಲ್ಲಿರುವ ಖರ್ಜೂರವನ್ನು ಎರಡು ತುಂಡು ಮಾಡಿ ಇಬ್ಬರಿಗೂ ನೀಡಿದಳು. ಪ್ರವಾದಿ(ಸ) ಮನೆಗೆ ಬಂದಾಗ, ಆಯಿಶಾ(ರ) ನಡೆದ ಘಟನೆ ತಿಳಿಸಿದರು. ಇದನ್ನು ಕೇಳಿದ ಪ್ರವಾದಿಯವರು(ಸ) ಈ ರೀತಿ ಹೇಳಿದರು: ಅದರಲ್ಲಿ ಆಶ್ಚರ್ಯಪಡುವುದೇನಿದೆ? ಆ ಸ್ತ್ರೀ ತನ್ನ ಎರಡು ಮಕ್ಕಳೊಂದಿಗೆ ಕರುಣೆ ತೋರಿದ್ದಕ್ಕಾಗಿ ಅಲ್ಲಾಹನು ಅವರೊಂದಿಗೆ ಕರುಣೆ ತೋರಿದನು.

ನಮಾಝ್ ಇಸ್ಲಾಮಿನ ಅತ್ಯಂತ ಪ್ರಮುಖ ಆರಾಧನಾ ಕರ್ಮವಾಗಿದೆ. ಸಾವಿರಗಟ್ಟಲೆ ಜನರಿಗೆ ನಾಯಕತ್ವ ನೀಡಿ ನಮಾಝ್ ನಿರ್ವಹಿಸುವಾಗ ಯಾವುದಾದರೂ ಮಗು ಜೋರಾಗಿ ಅಳುವುದಾದರೆ ನಮಾಝನ್ನು ಸಂಕ್ಷಿಪ್ತಗೊಳಿಸಬೇಕು.

ಪ್ರವಾದಿ(ಸ) ಹೇಳಿದರು: ನಮಾಝ್ ದೀರ್ಘಗೊಳಿಸಬೇಕೆಂಬ ಉದ್ದೇಶದಿಂದ ನಾನು ಅದರಲ್ಲಿ ಪ್ರವೇಶಿಸುತ್ತೇನೆ. ಆಗ ನಾನು ಚಿಕ್ಕ ಮಗುವಿನ ಅಳು ಕೇಳುತ್ತೇನೆ. ತಾಯಿಗೆ ಕಷ್ಟವಾಗಬಹುದೆಂದು ಭಾವಿಸಿ ನಾನು ನಮಾಝನ್ನು ಸಂಕ್ಷಿಪ್ತಗೊಳಿಸುತ್ತೇನೆ. (ಬುಖಾರಿ) ನಮಾಝಿನಲ್ಲಿ ಕೂಡಾ ಮಕ್ಕಳು ಪ್ರವಾದಿಯವರ(ಸ) ಬೆನ್ನ ಮೇಲೆ ಹತ್ತಿ ಕುಳಿತುಕೊಳ್ಳುತ್ತಿದ್ದರು. ಅವರಿಗೆ ಕಷ್ಟವಾಗಬಾರದೆಂದು ಪ್ರವಾದಿ(ಸ) ಬಹಳ ಜಾಗ್ರತೆ ಪಾಲಿಸುತ್ತಿದ್ದರು.

ಶದ್ದಾದ್(ರ) ವರದಿ ಮಾಡುತ್ತಾರೆ: ಪ್ರವಾದಿ(ಸ) ಹಸನ್ ಅಥವಾ ಹುಸೈನ್‌ರನ್ನು ಎತ್ತಿಕೊಂಡು ಹೊರಟರು. ಮುಂದೆ ಬಂದು ಅವನನ್ನು ಕೆಳಗಿರಿಸಿದರು. ತರುವಾಯ ನಮಾಝ್ ನಿರ್ವಹಿಸಿದರು. ಅವರ(ಸ) ಸುಜೂದ್ ತುಂಬಾ ದೀರ್ಘವಾದಾಗ ನಾನು ತಲೆಯೆತ್ತಿ ನೋಡಿದೆ. ಪ್ರವಾದಿಯವರ(ಸ) ಬೆನ್ನ ಮೇಲೆ ಮಗು ಕುಳಿತುಕೊಂಡಿತ್ತು. ನಾನು ಸುಜೂದಿನೆಡೆಗೆ ಮರಳಿದೆ. ನಮಾಝಿನಿಂದ ವಿರಮಿಸಿದ ಬಳಿಕ ಜನರು ಕೇಳಿದರು: 'ಅಲ್ಲಾಹನ ಸಂದೇಶವಾಹಕರೇ(ಸ)! ತಾವು ನಮಾಝ್ ದೀರ್ಘಗೊಳಿಸಿದಿರಲ್ಲ?' ಆಗ ಪ್ರವಾದಿ(ಸ) ಹೇಳಿದರು: ''ನನ್ನ ಮಗು ಬೆನ್ನ ಮೇಲೇರಿ ಕುಳಿತಿತ್ತು. ಅವನ ಅಗತ್ಯ ಮುಗಿಯುವುದಕ್ಕಿಂತ ಮುಂಚೆ ಆವಸರ ಪಡುವುದು ನನಗೆ ಇಷ್ಟವಾಗಲಿಲ್ಲ'' (ಅಹ್ಮದ್, ನಸಾಈ)

ಪ್ರವಾದಿ(ಸ) ಮಕ್ಕಳನ್ನು ಅತಿಯಾಗಿ ಮುದ್ದಿಸಿ ಲಾಲಿಸುತ್ತಿದ್ದರು. ಅವರೊಂದಿಗೆ ಆಟವಾಡುತ್ತಿದ್ದರು. ಅನಸ್(ರ) ಹೇಳುತ್ತಾರೆ: ಮಕ್ಕಳೊಂದಿಗೆ ಕರುಣೆ ತೋರುವುದರಲ್ಲಿ ಪ್ರವಾದಿಯವರಿಗಿಂತ(ಸ) ಮಿಗಿಲಾದವರನ್ನು ನಾನು ಕಂಡಿಲ್ಲ. (ಮುಸ್ಲಿಮ್)

ಅನಸ್(ರ) ವರದಿ ಮಾಡಿರುತ್ತಾರೆ: ಪ್ರವಾದಿಯವರು(ಸ) ನಮ್ಮೊಂದಿಗೆ ಬೆರೆತು ಕೊಂಡಿರುತ್ತಿದ್ದರು. ನನಗೆ ಅಬೂ ಉಮೈರ್ ಎಂಬ ಸ್ತನಪಾನ ಸಂಬಂಧಿ ಸಹೋದರನಿದ್ದ. ಅವನಿಗೆ ನುಗೈರ್ ಎಂಬ ಹೆಸರಿನ ಒಂದು ರೋಗಿಯಾದ ಗುಬ್ಬಚ್ಚಿ ಇತ್ತು. ಪ್ರವಾದಿ(ಸ)

ಅಬೂ ಉಮೈರ್‌ನೊಂದಿಗೆ ಅತ್ಯಧಿಕ ಕರುಣೆ ತೋರುತ್ತಿದ್ದರು. ಅವನೊಂದಿಗೆ ಪ್ರವಾದಿ(ಸ) ಅಬೂ ಉಮೈರ್! ನಿನ್ನ ಗುಬ್ಬಚ್ಚಿ ಹೇಗಿದೆ? ಎಂದು ಕೇಳುವುದು ರೂಢಿಯಾಗಿತ್ತು. ಮನುಷ್ಯ ರಂತೆಯೇ ಇತರ ಜೀವಿಗಳೂ ತಮ್ಮ ಮರಿಗಳೊಂದಿಗೆ ಕರುಣೆ ತೋರುತ್ತವೆ. ಮಾನವನು ಕೂಡಾ ತನ್ನ ಕಾರುಣ್ಯವನ್ನು ಮಕ್ಕಳ ಮುಂದೆ ಪ್ರಕಟಪಡಿಸಬೇಕು. ಮಕ್ಕಳನ್ನು ಮುದ್ದಿಸಿ, ಲಾಲಿಸಿ, ಚುಂಬಿಸಿ, ಆಟವಾಡಿಸಬೇಕು. ಹಾಡು ಹಾಡಿಯೂ, ಕಥೆಗಳನ್ನು ಹೇಳಿಯೂ ಅವರ ಮನರಂಜಿಸಬೇಕು.

ಬಾಲ್ಯದಲ್ಲಿ ಮಾತಾಪಿತರು ಮಕ್ಕಳನ್ನು ಆದಷ್ಟು ತಮ್ಮ ಜೊತೆಯಲ್ಲೇ ಇರುವಂತೆ ನೋಡಿಕೊಳ್ಳಬೇಕು. ಮಡಿಲಲ್ಲಿರಿಸಿ, ಹತ್ತಿರ ಮಲಗಿಸಿ, ಹೆಗಲ ಮೇಲೇರಿಸಿ ಎತ್ತಿ ನಡೆಯಬೇಕು. ಈ ರೀತಿಯಾಗಿ ಮಕ್ಕಳು ತಂದೆ-ತಾಯಂದಿರ ಬಿಸಿ ಅರಿಯಬೇಕು. ತಂದೆ-ತಾಯಂದಿರು ಸದಾ ತಮ್ಮ ಜೊತೆಗಿರಬೇಕೆಂದು ಭಾವಿಸುವಷ್ಟು ಸಾಮೀಪ್ಯ ಹೊಂದಿರಬೇಕು. ಇಂದಿನ ಯಾಂತ್ರಿಕ ತೊಟ್ಟಿಲುಗಳು ಇವುಗಳಿಗೆ ತಡೆಯಾಗುತ್ತಿವೆ. ಅವು ಮಕ್ಕಳನ್ನು ಸ್ವಲ್ಪವೂ ಎತ್ತಿ ನಡೆಸದಂತಹ ಪರಿಸ್ಥಿತಿ ನಿರ್ಮಾಣ ಮಾಡುತ್ತಿವೆ. ಅವರಿಗೆ ಮಕ್ಕಳೊಂದಿಗಿರುವ ಕರುಣೆ ಯನ್ನು ಅನಭವಿಸಿ ತಿಳಿಯುವ ಅವಕಾಶದಿಂದ ವಂಚಿತಗೊಳಿಸುತ್ತದೆ. ತರುವಾಯ ಮಕ್ಕಳು ಮತ್ತು ತಂದೆ-ತಾಯಂದಿರ ಮಧ್ಯೆ ಅಂತರ ಉಂಟಾಗುತ್ತಿವೆ. ಮಾತ್ರವಲ್ಲದೆ, ಮಕ್ಕಳಲ್ಲಿ ಅನಿವಾರ್ಯವಾಗಿ ಇರಬೇಕಾದ ಸುರಕ್ಷತಾ ಭಾವನೆಯನ್ನು ಇಲ್ಲವಾಗಿಸಲು ಇದು ಕಾರಣ ವಾಗುತ್ತವೆ. ಇದರಿಂದಾಗಿ ಮಾನಸಿಕ ಸಮಸ್ಯೆಗಳು ಉದ್ಭವಿಸುತ್ತದೆ.

ಲೋಕವು ಎಷ್ಟೇ ಸಮಸ್ಯೆಗಳಿಂದ ನಲುಗುತ್ತಿದ್ದರೂ ತಮ್ಮೊಂದಿಗೆ ತಂದೆ-ತಾಯಂದಿರಿದ್ದಾರೆಂಬ ಸಮಾಧಾನ ಮಕ್ಕಳಿಗೆ ಅವರ ಪ್ರೇಮ ವಾತ್ಸಲ್ಯ ಪ್ರಕಟಣೆಯ ಮೂಲಕ ಅನುಭವಿಸಲು ಸಾಧ್ಯವಾಗಬೇಕು. ಇದು ಮಕ್ಕಳಲ್ಲಿ ಸುರಕ್ಷತಾ ಭಾವನೆಯನ್ನು ಬೆಳೆಸಿ, ಅವರನ್ನು ಮಾನಸಿಕ ಸಮಸ್ಯೆಗಳಿಂದ ಸಂರಕ್ಷಿಸುತ್ತದೆ.

❖❖❖❖

ಶಪಿಸುವ ತಾಯಂದಿರು

ಸ್ವಾರ್ಥ ಗುಣವು ಯಾವಾಗಲೂ ಮಾನವನಿಗೆ ತನ್ನ ಬಗ್ಗೆ ಮಾತ್ರ ಚಿಂತಿಸಲು ಪ್ರೇರೇಪಿಸುತ್ತದೆ. ಸದಾ ತನ್ನ ಕಡೆಗೆ ಮಾತ್ರ ಗಮನಹರಿಸಲು, ತನ್ನ ಸುಖ ಸೌಕರ್ಯಗಳ ಬಗ್ಗೆ ಮಾತ್ರ ಯೋಚಿಸಲು ಅದು ಕಾರಣವಾಗುತ್ತದೆ. ಇಂದು ಹೆಚ್ಚಿನವರು ಸ್ವಾರ್ಥಿಗಳಾಗಿ ಮಾರ್ಪಡುತ್ತಿದ್ದಾರೆ.

ಸ್ವಾರ್ಥವು ಮಾನವ ಮನಸ್ಸುಗಳಿಂದ ಕರುಣೆಯನ್ನು ಕಿತ್ತೆಸೆಯುತ್ತದೆ. ಅತಿಯಾಸೆ ಹಾಗೂ ಸ್ವಾರ್ಥದಿಂದಾಗಿ ಮಾನವನು ಸ್ವಂತ ಮಕ್ಕಳನ್ನೂ ಭಾರವೆಂದು ಪರಿಗಣಿಸುತ್ತಾನೆ. ಮಕ್ಕಳು ಬೇಡವೆಂದೋ ಅಥವಾ ಒಂದೋ, ಎರಡೋ ಮಕ್ಕಳು ಸಾಕೆಂದೋ ಭಾವಿಸುತ್ತಾನೆ. ಇಂದು ಸ್ವಂತ ಮಕ್ಕಳನ್ನು ಕೊಲ್ಲಲು ಹೇಸದ ಕರುಣೆಯಿಲ್ಲದ ತಂದೆ-ತಾಯಿಗಳಿಗೇನೂ ಕೊರತೆಯಿಲ್ಲ.

ದೂರದರ್ಶನ(ಟೆಲಿವಿಷನ್)ದಲ್ಲಿ ಧಾರಾವಾಹಿ ನೋಡುತ್ತಿರುವಾಗ ನಿದ್ರಿಸುತ್ತಿದ್ದ ಮಗು ಎದ್ದು ಅಳತೊಡಗಿದರೆ ತಾಯಿಯಲ್ಲುಂಟಾಗುವ ಮಾನಸಿಕ ಸ್ಥಿತಿ ಊಹಿಸಬಹುದಾಗಿದೆ. ಆಗ ಮಗುವನ್ನೆತ್ತಿ ಎದೆಹಾಲು ಕೊಡುವಾಗ ಅದಕ್ಕೆ ನಳ್ಳಿಯಿಂದ ನೀರು ಸುರಿಯುವ ಭಾವನಾತ್ಮಕ ಸಂಬಂಧ ಕೂಡ ಇರಲಾರದು ಅಥವಾ ಮಗು ಮಲಮೂತ್ರ ವಿಸರ್ಜನೆ ಮಾಡಿದರೆ ಅದನ್ನು ತೊಳೆಯುವಾಗ, ಕೆಲಸದಾಳು ತನ್ನ ಪಾತ್ರೆಗಳನ್ನು ತೊಳೆಯುವಾಗ ಉಂಟಾಗುವ ಹೃದಯ ಸಾಮೀಪ್ಯ ಕೂಡಾ ಇರಲಾರದು. ಕಾರುಣ್ಯರಹಿತವಾದ ಇಂತಹ ಕೃತ್ಯಗಳು ಮಾತೆಯಲ್ಲಿ ನೀರಸವನ್ನೂ, ಮಗುವಿನಲ್ಲಿ ಒಂದು ರೀತಿಯ ಅಸ್ವಸ್ಥತೆಯನ್ನೂ ಉಂಟು ಮಾಡುತ್ತದೆ.

ಯಾವುದಾದರೂ ಕೆಲಸದಲ್ಲಿ ನಿರತರಾಗಿರುವಾಗ ಅಳುವ ಮಕ್ಕಳನ್ನು ಶಪಿಸುವ ತಾಯಂದಿರಿಗೆ ಕೊರತೆಯೇನೂ ಇಲ್ಲ. ರಾತ್ರಿ ಎದ್ದು ನಿರಂತರವಾಗಿ ಮಗು ಅತ್ತರೆ ಈ ಮಗುವಿನಿಂದ ನಾನು ಸೋತೆ ಎಂದು ಹೇಳದ ತಂದೆ-ತಾಯಿಗಳೇ ವಿರಳ. ಆದರೆ, ಯಾವ ಕಾರಣಕ್ಕೂ ಮಕ್ಕಳನ್ನು ಈ ರೀತಿಯಾಗಿ ಶಪಿಸಬಾರದು. ತಾನು ಅನುಭವಿಸುವ ಸಂಕಷ್ಟದ ಭಾರವನ್ನು ಮಕ್ಕಳ ಮೇಲೆ ಹೊರಿಸಬಾರದು. ಸತ್ಯವಿಶ್ವಾಸಿ ಯಾವ ಸಂದರ್ಭದಲ್ಲೂ ತನ್ನ ಮಕ್ಕಳನ್ನು ಶಪಿಸಲಾರನೆಂದು ಪ್ರವಾದಿಯವರು(ಸ) ಕಲಿಸಿದ್ದಾರೆ. ತಾನು ಸಂಚರಿಸುತ್ತಿದ್ದ ಪ್ರಾಣಿಯನ್ನು ಶಪಿಸಿದ ಮಹಿಳೆಯೊಂದಿಗೆ ಪ್ರವಾದಿ(ಸ) ಬೇಸರ ವ್ಯಕ್ತಪಡಿಸಿ ಅದರಿಂದ ಕೆಳಗಿಳಿದು ನಡೆಯಲು

ಆಜ್ಞಾಪಿಸಿದರು. ಪ್ರಾಣಿಯನ್ನು ಶಪಿಸುವುದು ಕೂಡಾ ಮಹಾಪಾಪವೆಂದಾದರೆ ಇನ್ನು ಸ್ವಂತ ಮಕ್ಕಳನ್ನು ಶಪಿಸುವುದೆಂದರೆ?! ತಂದೆ-ತಾಯಿಗಳು ಚಿಕ್ಕ ಮಕ್ಕಳ ಮುಂದೆ ಯಾವಾಗಲೂ ಹಸನ್ಮುಖಿಗಳಾಗಿರಬೇಕು. ದುಃಖ, ಕೋಪ ಪ್ರಕಟಿಸಬಾರದು. ಮನಸ್ಸಿನಲ್ಲಿ ನೋವು, ಸಂಕಷ್ಟ ವಿದ್ವೇಷಗಳಿದ್ದರೂ ಮಕ್ಕಳಿಗೆ ಅದು ತಿಳಿಯಬಾರದು. ಮಾತಾಪಿತರನ್ನು ನೋಡುವುದೇ ಮಕ್ಕಳಿಗೆ ಸಂತೋಷದಾಯಕವಾಗಿರಬೇಕು. ಅವರ ಸ್ಪರ್ಶವು ಮುದ ನೀಡುವಂತಾಗಬೇಕು.

❖❖❖❖

ಬಾಲ್ಯವನ್ನು ಕಿತ್ತುಕೊಳ್ಳದಿರಿ

ಪ್ರಸಿದ್ಧ ಚಿಂತಕ ರುಸ್ಸೋ ಹೇಳುತ್ತಾರೆ: ''ವಾತ್ಸಲ್ಯಮಯಿಯಾದ ತಾಯಿಯೇ, ನಿನ್ನ ಮಗು ಬೀದಿ ಬದಿಯಲ್ಲಿ ಬೆಳೆಯುತ್ತಿರುವ ಗಿಡಗಳಂತೆ. ಬೀದಿಯಲ್ಲಿ ಮೇಯುವ ಜಾನುವಾರುಗಳು ಅದರ ಮನ-ಮಸ್ತಿಷ್ಕವನ್ನು ಕಚ್ಚಿ ತಿನ್ನಬಹುದು. ಆ ಮಗುವಿಗೆ ಅಂತಹ ವಿಪತ್ತು ಬಾಧಿಸದಿರಲು ಅದರ ಸುತ್ತಲೂ ಬೇಲಿ ಕಟ್ಟಬೇಕು.

ಆದ್ದರಿಂದ, ಮಗುವಿಗೆ 5 ವರ್ಷ ಪ್ರಾಯವಾಗುವ ವರೆಗೆ ಹೊಣೆಗಾರಿಕೆಯ ಪ್ರಜ್ಞೆಯೊಂದಿಗೆ ಪೋಷಿಸಿ ಬೆಳೆಸಬೇಕು. ಅದಕ್ಕೆ ನ್ಯಾಯವಾಗಿ ಸಿಗಬೇಕಾದ ಬಾಲ್ಯವು ನಷ್ಟವಾದರೆ ನಂತರ ಯಾರಿಗೂ ಅದನ್ನು ಮರಳಿಸಲು ಸಾಧ್ಯವಿಲ್ಲ. ಅತ್ಯಂತ ಸಂತೋಷವೂ, ಆಹ್ಲಾದಭರಿತವೂ ಆದ ಬಾಲ್ಯ ಕಾಲವು ಆ ಮೂಲಕ ಮಗುವಿಗೆ ನಷ್ಟವಾಗುತ್ತದೆ.''

ಮಗುವಿನ ಮನಸ್ಸು ಶೂನ್ಯವೂ, ಅತ್ಯಂತ ಪರಿಶುದ್ಧವೂ ಆಗಿದೆ. ಬಿಳಿ ಹಾಳೆಯಂತೆ ಬರೆಯುವುದೆಲ್ಲವೂ ಅದರಲ್ಲಿ ಅಚ್ಚೊತ್ತಲ್ಪಡುತ್ತದೆ. ಮಕ್ಕಳಿಗೆ ಬುದ್ಧಿ ವಿವೇಕವಿರುವುದಿಲ್ಲ. ಆದ್ದರಿಂದಲೇ ಸುತ್ತಮುತ್ತ ಕಾಣುವುದೆಲ್ಲವನ್ನೂ ಅದು ಅನುಕರಿಸುತ್ತವೆ. ಒಳಿತು-ಕೆಡುಕು, ಸರಿ-ತಪ್ಪು ಎಂಬ ವ್ಯತ್ಯಾಸವಿಲ್ಲದೆ ಜೀವನದಲ್ಲಿ ಅದನ್ನು ಅಳವಡಿಸುತ್ತದೆ. ಆದ್ದರಿಂದಲೇ ಮಾತಾಪಿತರು ಈ ಬಗ್ಗೆ ಜಾಗರೂಕರಾಗಿರಬೇಕು.

ಬಾಲ್ಯ ಕಾಲವು ಮಾನವ ಜೀವನದ ಅತ್ಯಂತ ಒಳ್ಳೆಯ ಕಾಲವಾಗಿದೆ. ಎಲ್ಲರೂ ಮಕ್ಕಳನ್ನು ಇಷ್ಟಪಡುತ್ತಾರೆ. ಅತ್ಯಧಿಕ ಶ್ರದ್ಧೆಯೊಂದಿಗೆ ಪರಿಪಾಲಿಸುತ್ತಾರೆ, ಮುದ್ದಿಸುತ್ತಾರೆ. ಮಕ್ಕಳಿಗೆ ಯಾವುದೇ ಕಟ್ಟುಪಾಡುಗಳಿಲ್ಲ. ಆದ್ದರಿಂದ ಬಾಲ್ಯ ಕಾಲವು ಅನಿಯಂತ್ರಿತವಾಗಿ ಜೀವಿಸಲು ಸಾಧ್ಯವಿದೆ. ನೋಡುಗರನ್ನು ಕಣ್ತಣಿಸುವುದರಿಂದ ಎಲ್ಲರೂ ಅವರನ್ನು ಅಪ್ಪಿಕೊಳ್ಳುತ್ತಾರೆ.

ದೌರ್ಭಾಗ್ಯವಶಾತ್, ಹೊಸ ಪೀಳಿಗೆಗೆ ಬಾಲ್ಯವು ಸಂಪೂರ್ಣವಾಗಿ ನಷ್ಟವಾಗುತ್ತಿದೆ. ವ್ಯಾಪಾರೀಕರಣಕ್ಕೆ ಬಲಿಯಾದ ಆಧುನಿಕ ಸಮಾಜವು ಮಕ್ಕಳನ್ನು ವ್ಯಾಪಾರೀ ಮನೋಭಾವದಿಂದ ನೋಡುತ್ತಿದೆ. ಭವಿಷ್ಯದಲ್ಲಿ ಹೆಚ್ಚು ಲಾಭ ತರುವ ರೀತಿಯಲ್ಲಿ ಬೆಳೆಸುವುದರಲ್ಲಿಯೇ ಹೆಚ್ಚಿನವರಿಗೆ ಆಸಕ್ತಿ. ಕಸಾಯಿಖಾನೆಗೆ ಪ್ರಾಣಿಗಳನ್ನು ಕೊಂಡು ಹೋಗುವಾಗ ಅದರ ಮಾಂಸ ಹೆಚ್ಚು ದೊರೆಯಲು ಅವುಗಳಿಗೆ ಕೃತಕ ಆಹಾರಗಳನ್ನು ತಿನ್ನಿಸುವಂತೆಯೇ ಮಕ್ಕಳಿಗೆ ಅದರ ಪ್ರಾಯ, ಸಾಮರ್ಥ್ಯ, ಏನನ್ನೂ ಪರಿಗಣಿಸದೆ ವಿದ್ಯಾಭ್ಯಾಸ ನೀಡುತ್ತಾರೆ.

ಜೀರ್ಣಿಸಲು ಸಾಧ್ಯವಾಗದ ಜ್ಞಾನವನ್ನು ಬಾಲ ಮನಸ್ಸುಗಳಲ್ಲಿ ತುರುಕಿಸುತ್ತಾರೆ. ಸಣ್ಣ ಪ್ರಾಯದಲ್ಲಿಯೇ ಇತರ ಭಾಷೆಗಳನ್ನು ತುಂಬಿಸುತ್ತಾರೆ. ಮಕ್ಕಳು ಗರ್ಭದಲ್ಲಿರುವಾಗಲೇ ಅದರ ಶಿಕ್ಷಣ ಸಂಸ್ಥೆ, ಸೀಟ್ ಖಾತರಿಪಡಿಸಿಕೊಳ್ಳಲಾಗುತ್ತದೆ. ಹೀಗೆ ಮಗು 2-3 ವರ್ಷ ಪ್ರಾಯವಾಗುವಾಗಲೇ ಅದರ ಶಿಕ್ಷಣ ಆರಂಭವಾಗುತ್ತದೆ. ಮನೆಯಲ್ಲಿ ಆಡಿ ನಲಿದಾಡ ಬೇಕಾದಂತಹ ಮಕ್ಕಳು ಪಂಜರದಂತಹ ಕ್ಲಾಸ್ ರೂಮುಗಳಲ್ಲಿ ಬಂಧಿಸಲ್ಪಡುತ್ತಾರೆ.

ಹೆಚ್ಚಿನ ತಾಯಂದಿರು ತಮ್ಮ ದುರಭಿಮಾನವನ್ನು ತೋರಿಸುವುದಕ್ಕಾಗಿ ತಮ್ಮ ಮಕ್ಕಳನ್ನು ಮೂರನೇ ವಯಸ್ಸಿನಲ್ಲಿ ನರ್ಸರಿಗಳಿಗೆ ಕಳುಹಿಸುತ್ತಾರೆ. ಆ ಹೆಸರಿನಲ್ಲಿ ಹಗಲಿನಲ್ಲಿ ಅವರ ಉಪದ್ರವದಿಂದ ಮುಕ್ತಿ ದೊರೆಯುತ್ತದೆ ತಾನೆ? ಹಗಲಿಡೀ ಕಲಿಕೆಯ ಕಾರಣದಿಂದ ಆಯಾಸಗೊಂಡು ರಾತ್ರಿ ನಿದ್ರೆ ಮಾಡುವುದರಿಂದ ಆಗಲೂ ಮಕ್ಕಳನ್ನು ನೋಡುವ ಭಾರ ಕಡಿಮೆಯಾಗಬಹುದಲ್ಲವೇ? ಹೆಚ್ಚಿನ ತಂದೆ-ತಾಯಂದಿರು ಮಕ್ಕಳು ಭವಿಷ್ಯದಲ್ಲಿ ಏನಾಗಬೇಕೆಂಬುದನ್ನು ತೀರ್ಮಾನಿಸುವಾಗ ಅವರ ಸಾಮರ್ಥ್ಯ-ಅಭಿರುಚಿಯನ್ನು ಸ್ವಲ್ಪವೂ ಪರಿಗಣಿಸುವುದಿಲ್ಲ. ಎಲ್ಲರೂ ತಮ್ಮ ಮಕ್ಕಳು ಇಂಜಿನಿಯರ್, ಡಾಕ್ಟರ್, ಉನ್ನತ ಉದ್ಯೋಗಸ್ಥನಾಗಬೇಕೆಂಬ ಚಿಂತೆಯಿಂದ ಅವರನ್ನು ಕೃತಕವಾಗಿ, ಯಾಂತ್ರಿಕ ರೂಪದಲ್ಲಿ ಬೆಳೆಸುತ್ತಾರೆ. ಅವರಿಂದ ಭಾವನೆಗಳನ್ನು ಕಿತ್ತೊಗೆಯಲಾಗುತ್ತದೆ. ಅತ್ಯಂತ ಪ್ರೀತಿ ಪಾತ್ರರ ಮರಣ ಕೂಡಾ ಅವರಲ್ಲಿ ಯಾವುದೇ ಬದಲಾವಣೆ ಉಂಟು ಮಾಡುವುದಿಲ್ಲ. ಅಷ್ಟಕ್ಕೂ ಅವರ ಮನಸ್ಸುಗಳು ನಿಶ್ಚಲವಾಗಿರುತ್ತದೆ. ಎಲ್ಲರೂ ತಮ್ಮ ಮಕ್ಕಳಿಗೆ ಭೌತಿಕ ಸುಖ-ಸೌಕರ್ಯಗಳನ್ನು ಒದಗಿಸುವುದರಲ್ಲಿ ಅತ್ಯಧಿಕ ಆಸಕ್ತಿ ತೋರಿಸುತ್ತಾರೆ. ಆದರೆ ಅದು ಅವರ ದೈಹಿಕ ಬೇಡಿಕೆ ಗಳನ್ನು ಮಾತ್ರ ಪೂರೈಸುತ್ತದೆಯೆಂಬ ವಾಸ್ತವಿಕತೆಯನ್ನು ಹೆಚ್ಚಿನವರು ಮರೆತು ಬಿಡುತ್ತಾರೆ. ಊರಿನ ಪ್ರಸಿದ್ಧ ಶಿಕ್ಷಣ ಸಂಸ್ಥೆಯಲ್ಲಿ ಸೀಟು ತೆಗೆದುಕೊಟ್ಟು, ಟ್ಯೂಷನ್‌ನ ವ್ಯವಸ್ಥೆ ಮಾಡಿ, ಅವರ ಅನ್ನಪಾನೀಯ, ಬಟ್ಟೆಬರೆ ಇತ್ಯಾದಿಗಳನ್ನು ಒದಗಿಸಿಕೊಟ್ಟರೆ ತಮ್ಮ ಕರ್ತವ್ಯ ಮುಗಿಯಿ ತೆಂಬುದೇ ಅವರ ಭಾವನೆ. ಆದರೆ, ತಂದೆ-ತಾಯಂದಿರ ಪ್ರೀತಿ ವಾತ್ಸಲ್ಯ, ಸಂರಕ್ಷಣೆ ದೊರಕದೆ ಪುಟ್ಟ ಮನಸ್ಸುಗಳಿಗೆ ಸಂತೃಪ್ತಿ, ಸಮಾಧಾನ ಲಭಿಸದು.

ಮಕ್ಕಳ ಬಾಲ್ಯವನ್ನು ಕಸಾಯಿ ಮಾಡಿ, ಅವರನ್ನು ಕೋಳಿ ಮಾಂಸದಂತೆ ಕೃತಕವಾಗಿ ಬೆಳೆಸುವ ತಂದೆ-ತಾಯಿಗಳು ಕರುಣೆಗೋ, ಕ್ಷಮೆಗೋ ಅರ್ಹರಲ್ಲ. ಇಂತಹವರು ಶಿಶು ಹತ್ಯೆಯ ಹೊಸ ವಿಧಾನವನ್ನೇ ಸ್ವೀಕರಿಸಿದವರಾಗಿದ್ದಾರೆ. ಮಕ್ಕಳು ಯಾವುದೇ ರೀತಿಯ ಸವಾಲುಗಳನ್ನು ಎದುರಿಸುವ ಅವಕಾಶವನ್ನು ಒದಗಿಸದೆ ಮೂರನೇ ವಯಸ್ಸಿನಿಂದ ವಿದ್ಯಾಲಯಗಳ ಗೋಡೆಗಳ ಮಧ್ಯೆ ಬಂಧಿಸಿಡುವವರು ವಾಸ್ತವದಲ್ಲಿ ಮಕ್ಕಳನ್ನು ನಷ್ಟಕ್ಕೊಳಪಡಿಸುತ್ತಿದ್ದಾರೆ. ಈ ರೀತಿಯಲ್ಲಿ ಬೆಳೆಯುವ ಮಕ್ಕಳು ಸಾಮಾನ್ಯ ಸವಾಲುಗಳನ್ನೇ ಎದುರಿಸಲು ಸಾಧ್ಯವಾಗದೆ ಪರದಾಡುತ್ತಾರೆ. ಕೆಲವರಂತೂ ಆತ್ಮಹತ್ಯೆ ಮಾಡುತ್ತಾರೆ. ಹೆಚ್ಚಿನವರು ಮದ್ಯ, ಮಾದಕ ವ್ಯಸನಿಗಳಾಗಿ ಜೀವನವನ್ನು ಕೊಲ್ಲುತ್ತಾರೆ.

ಆದ್ದರಿಂದ ಬಾಲ್ಯವನ್ನು ತಾಯಂದಿರೊಂದಿಗೆ ಕಳೆಯಲು ಮಕ್ಕಳಿಗೆ ಅವಕಾಶ ಮಾಡಿಕೊಡಬೇಕು. ಅವರ ಚಾರಿತ್ರ್ಯ ನಿರ್ಮಾಣ, ನೈಸರ್ಗಿಕ ಸಾಮರ್ಥ್ಯಗಳ ಬೆಳವಣಿಗೆಗೆ ಮಾತಾಪಿತರ ಸಾಮೀಪ್ಯ ಅತೀ ಅಗತ್ಯವಾಗಿದೆ. ಬಾಲ್ಯದಲ್ಲಿ ಮಾತಾಪಿತರಿಂದ ದೂರವುಳಿದವರು ಒಂದು ರೀತಿ ಅಸುರಕ್ಷಿತತೆಗೂ, ಮಾನಸಿಕ ದೌರ್ಬಲ್ಯಗಳಿಗೂ ಬಲಿಯಾಗುತ್ತಾರೆ. ''ಮಕ್ಕಳೊಂದಿಗೆ ಕರುಣೆ ತೋರದವರೊಂದಿಗೆ ಅಲ್ಲಾಹನು ಕರುಣೆ ತೋರುವುದಿಲ್ಲ'' ಎಂಬ ಪ್ರವಾದಿ ವಚನವನ್ನು ಅರ್ಥಮಾಡಿದವರಿಗೆ ಮಕ್ಕಳಿಂದ ಅವರ ಬಾಲ್ಯವನ್ನು ಕಿತ್ತುಕೊಳ್ಳಲು ಖಂಡಿತ ಸಾಧ್ಯವಿಲ್ಲ.

❖❖❖❖

ಮಕ್ಕಳೊಂದಿಗೆ ಮಕ್ಕಳಂತಾಗಿರಿ

ನನಗೆ ಈಗ ಮೂರು ಮೊಮ್ಮಕ್ಕಳಿದ್ದಾರೆ. ಎಲ್ಲರೂ 5 ವಯಸ್ಸಿಗಿಂತ ಕೆಳಗಿನವರು. ನಾನು ಮನೆಗೆ ಹೋದ ಕೂಡಲೇ ಅವರು ಓಡಿ ಬರುತ್ತಾರೆ. ಆಟವಾಡಲು ಕರೆಯುತ್ತಾರೆ. ಚೆಂಡಾಟ ಇಲ್ಲವೇ ಕಲ್ಲು ಬಿಸಾಡಿ ಆಡಬೇಕು. ಏನಿದ್ದರೂ ಏನು ಆಡಬೇಕೆಂದು ಅವರು ತೀರ್ಮಾನಿಸುತ್ತಾರೆ. ಎಷ್ಟೇ ನಿಬಿಡತೆಯಿದ್ದರೂ ಅವರೊಂದಿಗೆ ಆಟವಾಡಬೇಕು. ಹಿರಿಯರ ನಿಬಿಡತೆಯ ಬಗ್ಗೆ ಅವರಿಗೇನು ಗೊತ್ತು. ಕಾರಣಾಂತರದಿಂದ ಆಡಲು ಹೋಗದಿದ್ದರೆ ಜಗಳ ಮಾಡುತ್ತಾರೆ. ಆದ್ದರಿಂದ ಮೊಮ್ಮಕ್ಕಳ ಆಹ್ವಾನವನ್ನು ನಾನು ನಿರಾಕರಿಸುವುದಿಲ್ಲ. 60 ವಯಸ್ಸು ದಾಟಿದ್ದರೂ ಅವರೊಂದಿಗೆ ಸ್ವಲ್ಪ ಸಮಯವಾದರೂ ಆಟವಾಡುತ್ತೇನೆ.

ಆಟದಲ್ಲಿ ನಾವು ಸೋಲೊಪ್ಪಿಕೊಂಡರೆ ಮಕ್ಕಳಿಗೆ ಬಹಳ ಸಂತೋಷ. ಸಣ್ಣ ಪ್ರಾಯವಾದರೂ ಸೋಲುವುದೆಂದರೆ ಮಕ್ಕಳಿಗೆ ಬಹಳ ಕಷ್ಟ. ಆದ್ದರಿಂದ ಹೆಚ್ಚಿನ ಸಂದರ್ಭಗಳಲ್ಲಿ ಸೋಲೊಪ್ಪಿಕೊಳ್ಳುತ್ತೇನೆ. ಕೆಲವೊಮ್ಮೆ ಅವರನ್ನು ಸೋಲಿಸುತ್ತೇನೆ. ಗೆಲ್ಲುವ ಅಭ್ಯಾಸ ವಿದ್ದರೆ ಮಾತ್ರ ಸಾಲದು. ಸೋಲುವುದನ್ನೂ ಕಲಿಯಬೇಕಲ್ಲವೇ? ಅನ್ಯಥಾ ಭವಿಷ್ಯದಲ್ಲಿ ಸೋಲನ್ನು ಸಹಿಸುವ ಧೈರ್ಯವಿರಲಾರದು. ಜೀವನದಲ್ಲಿ ಜಯಾಪಜಯಗಳು ಬದಲಾಗುತ್ತಿರುತ್ತವೆ. ಚಿಕ್ಕ ಮಕ್ಕಳು ನಮ್ಮ ಜೊತೆಯಲ್ಲಿರುವಾಗ ನಾವು ಕೂಡಾ ಮಕ್ಕಳಂತಾಗಬೇಕು. ಒಂದು ಹದೀಸ್ ಈ ರೀತಿ ಇದೆ: ''ಯಾರಾದರೂ ಮಕ್ಕಳ ಜೊತೆಗಿದ್ದರೆ ಅವರು ಕೂಡಾ ಸಣ್ಣ ಮಗುವಿನಂತಾಗಬೇಕು.''

ಪ್ರವಾದಿಯವರು(ಸ) ಹೇಳಿರುವರು: ''ನೀವು ನಿಮ್ಮ ಸಂತಾನಗಳೊಂದಿಗೆ ನಿರಂತರ ಸಂಬಂಧವಿರಿಸಿ ಅವರಲ್ಲಿ ಸಚ್ಚಾರಿತ್ರ್ಯವನ್ನು ಬೆಳೆಸಿರಿ.''

ಮಕ್ಕಳು ಸಚ್ಚಾರಿತ್ರ್ಯವಂತರಾಗಬೇಕಾದರೆ ನಮ್ಮಲ್ಲಿ ಸಚ್ಚಾರಿತ್ರ್ಯವನ್ನು ಬೆಳೆಸಬೇಕಾದುದು ಕಡ್ಡಾಯ. ಅವರು ನಮ್ಮನ್ನು ನೋಡಿ ಅನುಕರಿಸುತ್ತಾರೆ. ನಾವು ಕೇವಲ ಉಪದೇಶಕರಾಗುವುದಕ್ಕಿಂತ ಮಾದರಿಗಳಾಗಬೇಕು. ನಾವು ಏನಾಗಿರುತ್ತೇವೆಯೋ ಹಾಗಿರಬೇಕೆಂಬುದು ಮಕ್ಕಳ ಪ್ರಯತ್ನ. ನಮ್ಮಂತೆ ಅವರಾಗಲು ಪ್ರಯತ್ನಿಸುತ್ತಾರೆ. ಮಕ್ಕಳು ತಂದೆ-ತಾಯಿಗಳ ಪ್ರತಿಬಿಂಬಗಳಾಗಿದ್ದಾರೆ. ನಾವು ಹಿಂದಿನಿಂದ ನಡೆಯುವ ಮಕ್ಕಳನ್ನು ಮುಂದೆ ಹೋಗಲು ಹೇಳುವ ಏಡಿ ಮಾದರಿಯ ಉಪದೇಶಕರಾಗಬಾರದು. ಮಾದರಿಯಾಗದೆ ಉಪದೇಶ ಮಾತ್ರ

ನೀಡುವುದರಿಂದ ಮಕ್ಕಳಲ್ಲಿ ಅದು ಅಭ್ಯಾಸವಾಗಿ ಬಿಡುವುದು ಮಾತ್ರವಲ್ಲ, ಭವಿಷ್ಯದಲ್ಲಿ ಅವರು ಅದನ್ನು ತೊರೆಯಲು ಕಾರಣವಾಗುತ್ತದೆ. ಮಕ್ಕಳಿಗೆ ನಾವು ಉತ್ತಮ ಸ್ನೇಹಿತರಾಗಬೇಕು. ಅವರಿಗೆ ಏನು ಪ್ರಶ್ನಿಸಲೂ, ಹೇಳಲೂ ಸಾಧ್ಯವಿರುವಷ್ಟರ ಮಟ್ಟಿಗೆ ಅವರಿಗೆ ನಾವು ಹತ್ತಿರವಾಗಬೇಕು. ಹೆಚ್ಚಿನ ಸಮಯವನ್ನು ಅವರೊಂದಿಗೆ ಕಳೆಯಬೇಕು.

ಬೇಡದವುಗಳು ಸಣ್ಣ ಪ್ರಾಯದಲ್ಲಿ ಮಕ್ಕಳ ಮುಂದೆ ಬೇಡದವುಗಳ ಎಂಬ ಪಟ್ಟಿಗಳನ್ನು ಸಮರ್ಪಿಸಬಾರದು. ಅವರು ಅಪ್ರಿಯ ಕಾರ್ಯಗಳನ್ನು ಮಾಡುವಾಗ ಆದರಿಂದ ಅವರ ಗಮನವನ್ನು ಬೇರೆಡೆಗೆ ತಿರುಗಿಸಲು ಅದಕ್ಕಿಂತಲೂ ಆಕರ್ಷಕವಾದ ಕಾರ್ಯಗಳೆಡೆಗೆ ಅವರನ್ನು ತಿರುಗಿಸಬೇಕು. ಅನಿವಾರ್ಯವಾಗಿ ಗಮನ ತಪ್ಪಿಸಬೇಕಾದಂತಹ ಸಂದರ್ಭಗಳಲ್ಲಿ ಅದರ ದುಷ್ಪರಿಣಾಮಗಳ ಬಗ್ಗೆ ಅವರಿಗೆ ಮನವರಿಕೆ ಮಾಡಿಕೊಡಬೇಕು. ತಡೆಯುವುದನ್ನು ಮಾನವನು ಇಷ್ಟಪಡುವುದಿಲ್ಲ, ಸಣ್ಣ ಮಕ್ಕಳು ಅದನ್ನು ತೀವ್ರವಾಗಿ ವಿರೋಧಿಸುತ್ತಾರೆ. ಹೆಚ್ಚಿನ ಸಂದರ್ಭಗಳಲ್ಲಿ ಮಕ್ಕಳು ಅವರನ್ನು ತಡೆಯುವ ಕೆಲಸಗಳಲ್ಲಿ ಹೆಚ್ಚಿನ ಆಸಕ್ತಿ ತೋರುತ್ತಾರೆ.

ಮಕ್ಕಳು ಹೂಗಳು, ಬಣ್ಣಗಳು, ಚಿತ್ರಗಳು, ಆಟಿಕೆಗಳನ್ನು ಇಷ್ಟಪಡುತ್ತಾರೆ. ಅವರ ಗಮನಸೆಳೆಯಲು ಇಂತಹ ವಸ್ತುಗಳನ್ನು ಅವರಿಗೆ ದೊರಕಿಸಿಕೊಡುವುದು ಪ್ರಯೋಜನಕಾರಿಯಾಗಿದೆ. ಏನಿದ್ದರೂ ಆದೇಶಗಳನ್ನು ಗರಿಷ್ಠ ಬಿಟ್ಟು ಬಿಡುವುದು ಒಳಿತು. ಮಕ್ಕಳು ಕಾರ್ಯ ನಿರತರಾಗಿರುತ್ತಾರೆ. ಅವರಿಗೆ ಸುಮ್ಮನೆ ಕುಳಿತುಕೊಳ್ಳಲು ಸಾಧ್ಯವಿಲ್ಲ, ಆದ್ದರಿಂದ, ನಿರಂತರವಾಗಿ ಬೇರೆ ಬೇರೆ ಕೆಲಸಗಳಲ್ಲಿ ನಿರತರಾಗಲು ಅವರಿಗೆ ಅವಕಾಶಗಳನ್ನು ಒದಗಿಸಿಕೊಡಬೇಕು. ಸರಿಯಾದ ಕಾರ್ಯರಂಗ ಸಿಗದೇ ಹೋದಾಗ ಮಕ್ಕಳು ವಿಧ್ವಂಸಕ ಕೃತ್ಯಗಳಲ್ಲಿ ತೊಡಗುತ್ತಾರೆ.

ಅಶ್ಲೀಲ ಮಾತುಗಳನ್ನು ಕೇಳದಿರಲಿ

ಸಣ್ಣ ಪ್ರಾಯದಲ್ಲಿ ಮನೆಯಲ್ಲಿ ಕೆಟ್ಟ ಮಾತುಗಳನ್ನಾಡುವುದಕ್ಕೆ, ಅಶ್ಲೀಲ ಕೃತ್ಯಗಳನ್ನು ನೋಡುವುದಕ್ಕೆ ಅವಕಾಶ ಇರಬಾರದು. ಅದು ಕೇಳುವುದೆಲ್ಲವನ್ನೂ ಅರಗಿಸಿಕೊಳ್ಳುವ ಪ್ರಾಯವಾಗಿದೆ. ಮಾತಾಪಿತರು ಮಕ್ಕಳಿಗೆ ಆದರ್ಶರಾಗಬೇಕು.ಮನೆಯಲ್ಲಿ ಅವರು ಇಸ್ಲಾಮೀ ಸಂಸ್ಕೃತಿಗೂ, ಶಿಷ್ಟಾಚಾರಗಳಿಗೂ ಯೋಗ್ಯವಾದ ಪದಗಳನ್ನು ಬಳಸಬೇಕು. ಹಾಗೆಯೇ ಟೆಲಿವಿಷನ್‌ನಲ್ಲಿ ಅಶ್ಲೀಲ ದೃಶ್ಯಗಳನ್ನು ನೋಡಲು, ಅಶ್ಲೀಲ ಹಾಡುಗಳನ್ನು ಕೇಳಲು ಅವಕಾಶಗಳನ್ನು ಒದಗಿಸಬಾರದು.

ಮನೆಯಲ್ಲಿ ಸದಾ ಶಾಂತಿ-ಸಮಾಧಾನದ ವಾತಾವರಣ ನಿರ್ಮಾಣ ಮಾಡಲು ಮಾತಾಪಿತರು ಪ್ರಯತ್ನಿಸಬೇಕು. ಅವರ ಮಧ್ಯೆ ಎಷ್ಟೇ ದೊಡ್ಡ ಭಿನ್ನಾಭಿಪ್ರಾಯಗಳಿದ್ದರೂ ಮಕ್ಕಳ ಮುಂದೆ ಅದನ್ನು ಪ್ರಕಟಪಡಿಸುವುದಾಗಲಿ, ಅದಕ್ಕಾಗಿ ಜಗಳ ಮಾಡುವುದಾಗಲಿ ಮತ್ತು ಸಿಟ್ಟಾಗುವುದಾಗಲೀ ಸಲ್ಲದು. ಮನೆಯ ಶಾಂತಿ ಸಮಾಧಾನಕ್ಕೆ ಹಾಗೂ ಕುಟುಂಬದ ಸುಭದ್ರತೆಗೆ ಭಂಗತರುವ ಯಾವುದೇ ಕೃತ್ಯವು ಸಂಭವಿಸಲಾರದೆಂದು ಮಾತಾಪಿತರು

ದೃಢನಿಶ್ಚಯ ಮಾಡಬೇಕು ಅಥವಾ ಏನಾದರೂ ಪರಸ್ಪರ ಮಾತನಾಡಲಿಕ್ಕಿದ್ದರೆ ಮಕ್ಕಳು ನಿದ್ರಿಸಿದ ಬಳಿಕ ಅಥವಾ ಅವರ ಅನುಪಸ್ಥಿತಿಯಲ್ಲಿ ಮಾತನಾಡಬೇಕು. ಆಗ ಮಾತ್ರ ಮಕ್ಕಳು ಮಾನಸಿಕವಾಗಿಯೂ, ಬೌದ್ಧಿಕವಾಗಿಯೂ ಆರೋಗ್ಯವಂತರಾಗಿರುತ್ತಾರೆ.

ತಾಯಿಯು ತಂದೆಯ ಕುಂದು ಕೊರತೆಯ ಬಗ್ಗೆಯಾಗಲಿ, ತಂದೆಯು ತಾಯಿಯ ಕುಂದು ಕೊರತೆಯ ಕುರಿತಾಗಲೀ ಮಕ್ಕಳಲ್ಲಿ ಹೇಳಬಾರದು. ಹಾಗೆ ಮಾಡಿದರೆ ಇಬ್ಬರೂ ಕೆಟ್ಟವರೆಂದು ಮಕ್ಕಳು ತೀರ್ಮಾನಿಸುವರು. ಅದು ಅವರ ಸ್ವಭಾವ ಗುಣಗಳಲ್ಲಿ ದುಷ್ಪರಿಣಾಮ ಬೀರುವುದು. ತಂದೆ ಮಕ್ಕಳೊಂದಿಗೆ ತಾಯಿಯ ಬಗ್ಗೆ ಉತ್ತಮ ವಿಚಾರಗಳನ್ನು ಹೇಳಿದರೆ ಅದು ಮಕ್ಕಳಿಗೆ ತಾಯಿಯ ಮೇಲೆ ಪ್ರೀತಿ ಗೌರವ ಹೆಚ್ಚಾಗಲು ಕಾರಣವಾಗುತ್ತದೆ. ತಾಯಿ ಕೂಡಾ ತಂದೆಯ ಬಗ್ಗೆ ಇದೇ ರೀತಿಯ ದೃಷ್ಟಿಕೋನವನ್ನು ಹೊಂದಿರಬೇಕು. ಆಗ ಮಕ್ಕಳಿಗೆ ಇಬ್ಬರೊಂದಿಗೂ ಪ್ರೀತಿ, ಗೌರವ ಹೆಚ್ಚಾಗುವುದು. ಅದು ಅವರಲ್ಲಿ ಉತ್ತಮ ಗುಣಗಳು ಬೆಳೆಯಲು ಕಾರಣವಾಗುತ್ತದೆ.

ಇದಕ್ಕೆ ವ್ಯತಿರಿಕ್ತವಾಗಿ ಮನೆಯಲ್ಲಿ ಗುಲ್ಲು-ಗದ್ದಲಗಳಿದ್ದರೆ ಅಂತಹ ಕುಟುಂಬಗಳಲ್ಲಿ ಬೆಳೆಯುವ ಮಕ್ಕಳು ದುಷ್ಟರೂ, ಉಪದ್ರವಕಾರಿಗಳೂ ಆಗಿ ಬದಲಾಗುವ ಸಾಧ್ಯತೆ ಹೆಚ್ಚು. ಹೀಗಾದರೆ ಅದರ ಹೊಣೆಗಾರರು ಅವರ ತಂದೆ ತಾಯಿಗಳೇ ಆಗಿರುತ್ತಾರೆ ಅಥವಾ ಮನೆಯ ಅಶಾಂತ ವಾತಾವರಣ ಮಕ್ಕಳ ಸ್ವಭಾವವನ್ನು ಬಾಧಿಸದಿದ್ದರೂ ಅವರ ಬೌದ್ಧಿಕ ಬೆಳವಣಿಗೆ ಮತ್ತು ಕಲಿಕೆಗೆ ಪ್ರತಿಕೂಲ ಪರಿಣಾಮ ಬೀರುತ್ತದೆ. ಅತ್ಯುತ್ತಮ ಪ್ರಕೃತಿಯಲ್ಲಿ ಸೃಷ್ಟಿಸಲ್ಪಟ್ಟ ಮಕ್ಕಳನ್ನು ಕೆಡಿಸುವುದರಲ್ಲಿ ತಂದೆ-ತಾಯಿಗಳ ಪಾತ್ರದ ಬಗ್ಗೆ ಪ್ರವಾದಿ(ಸ) ಎಚ್ಚರಿಕೆ ನೀಡಿದ್ದಾರೆ. ಎಲ್ಲ ಮಕ್ಕಳು ಶುದ್ಧ ಪ್ರಕೃತಿಯಲ್ಲಿ ಹುಟ್ಟುತ್ತಾರೆಂದು ಪವಿತ್ರ ಕುರ್‌ಆನ್ ಮತ್ತು ಪ್ರವಾದಿ(ಸ) ಒತ್ತಿ ಹೇಳಿದ್ದಾರೆ. "ನಾವು ಮಾನವನನ್ನು ಅತ್ಯುತ್ತಮ ಪ್ರಕೃತಿಯಲ್ಲಿ ಸೃಷ್ಟಿಸಿರುತ್ತೇವೆ."

(ಸೂರಃ ಅತ್ತೀನ್: 4)

"ಪ್ರತಿಯೊಂದು ಮಗುವೂ ಶುದ್ಧ ಪ್ರಕೃತಿಯಲ್ಲಿ ಜನಿಸುತ್ತವೆ. ತರುವಾಯ ಅವನ ತಂದೆ-ತಾಯಿಗಳು ಅವನನ್ನು ಯಹೂದಿಯನ್ನಾಗಿಯೋ, ಕ್ರೈಸ್ತರನ್ನಾಗಿಯೋ, ಮಜೂಸಿಯನ್ನಾಗಿಯೋ ಮಾಡುತ್ತಾರೆ." (ಬುಖಾರಿ)

ಮಕ್ಕಳನ್ನು ಬೆಳೆಸುವುದರಲ್ಲಿ ತಂದೆ-ತಾಯಿಗಳ ಪಾತ್ರ ಏನು ಎಂಬುದನ್ನು ಇಲ್ಲಿ ವ್ಯಕ್ತಪಡಿಸಲಾಗಿದೆ. ಮನೆಯ ವಾತಾವರಣ ಅಲ್ಲಿ ಬೆಳೆದು ಬರುವ ಮಕ್ಕಳ ಮೇಲೆ ಅಗಾಧ ಪರಿಣಾಮ ಬೀರುತ್ತದೆಂಬುದು ಸ್ವಾಭಾವಿಕವಾಗಿದೆ.

ಎರಡನೆಯವನನ್ನು ಕಾಯುತ್ತಿರುವ ಮೊದಲಿಗ.

ಮಾತಾಪಿತರ ಮಧ್ಯೆ ಇರುವ ಉತ್ತಮ ಸಂಬಂಧದಂತೆಯೇ ಮಕ್ಕಳ ಮಧ್ಯೆ ಇರುವ ಸಂಬಂಧವೂ ಪರಮ ಪ್ರಧಾನವಾಗಿದೆ. ಮನೆಯ ಎಲ್ಲ ಸದಸ್ಯರ ಪ್ರೀತ್ಯಾದರಗಳು ಲಭಿಸುತ್ತಿದ್ದ

ಹಿರಿಯ ಮಗು ಇನ್ನೊಂದು ಮಗು ಬರುವುದನ್ನು ದ್ವೇಷಿಸುವ ಸಾಧ್ಯತೆಗಳಿವೆ. ಎರಡನೆ ಮಗುವಿನ ಗರ್ಭಧಾರಣೆಯಾದಾಗ ಜೊತೆಯಲ್ಲಿ ಆಟವಾಡಲು ಒಂದು ಮಗು ಬರಲಿಕ್ಕಿದೆಯೆಂಬ ನಿರೀಕ್ಷೆ ಮತ್ತು ಆನಂದವನ್ನು ಮಕ್ಕಳಲ್ಲಿ ಬೆಳೆಸಬೇಕು. ಎರಡನೇ ಮಗು ಹುಟ್ಟುವಾಗ ಅದನ್ನು ಶುಭ ನಿರೀಕ್ಷೆಯೊಂದಿಗೆ ಕಾದು ಕುಳಿತುಕೊಳ್ಳುವ ಸ್ಥಿತಿಯನ್ನು ಸೃಷ್ಟಿಸಬೇಕು. ಆಗ ಹೊಸತಾಗಿ ಕುಟುಂಬದಲ್ಲಿ ಬರುವ ಮಗುವನ್ನು ಸಂತೋಷದಿಂದ ಸ್ವಾಗತಿಸಲು, ತನ್ನ ಸ್ವಂತ ಮಗು ಎಂಬ ಪ್ರಜ್ಞೆ ಬೆಳೆಯಲು ಸಾಧ್ಯವಾಗುತ್ತದೆ. ತನ್ಮೂಲಕ ಇಬ್ಬರ ಮಧ್ಯೆ ಸ್ನೇಹ ಸಂಬಂಧ ಉಂಟಾಗುತ್ತದೆ.

ಮೂರನೇ, ನಾಲ್ಕನೇ ಮಗು ಜನಿಸುವಾಗ ಹಿರಿಯರೆಲ್ಲರೂ ಅದನ್ನು ಸಂತೋಷದಿಂದ ಸ್ವೀಕರಿಸುವ, ಸ್ವಾಗತಿಸುವ ಮಾನಸಿಕ ಸ್ಥಿತಿಯನ್ನು ಉಂಟುಮಾಡಲು ಇದೇ ವಿಧಾನವನ್ನು ಬಳಸಿದರೆ ಸಾಕಾಗುತ್ತದೆ. ಹೀಗೆ ಸುಭದ್ರ ಕುಟುಂಬ ಮತ್ತು ಶಾಂತಿಯ ನಿಕೇತನ ನಿರ್ಮಾಣವಾಗುತ್ತದೆ. ಇದನ್ನೇ ಇಬ್ಬರೂ ಬಯಸುತ್ತಾರೆ ಮತ್ತು ಅದನ್ನೇ ಕನಸು ಕಾಣುತ್ತಾರೆ.

❖❖❖❖

ಪ್ರೀತಿಯನ್ನು ಪ್ರಕಟಪಡಿಸಿರಿ

ಪ್ರೀತಿಯು ಜನ್ಮಸಿದ್ಧವಾಗಿದೆ. ಪ್ರೀತಿಸಬೇಕು ಮತ್ತು ಪ್ರೀತಿಸಲ್ಪಡಬೇಕೆಂಬ ಬಯಕೆಯಿಂದ ಯಾರೂ ಮುಕ್ತರಲ್ಲ. ಮನುಷ್ಯನ ಸಹಜವಾದ ಈ ಮೋಹವು ಸಫಲವಾಗುವಾಗ ಪ್ರತಿಯೊಬ್ಬರಿಗೂ ಮನಶ್ಶಾಂತಿ ಲಭಿಸುತ್ತದೆ. ಅದರ ಅಭಾವದಿಂದ ಅಂತರಂಗವು ಅಶಾಂತವಾಗಿರುತ್ತದೆ.

ಮಾನವಕುಲದ ಅಸ್ತಿತ್ವದ ಆಧಾರಸ್ಥಂಭ ಪ್ರೀತಿಯಾಗಿದೆ. ಅದನ್ನು ಪಡೆಯಲು ಹಂಬಲಿಸದವರು ಯಾರೂ ಇಲ್ಲ. ಇತರರಿಗೆ ಕೊಡಲು ಬಯಸದವರೂ ಕೂಡಾ ಇತರರಿಂದ ಇದನ್ನು ನಿರೀಕ್ಷಿಸುತ್ತಾರೆ. ಜೀವಂತವಿರಲು ಯಾವ ರೀತಿ ನೀರು ಅನಿವಾರ್ಯವೋ ಅದೇ ರೀತಿ ಮನುಷ್ಯ ಸಂಬಂಧಗಳನ್ನು ಜೋಡಿಸಲು ಪ್ರೀತಿಯು ಅತ್ಯಗತ್ಯವಾಗಿದೆ.

ಈ ಪ್ರೀತಿ ಹೃದಯದ ಬಾಗಿಲುಗಳನ್ನೇ ತೆರೆದಿಡಲು ಬೇಕಾದ ಕೀಲಿಕೈಯಾಗಿದೆ. ಹರಿತವಾದ ಆಯುಧಗಳಿಂದ ಅಧೀನಕ್ಕೊಳಪಡಿಸಲಾಗದವರನ್ನು ಕೂಡಾ ಪ್ರೀತಿಯ ಮೂಲಕ ಸಂಪೂರ್ಣ ಶರಣಾಗುವಂತೆ ಮಾಡಬಹುದು. ಬಲಪ್ರಯೋಗದಿಂದ ಒಬ್ಬರನ್ನು ಶಾರೀರಿಕವಾಗಿ ಮಟ್ಟ ಹಾಕಬಹುದು. ಆದರೆ, ಪ್ರೀತಿಯಿಂದ ಶರೀರ, ಮನಸ್ಸು ಮತ್ತು ಆತ್ಮದ ಮೇಲೆ ಹಿಡಿತ ಸಾಧಿಸಬಹುದು.

ಮನತುಂಬಾ ಪ್ರೀತಿಯೊಂದಿಗೆ ಜೀವಿಸಲು ಸಾಧ್ಯವಾದವರು ಸೌಭಾಗ್ಯಶಾಲಿಗಳಾಗಿದ್ದಾರೆ. ಅವರು ಇತರರೊಂದಿಗೆ ಮುಕ್ತವಾಗಿ ಹಂಚಿಕೊಳ್ಳುವುದರಿಂದ ಎಲ್ಲರೂ ಅವರ ಪ್ರೀತಿಯಿಂದ ಸಂತುಷ್ಟರಾಗುತ್ತಾರೆ. ಅಪರಾಧಿಗಳಿಗೆ ಅವರ ಅಪರಾಧಗಳನ್ನು ತಡೆಯಲು ಶಿಕ್ಷೆ ನೀಡಬೇಕೆಂದಿಲ್ಲ, ಅಲ್ಪಕಾಲದ ಶಿಕ್ಷೆ ಅವರನ್ನು ಅಪರಾಧಗಳಿಂದ ದೂರವುಳಿಯುವಂತೆ ಮಾಡಬಹುದು. ಆದರೆ, ಅವರನ್ನು ಮಾನಸಿಕವಾಗಿ ಪಶ್ಚಾತ್ತಾಪಕ್ಕೊಳಪಡಿಸಲು ಜೈಲುಗಳಿಗೋ, ಕಛೇರಿಗಳಿಗೋ ಸಾಧ್ಯವಿಲ್ಲ. ನಿಸ್ವಾರ್ಥ ಪ್ರೀತಿಯು ಅದ್ಭುತಕರವಾಗಿ ವಿಜಯ ಸಾಧಿಸುತ್ತದೆ.

ಹಾಗೆಯೇ ಪ್ರೀತಿಯ ಮುಖಗಳು ವಿಭಿನ್ನವಾಗಿವೆ. ತಂದೆ-ತಾಯಿ ಮತ್ತು ಮಕ್ಕಳ ನಡುವೆ ಇರುವ ಪ್ರೀತಿಯು ಅದರಲ್ಲಿ ಅತಿ ಪ್ರಮುಖವಾದುದು. ಯಾವುದೇ ಕಾಪಟ್ಯವಿಲ್ಲದ ನಿಷ್ಕಳಂಕ ಪ್ರೀತಿಯು ತಂದೆ-ತಾಯಿಗಳು ತಮ್ಮ ಮಕ್ಕಳಿಗೆ ಧಾರೆಯೆರೆಯುತ್ತಾರೆ. ಗರ್ಭಾಶಯದಲ್ಲಿ ಮಗುವಿನ ಜೀವನಾರಂಭದಿಂದ ಹಿಡಿದು ಮುಂದಿನ ಜೀವನದ ಎಲ್ಲ ಏಳು-ಬೀಳುಗಳಲ್ಲಿ ತಾಯಿಯು ನೀಡುವ ಆ ಪ್ರೀತಿಯು ವರ್ಣನಾತೀತವಾಗಿದೆ. ಮಗಳು

ಮದುವೆಯಾಗಿ ಕುಟುಂಬ ಜೀವನದಲ್ಲಿ ತಾಯಿಯಾದರೂ ಆಕೆಯ ಅಮ್ಮನ ಪಾಲಿಗೆ ಸದಾ ಪುಟ್ಟ ಮಗುವಾಗಿಯೇ ಇರುತ್ತಾಳೆ. ಎಷ್ಟೇ ವಯಸ್ಸಾದರೂ ಮಗಳು ತಾಯಿಗೆ ಸಣ್ಣ ಮಗುವೇ ಆಗಿರುತ್ತಾಳೆ. ತನ್ನ ಆರೋಗ್ಯಕ್ಕಿಂತಲೂ ಹೆಚ್ಚಾಗಿ ಮಗಳ ಅವಸ್ಥೆ ಹೇಗಿದೆಯೋ ಎಂಬುದೇ ತಾಯಿಯ ಚಿಂತೆಯಾಗಿರುತ್ತದೆ. ತನ್ನ ಮಗಳ ಮಕ್ಕಳು ಚೆನ್ನಾಗಿದ್ದಾರಾ, ಮಗನ ಹೆಂಡತಿ ಉಪಚರಿಸುತ್ತಿದ್ದಾಳಾ, ಅವನ ವ್ಯವಹಾರದಲ್ಲಿ ನಷ್ಟವಾಗಬಹುದಾ, ಅವನಿಗೆ ಬೇರೆ ಉದ್ಯೋಗ ಸಿಗಬಹುದಾ, ಉದ್ಯೋಗ ಹಿಡಿದವನಾಗಿದ್ದಲ್ಲಿ ಪ್ರಮೋಶನ್ ಸಿಗಬಹುದಾ ಎಂಬಿತ್ಯಾದಿ ಚಿಂತೆಗಳ ನಡುವೆ ತಾಯಿ ಮಕ್ಕಳ ಆಲೋಚನೆ ಬಿಟ್ಟರೆ ಬೇರೆ ವಿಶ್ರಾಂತಿಯ ಸಮಯ ಸಿಗುವುದೇ ಇಲ್ಲ. ವಾತ್ಸಲ್ಯ, ಶಿಕ್ಷಣ, ಸೇವೆ, ತ್ಯಾಗ ಇತ್ಯಾದಿಗಳಿಂದ ಪ್ರೀತಿಯು ಪುಟಿದೇಳುತ್ತದೆ. ಚಿಂತೆ, ವಿಚಾರಗಳಿಂದಾಗಿ ಅವರ ಮನಸ್ಸು ಸದಾ ಮಕ್ಕಳ ಸುತ್ತಲೂ ಹೆಣೆದುಕೊಂಡಿರುತ್ತದೆ.

ಅನುಭವಿಸಿ ತಿಳಿಯಲಿ:

ಮನದಲ್ಲಿ ಹುದುಗಿಟ್ಟ ಪ್ರೀತಿಯನ್ನು ಪ್ರಕಟಪಡಿಸಲು ಕೆಲವರು ತುಂಬಾ ಲೋಭ ತೋರುತ್ತಾರೆ. ಆದರೆ ಪ್ರೀತಿಯನ್ನು ಚಿಪ್ಪಿನೊಳಗಿನ ಮುತ್ತಿನಂತೆ ಹೃದಯದಲ್ಲಿ ಮುಚ್ಚಿಡುವಂತಹದ್ದಲ್ಲ. ಕಮಲಾ ಸುರಯ್ಯಾರವರು ಹೇಳಿದಂತೆ, ಹೊರಗೆ ತೋರ್ಪಡಿಸದ ಪ್ರೀತಿಯು ಜಿಪುಣನ ಬಳಿ ಇರುವ ಸಂಪತ್ತಿನ ರಾಶಿಯಂತೆ. ಅದು ಯಾರಿಗೂ ಪ್ರಯೋಜನಕಾರಿಯಾಗುವುದಿಲ್ಲ. ಅಂತಹವರು ಎಲೆಗಳುದುರಿದ ಬೋಳು ಮರದಂತೆ.

ಪ್ರೀತಿ ಮನಸ್ಸಿನಲ್ಲಿದ್ದರೆ ಮಾತ್ರ ಸಾಲದು. ಅದನ್ನು ಹೊರಗಡೆ ಪ್ರಕಟಪಡಿಸಬೇಕು. ಯಾವಾಗ ನೀವು ಪ್ರೀತಿಯನ್ನು ಪ್ರಕಟಪಡಿಸುತ್ತೀರೋ ಆಗ ನೀವು ಪ್ರೀತಿಸುತ್ತಿರುವವರಿಗೆ ಪ್ರೀತಿಯ ಮನವರಿಕೆಯಾಗುತ್ತದೆ. ನೀವು ಪ್ರೀತಿಸುತ್ತಿದ್ದೀರೆಂದು ಅರಿವಾಗುತ್ತದೆ.

ಒಮ್ಮೆ ಮಗನ ದುರ್ವರ್ತನೆಯ ಬಗ್ಗೆ ತಂದೆ ಅಧ್ಯಾಪಕರಿಗೆ ದೂರು ನೀಡುತ್ತಾರೆ. ಆ ವಿದ್ಯಾರ್ಥಿಯನ್ನು ಹತ್ತಿರ ಕರೆದುಕುಳ್ಳಿರಿಸಿಕೊಂಡ ಅಧ್ಯಾಪಕರು ಆತನ ತಲೆಯನ್ನು ನೇವರಿಸುತ್ತಾ ಬಹಳ ಹೊತ್ತು ಆತನೊಂದಿಗೆ ಮಾತನಾಡುತ್ತಾರೆ. ಎಲ್ಲ ವಿವರಗಳನ್ನು ಪಡೆದುಕೊಂಡ ಬಳಿಕ ಕೊನೆಯದಾಗಿ, ಮಗನೇ, ಅಪ್ಪನ ಬಗ್ಗೆ ನಿನಗೇನು ಸಮಸ್ಯೆ ಇದೆ?'' ಎಂದು ಕೇಳುತ್ತಾರೆ. ಕೂಡಲೇ ಆ ವಿದ್ಯಾರ್ಥಿಯು ಉಮ್ಮಳಿಸಿ ಬರುವ ದುಃಖದೊಂದಿಗೆ ಅಳತೊಡಗುತ್ತಾನೆ. ''ಅಪ್ಪನಿಗೆ ನನ್ನ ಮೇಲೆ ಸ್ವಲ್ಪ ಕೂಡಾ ಪ್ರೀತಿ ಇಲ್ಲ. ಅವರು 'ಮಗನೇ' ಎಂದು ಪ್ರೀತಿಯಿಂದ ಕರೆದು ಹತ್ತಿರ ಕುಳ್ಳಿರಿಸಿ ಮಾತನಾಡಿದುದರ ಕುರಿತು ನನಗೆ ನೆನಪಿಲ್ಲ. ನನಗೆ ಬೇಕಾದುದೆಲ್ಲವನ್ನೂ ತಂದು ಕೊಡುತ್ತರಾದರೂ ನನ್ನ ಮೇಲೆ ಅವರಿಗೆ ಕಿಂಚಿತ್ತೂ ಪ್ರೀತಿಯಿಲ್ಲ'' ಎನ್ನುತ್ತಾನೆ.

ತರುವಾಯ ಆ ಬಗ್ಗೆ ತಂದೆಯೊಂದಿಗೆ ಪ್ರಶ್ನಿಸಿದಾಗ ಅದಕ್ಕುತ್ತರವಾಗಿ ಅವರು: ''ಮಕ್ಕಳಿಗೆ ಬೇಕಾದುದೆಲ್ಲವನ್ನೂ ನಾನು ಕಷ್ಟಪಟ್ಟು ದುಡಿದು ತಂದುಕೊಡುವುದಿಲ್ಲವೇ? ನಾನು ಕಷ್ಟಪಡುತ್ತಿರುವುದು, ದುಡಿಯುತ್ತಿರುವುದು ಅವರಿಗೆ ಬೇಕಾಗಿಯಲ್ಲವೇ? ಅವರಿಗೆ

ಎಂದಾದರೂ, ಏನಾದರೂ ಕೊರತೆ ಮಾಡಿದ್ದೇನೆಯೇ? ಪ್ರೀತಿ ಇರುವುದರಿಂದಲ್ಲವೇ ನಾನು ಅವರ ಬೇಡಿಕೆಗಳನ್ನೆಲ್ಲ ಈಡೇರಿಸುತ್ತಿರುವುದು'' ಎಂದು ಹೇಳು.

ಮಕ್ಕಳ ಮೇಲೆ ಪ್ರೀತಿ ಇದ್ದುದರಿಂದಲೇ ಅವರ ಬೇಡಿಕೆಗಳನ್ನೆಲ್ಲ ಈಡೇರಿಸಲು ತಾನು ಕಷ್ಟಪಡುತ್ತಿರುವುದೆಂಬ ತಂದೆಯ ಮಾತು ಕಟುಸತ್ಯವಾಗಿದೆ. ಆದರೆ ಆ ಪ್ರೀತಿಯನ್ನು ಕೇವಲ ಬೇಡಿಕೆಗಳ ಈಡೇರಿಕೆಯಿಂದ ಮಾತ್ರ ನೀಡಲು ಸಾಧ್ಯವಿಲ್ಲ, ಬದಲಾಗಿ, ಅವರ ಜೊತೆ ಸ್ವಲ್ಪ ಸಮಯ ಕುಳಿತು ತಲೆಯನ್ನು ನೇವರಿಸುತ್ತಾ, ಮುದ್ದಿಸುತ್ತಾ ಮುತ್ತಿಡುವುದರೊಂದಿಗೆ ಅಲ್ಪ ಸಮಯ ಹಾಸ್ಯ ವಿನೋದದಲ್ಲಿ ತಲ್ಲೀನರಾಗುವ ಮೂಲಕ ಎಳೆಯ ಮನಸ್ಸುಗಳಲ್ಲಿ ಪ್ರೀತಿಯ ಅನುಭವದ ಸವಿಯನ್ನು ಉಣ್ಣಿಸಬೇಕಾಗುತ್ತದೆ. ಕೇವಲ ಮನದಲ್ಲಿ ಪ್ರೀತಿಯನ್ನು ಬಚ್ಚಿಟ್ಟುಕೊಂಡರೆ ಸಾಲದು. ಅದನ್ನು ಪ್ರಕಟಪಡಿಸಲೇಬೇಕೆಂಬುದನ್ನು ಅರಿಯಲೇಬೇಕು.

ತಂದೆ-ತಾಯಿಯ ಆತ್ಮ ಸ್ಪರ್ಶ ಲಭಿಸುವ ಮಕ್ಕಳು ಯಾವಾಗಲೂ ಅವರ ಹತ್ತಿರವೇ ಇರುತ್ತಾರೆ. ಸಿಗುವ ಸಂದರ್ಭಗಳಲ್ಲೆಲ್ಲಾ ತಂದೆ-ತಾಯಿಯ ಜೊತೆ ಕಾಲ ಕಳೆಯುಲು ಬಯಸುತ್ತಾರೆ. ಎಲ್ಲಿ ಹೋದರೂ ಬೇಗನೇ ಮನೆ ತಲುಪಲು ಬಯಸುವರು. ತಮಗೆ ಲಭಿಸುತ್ತಿರುವ ಈ ಪ್ರೀತಿ ನಷ್ಟವಾಗದಿರಲು, ಕಡಿಮೆಯಾಗದಿರಲು ಗರಿಷ್ಠ ಅವರನ್ನು ಸಂತೃಪ್ತಗೊಳಿಸಲು ಪ್ರಯತ್ನಿಸುವರು. ತರುವಾಯ ಸುಭದ್ರ ಮತ್ತು ಸಂತೃಪ್ತ ಕುಟುಂಬದ ನಿರ್ಮಾಣವಾಗುತ್ತದೆ.

ಪ್ರೀತಿಯನ್ನು ಮನದಲ್ಲಿಯೇ ಬಚ್ಚಿಟ್ಟು ಅವರನ್ನು ಬೆಳೆಸಿದರೆ ಅದನ್ನು ಅನುಭವಿಸಲು ಮಕ್ಕಳಿಗೆ ಸಾಧ್ಯವಾಗುವುದಿಲ್ಲ, ಇದರಿಂದಾಗಿ ಮಕ್ಕಳು, ನನ್ನ ತಂದೆ-ತಾಯಿಗೆ ನನ್ನ ಮೇಲೆ ಪ್ರೀತಿ ಇಲ್ಲ! ಎನ್ನುವುದನ್ನು ತಮ್ಮ ಮನಸ್ಸಿನಲ್ಲಿ ಅಚ್ಚೊತ್ತಿ ಬಿಡುತ್ತಾರೆ. ತರುವಾಯ ಹತ್ತಿರವಾಗುವುದನ್ನು ಬಿಟ್ಟು ಅವರಿಂದ ಆದಷ್ಟು ದೂರವಿರಲು ತೀರ್ಮಾನಿಸುತ್ತಾರೆ. ಸಂಬಂಧಿಕರು ಮತ್ತು ತಮ್ಮನ್ನು ಪ್ರೀತಿಸುವವರೊಂದಿಗಿರಲು ಆರಂಭಿಸುತ್ತಾರೆ. ಹಾಗಾಗಿ ತಂದೆ-ತಾಯಿಗಳೊಂದಿಗೆ ಇರಬೇಕಾದ ಗಾಢ ಸಂಬಂಧ ಮತ್ತು ಪ್ರೀತಿ ವಾತ್ಸಲ್ಯಗಳೆಲ್ಲವೂ ಸ್ನೇಹಿತರೊಂದಿಗೆ ವಿಲೀನವಾಗಿ ಬಿಡುತ್ತದೆ. ಇಂತಹ ದುರವಸ್ಥೆ ಬರಬಾರದೆಂದು ಬಯಸುವುದಾದರೆ ಮಕ್ಕಳಿಗೆ ನಿಸ್ವಾರ್ಥವಾಗಿ ಪ್ರೀತಿಯ ಧಾರೆಯೆರೆಯಬೇಕು. ಆ ಪ್ರೀತಿಯನ್ನು ಮಾತು, ಕೃತಿ, ಸಾಮೀಪ್ಯ ಮತ್ತು ಕರ್ಮ ಗಳ ಮೂಲಕ ಸಾಧ್ಯವಾದಷ್ಟು ಪ್ರಕಟಪಡಿಸಬೇಕು. ತಿಳಿಯಿರಿ ಪ್ರೀತಿಯನ್ನು ಹಣದಿಂದ ಪಡೆ ಯಲು ಸಾಧ್ಯವಿಲ್ಲ, ಬದಲಾಗಿ ಅದು ಹೃದಯ ಕವಾಟಗಳನ್ನು ತೆರೆದು ಅದರಿಂದ ಮಕ್ಕಳಿಗೆ ನಿರಾತಂಕವಾಗಿ ಹರಿಯಲು ಅವಕಾಶಗಳನ್ನು ಒದಗಿಸುವುದರ ಮೂಲಕ ಪ್ರಕಟಪಡಿಸಬೇಕು. ಪ್ರೀತಿಯನ್ನು ಹರಿಸಿದಷ್ಟು ಬತ್ತಿಹೋಗುವುದಿಲ್ಲ, ಅದರಲ್ಲಿ ಹೆಚ್ಚಳವೇ ಆಗುತ್ತದೆ.

ಇಂದು ನಿಸ್ವಾರ್ಥ ಪ್ರೀತಿಯು ಮಾನವರ ಮಧ್ಯೆ ನಷ್ಟವಾಗುತ್ತಿರುವ ಒಂದು ಸದ್ಗುಣವಾಗಿದೆ. ಪ್ರವಾದಿಗಳ ಮೂಲಕ ಅಲ್ಲಾಹನು ಮಾನವರಿಗೆ ನೀಡಿದ ಆದರ್ಶ ಪ್ರೀತಿಯಲ್ಲಿ ಅಧಿಷ್ಠಿತವಾಗಿದೆ. ಪ್ರೀತಿ ಮತ್ತು ಪ್ರೀತಿಯಿಂದ ಉದ್ಭವಿಸುವ ಕರುಣೆ ಮಾನವ

ಕುಲಕ್ಕೆ ನೀಡಬೇಕಾದ ಹೊಸ ಪೀಳಿಗೆಯು ನಿರ್ಮಾಣವಾಗಬೇಕಾದರೆ ಸಣ್ಣ ಪ್ರಾಯದಲ್ಲಿ ಮಾತಾಪಿತರಿಂದ ಅಂತಹ ಪ್ರೀತಿಯನ್ನು ಅವರು ಅನುಭವಿಸುವುದು ಅಗತ್ಯ. ಅದು ಪ್ರೀತಿಯನ್ನು ಹರಡುವ ಹೊಸ ಪೀಳಿಗೆಯ ಸೃಷ್ಟಿಗೆ ಕಾರಣವಾಗುತ್ತದೆ. ನಮ್ಮಿಂದ ಪಡೆದ ಪ್ರೀತಿಯನ್ನು ಅವರು ಪ್ರತಿನಿಧಿಸುವಾಗ ಆ ಮೂಲಕ ಇಸ್ಲಾಮನ್ನು ಸಮಾಜದ ಮುಂದಿಡುತ್ತಾರೆಂಬುದನ್ನು ಮನಗಾಣುತ್ತಾರಲ್ಲವೇ?

ಲುಕ್ಮಾನುಲ್ ಹಕೀಮ್(ಅ) ತನ್ನ ಮಗನಿಗೆ ಉಪದೇಶ ನೀಡುವಾಗ ಬಳಿಸಿದ ವಿಧಾನ ಅತ್ಯಂತ ಪ್ರೀತಿ, ವಾತ್ಸಲ್ಯ ಪ್ರಕಟಿಸುವುದಾಗಿತ್ತು. ಧಿಕ್ಕಾರಿಯೂ, ಸತ್ಯನಿಷೇಧಿಯೂ ಆದ ಮಗನನ್ನು ಪ್ರವಾದಿ ನೂಹ್(ಅ)ರೂ ಅದೇ ರೀತಿಯಲ್ಲಿ ಅಭಿಸಂಬೋಧಿಸಿದ್ದರು. ''ನನ್ನ ಮುದ್ದು ಮಗನೇ'' ಎಂದು ಇಬ್ಬರೂ ಕರೆದಿದ್ದರು. (ಸೂರಃ ಲುಕ್ಮಾನ್- 17, ಹೂದ್- 42)

ಪ್ರವಾದಿ(ಸ) ಸ್ವಂತ ಮಗಳಾದ ಫಾತಿಮಾ(ರ)ರೊಂದಿಗೆ ಎಷ್ಟೊಂದು ಪ್ರೀತಿ, ವಾತ್ಸಲ್ಯವನ್ನು ತೋರುತ್ತಿದ್ದರೆಂದು ಚರಿತ್ರೆ ನಮಗೆ ಕಲಿಸುತ್ತದೆ. ವಿವಾಹಿತರಾದ ಬಳಿಕವೂ ಪತಿಯ ಮನೆಯಿಂದ ಬಂದ ಫಾತಿಮಾರನ್ನು ಪ್ರವಾದಿ(ಸ) ಸ್ವತಃ ತಾವೇ ಎದ್ದು ಹೋಗಿ ಸ್ವಾಗತಿಸಿ, ಆಲಿಂಗನ ಮಾಡುತ್ತಿದ್ದರು. ಹಣೆಗೆ ಚುಂಬಿಸಿ ತನ್ನ ಬಳಿ ಕುಳ್ಳಿರಿಸುತ್ತಿದ್ದರು. ಸ್ವಂತ ಮುಂಡಾಸನ್ನು ಮಕ್ಕಳಿಗಾಗಿ ಹಾಸುತ್ತಿದ್ದರು. ಇದು ಅವರ ನಿತ್ಯ ರೂಢಿಯಾಗಿತ್ತು. ಮೊಮ್ಮಕ್ಕಳೊಂದಿಗೂ ಇದೇ ರೀತಿಯ ಧೋರಣೆ ಸ್ವೀಕರಿಸಿದ್ದರು.

ಪ್ರವಾದಿಯವರ(ಸ) ಮಾದರಿಯನ್ನು ಅನುಕರಿಸಿ ಮಕ್ಕಳೊಂದಿಗೆ ಪ್ರೀತಿ ಪ್ರಕಟಿಸಲು ನಾವು ಕೂಡಾ ಬಾಧ್ಯಸ್ಥರಾಗಿದ್ದೇವೆ.

❖❖❖❖

ಮಕ್ಕಳನ್ನು ರಕ್ಷಿಸುವಾಗ

ಇಸ್ಲಾಮಿನ ಅತ್ಯಂತ ಪ್ರಮುಖ ಆರಾಧನೆ ನಮಾಝ್ ಆಗಿದೆ. ಮನುಷ್ಯನ ಸ್ವರ್ಗ-ನರಕಗಳ ತೀರ್ಮಾನದಲ್ಲಿ ಅದಕ್ಕೆ ಪ್ರಮುಖ ಪಾತ್ರವಿದೆ. ಯಾರಾದರೂ ಮನಃಪೂರ್ವಕ ನಮಾಝನ್ನು ತೊರೆದರೆ ಅದು ವಿಶ್ವಾಸದ್ರೋಹವಾಗಿದೆ. ಆದ್ದರಿಂದ ಪ್ರತಿಯೊಬ್ಬ ಮುಸ್ಲಿಮನೂ ತನ್ನ ಮಗನಲ್ಲಿ ಬೆಳೆಸಲು ಬಯಸುವ ಸದ್ಗುಣ, ಅವನನ್ನು ನಮಾಝ್ ಮಾಡುವವನಾಗಿ ಬೆಳೆಸುವುದಾಗಿದೆ. ಮುಂದಿನ ಪೀಳಿಗೆ ನಮಾಝ್‌ನಲ್ಲಿ ನಿಷ್ಠೆಯುಳ್ಳವರಾಗಬೇಕೆಂದು ಎಲ್ಲರಿಗಿಂತಲೂ ಹೆಚ್ಚು ಪ್ರವಾದಿ(ಸ) ಬಯಸಿದ್ದರು. ಆದರೂ ಅವರು ಮಕ್ಕಳು ನಮಾಝ್ ಮಾಡಲಿಲ್ಲವೆಂಬ ಕಾರಣಕ್ಕೆ ಹತ್ತು ವಯಸ್ಸಿಗಿಂತ ಮುಂಚೆ ಹೊಡೆಯಲು ಅನುಮತಿ ನೀಡಲಿಲ್ಲ. ಪ್ರವಾದಿ(ಸ) ಹೇಳಿದರು: ''ನೀವು ನಿಮ್ಮ ಮಕ್ಕಳಿಗೆ ಏಳು ವರ್ಷ ಪ್ರಾಯದಲ್ಲಿ ನಮಾಝ್ ನಿರ್ವಹಿಸಲು ಆಜ್ಞಾಪಿಸಿರಿ- ಹತ್ತು ವಯಸ್ಸಾದರೆ ನಮಾಝ್ ಮಾಡದಿದ್ದರೆ ಹೊಡೆಯಿರಿ.''

ಈ ಪ್ರವಾದಿ ವಚನದ ಆಧಾರದಲ್ಲಿ ಹತ್ತು ವಯಸ್ಸಿಗಿಂತ ಮುಂಚೆ ಯಾವ ಕಾರಣಕ್ಕೂ ಮಕ್ಕಳಿಗೆ ಹೊಡೆಯಬಾರದೆಂದು ಅನೇಕ ವಿದ್ವಾಂಸರು ಅಭಿಪ್ರಾಯ ಪಟ್ಟಿದ್ದಾರೆ. ಮೂರು ವರ್ಷಗಳ ತನಕ ಉಪದೇಶ ನೀಡಿಯೂ ನಮಾಝ್ ಮಾಡದಿದ್ದರೆ ಮಾತ್ರ ಹೊಡೆಯಲು ಆಜ್ಞಾಪಿಸಲಾಗಿದೆ. ಸುದೀರ್ಘವಾದ ಮೂರು ವರ್ಷಗಳಲ್ಲಿ ನೂರು ಬಾರಿ ಉಪದೇಶ ನೀಡಿಯೂ ಪ್ರಯೋಜನವಾಗದಿದ್ದರೆ ಮಾತ್ರ ಹೊಡೆಯಬೇಕು. ಅದು ಶಿಕ್ಷೆಯಲ್ಲ, ಬದಲಾಗಿ ಒಂದು ಶಿಕ್ಷಣ ನೀತಿಯಾಗಿದೆ.

ನಮಾಝ್ ಎಂಬ ಅತಿ ಪ್ರಧಾನ ವಿಷಯದಲ್ಲಿ ಮೂರು ವರ್ಷಗಳ ತನಕ ಉಪದೇಶ ನೀಡಿ, ಪ್ರಯತ್ನ ಪಟ್ಟು ಪ್ರಯೋಜನವಾಗದಿದ್ದರೆ ಮಾತ್ರ ಹೊಡೆಯುವ ಅನುಮತಿ ಇದ್ದರೂ ಮಕ್ಕಳಲ್ಲಿ ಕಂಡು ಬರುವ ಇತರ ಕೆಡುಕುಗಳಿಗೂ ಇದು ಅನ್ವಯವಾಗುತ್ತದೆ.

ಶಿಕ್ಷೆ ತಪ್ಪು ಸ್ಪಷ್ಟಪಡಿಸಿದ ಬಳಿಕ:

ನ್ಯಾಯ ಎಂಬುದು ಅತೀ ಪ್ರಧಾನವಾಗಿದೆ. ಅದು ಎಲ್ಲರಿಗೂ ಸಿಗಬೇಕು. ಮಕ್ಕಳೂ ಅದರಿಂದ ಹೊರತಲ್ಲ. ಆದ್ದರಿಂದ ಮಕ್ಕಳು ನ್ಯಾಯ ವಂಚಿತರಾಗಬಾರದು. ತಪ್ಪು ಬಹಿರಂಗವಾದ ಬಳಿಕವಷ್ಟೇ ಶಿಕ್ಷೆ ನೀಡಬೇಕೆಂಬುದು ನ್ಯಾಯದ ಪ್ರಾಥಮಿಕ ಬೇಡಿಕೆಯಾಗಿದೆ. ಪರಲೋಕದಲ್ಲಿ ಕೂಡಾ ಅಲ್ಲಾಹನು ದೋಷವನ್ನು ಸ್ಪಷ್ಟಪಡಿಸಿದ ಬಳಿಕ ಮಾತ್ರ ಮಾನವರನ್ನು

ಶಿಕ್ಷಿಸುತ್ತಾನೆ. ಸೃಷ್ಟಿಕರ್ತನಾದ ಅಲ್ಲಾಹನೇ ಎಲ್ಲವೂ ತಿಳಿದವನಾಗಿದ್ದರೂ, ಕೆಡುಕನ್ನು ಸ್ಪಷ್ಟಪಡಿಸದೆ ಶಿಕ್ಷಿಸುವುದಿಲ್ಲವೆಂದಾದರೆ, ತಂದೆ-ತಾಯಿಗಳು ಮಕ್ಕಳ ತಪ್ಪನ್ನು ತೋರಿಸದೆ ಶಿಕ್ಷೆ ನೀಡುವುದು ಯಾವ ಆಧಾರದಲ್ಲಿ? ಅಲ್ಲಾಹನಿಗೆ ಅವನ ಸೃಷ್ಟಿಗಳ ಮೇಲೆ ಇರುವುದಕ್ಕಿಂತ ಹೆಚ್ಚಿನ ಅಧಿಕಾರ, ಹಕ್ಕು ತಂದೆ-ತಾಯಿಗಳಿಗೆ ಮಕ್ಕಳ ಮೇಲೆ ಇಲ್ಲ ತಾನೆ.

ತಪ್ಪನ್ನು ಸ್ಪಷ್ಟಪಡಿಸದೆ ಶಿಕ್ಷೆ ನೀಡಬಾರದೆಂಬುದು ನಮ್ಮ ದೇಶದಲ್ಲಿ ಮಾತ್ರವಲ್ಲ, ಜಗತ್ತಿನ ನ್ಯಾಯ ವ್ಯವಸ್ಥೆಯ ಒಂದು ಭಾಗವಾಗಿದೆ. ಹಾಗಿರುವಾಗ ಸತ್ಯವಿಶ್ವಾಸಿಗಳು ಎಲ್ಲರಿಗಿಂತಲೂ ಹೆಚ್ಚು ನ್ಯಾಯ ಪಾಲಿಸಲು ಬಾಧ್ಯಸ್ಥರಾಗಿರುತ್ತಾರೆ. ಪವಿತ್ರ ಕುರ್‌ಆನ್ ಅನೇಕ ಕಡೆಗಳಲ್ಲಿ ಈ ವಿಷಯವನ್ನು ಪ್ರಸ್ತಾಪಿಸಿದೆ.

''**ಓ ಸತ್ಯವಿಶ್ವಾಸಿಗಳೇ, ನೀವು ನ್ಯಾಯದ ಧ್ವಜವಾಹಕರೂ ಅಲ್ಲಾಹನಿಗಾಗಿ ಸಾಕ್ಷ್ಯವಹಿಸುವವರೂ ಆಗಿರಿ.**'' (ಸೂರಃ ಅನ್ನಿಸಾ: 135)

''**ಓ ಸತ್ಯವಿಶ್ವಾಸಿಗಳೇ, ನೀವು ಅಲ್ಲಾಹನಿಗಾಗಿ ಸತ್ಯದಲ್ಲೇ ನೆಲೆ ನಿಲ್ಲುವವರೂ, ನ್ಯಾಯದ ಸಾಕ್ಷ್ಯ ವಹಿಸುವವರೂ ಆಗಿರಿ.**'' (ಸೂರಃ ಅಲ್‌ಮಾಇದ: 8)

ಮಕ್ಕಳು ಕೂಡಾ ಮಾತಾಪಿತರ ನ್ಯಾಯಕ್ಕೆ ಅರ್ಹರಾಗಿದ್ದಾರೆ. ಆದ್ದರಿಂದಲೇ ಪ್ರವಾದಿಯವರು(ಸ) ಹೀಗೆ ಹೇಳಿರುವರು: ''ಕೇಳಿರಿ! ನಿಮ್ಮ ಪೈಕಿ ಪ್ರತಿಯೊಬ್ಬನೂ ಮೇಲ್ವಿಚಾರಕನು. ಪ್ರತಿಯೊಬ್ಬನೊಡನೆ ಅವನ ಅಧೀನದಲ್ಲಿರುವವರ ಕುರಿತು ವಿಚಾರಣೆ ನಡೆಸಲಾಗುವುದು. ಜನರ ಮುಂದಾಳುವಾಗಿರುವ ನಾಯಕ ಮೇಲ್ವಿಚಾರಕನಾಗಿದ್ದಾನೆ. ಅವನೊಡನೆ ಅವನ ಅಧೀನವಿದ್ದ ಜನರ ಬಗ್ಗೆ ಪ್ರಶ್ನಿಸಲಾಗುವುದು. ವ್ಯಕ್ತಿಯು ಅವನ ಮನೆಯವರ ಮೇಲ್ವಿಚಾರಕನಾಗಿದ್ದಾನೆ. ಅವನು ಅವರ ವಿಷಯದಲ್ಲಿ ವಿಚಾರಣಾರ್ಹನಾಗಿರುವನು. ಸ್ತ್ರೀಯು ತನ್ನ ಪತಿಯ ಮನೆ ಮತ್ತು ಅವನ ಮಕ್ಕಳ ಮೇಲ್ವಿಚಾರಕಳಾಗಿರುವಳು. ಅವಳೊಡನೆ ಅವುಗಳ ಬಗ್ಗೆ ವಿಚಾರಣೆ ನಡೆಸಲಾಗುವುದು. ಗುಲಾಮನು ತನ್ನ ಮಾಲಕನ ಸೊತ್ತುಗಳ ಮೇಲ್ವಿಚಾರಕನಾಗಿರುತ್ತಾನೆ. ಅವನೊಡನೆ ಆ ಕುರಿತು ವಿಚಾರಿಸಲಾಗುವುದು. ತಿಳಿದಿರಲಿ! ನಿಮ್ಮ ಪೈಕಿ ಪ್ರತಿಯೊಬ್ಬನೂ ಮೇಲ್ವಿಚಾರಕನಾಗಿರುವನು ಮತ್ತು ಪ್ರತಿಯೊಬ್ಬನೊಡನೆಯೂ ಅವನ ಹೊಣೆಗಾರಿಕೆಗಳ ಬಗ್ಗೆ ವಿಚಾರಣೆ ನಡೆಯಲಿದೆ.'' (ಮುತ್ತಫಕುನ್ ಅಲೈಹಿ)

ಆದ್ದರಿಂದ ನ್ಯಾಯದ ಪ್ರಾಥಮಿಕ ಬೇಡಿಕೆಯೆಂಬ ನೆಲೆಯಲ್ಲಿ ಮಾತಾಪಿತರು ಮಕ್ಕಳನ್ನು ಶಿಕ್ಷಿಸುವುದಾದರೆ, ಅವರ ತಪ್ಪುಗಳ ಬಗ್ಗೆ ಮನವರಿಕೆ ಮಾಡಿಸಿದ ಬಳಿಕ ಹಾಗೂ 10 ವಯಸ್ಸಿನ ನಂತರವೇ ಆಗಬೇಕು. ವಾಸ್ತವದಲ್ಲಿ ಮಕ್ಕಳಿಗೆ ಕೊಡುವ ಶಿಕ್ಷೆಯನ್ನು ಶಿಕ್ಷಣವೆಂದು ಹೇಳುವುದೇ ಸೂಕ್ತ. ಮಾತಾಪಿತರು ಸಣ್ಣ ಪೆಟ್ಟುಕೊಟ್ಟು ಸರಿದಾರಿಗೆ ಮಕ್ಕಳನ್ನು ಮುನ್ನಡೆಸುವ ಒಂದು ಶಿಕ್ಷಣ ಪದ್ಧತಿಯಾಗಿ ಅದನ್ನು ಪರಿಗಣಿಸಬೇಕೇ ಹೊರತು ಮರ್ದನ ನೀತಿಯನ್ನಲ್ಲ.

ಛಲ ನಿಲ್ಲಿಸಲು ಪೆಟ್ಟು:

ನಮ್ಮ ಊರಿನಲ್ಲಿ ಪೊಲೀಸ್ ವಿಭಾಗದ ಬಗ್ಗೆ ಒಂದು ಕಥೆ ಹೇಳಲಾಗುತ್ತದೆ. ಐ.ಜಿ. ಆಫೀಸಿಗೆ ಹೊರಡುವಾಗ ಪತ್ನಿ ಸಿಟ್ಟಿನಿಂದ ಏನೇನೋ ಹೇಳುತ್ತಾಳೆ. ಮನೆಯಿಂದ ಕೋಪೋದ್ರಿಕ್ತನಾಗಿ ಹೊರಟ ಐ.ಜಿ. ಆಫೀಸಿಗೆ ತಲುಪಿದ ಕೂಡಲೇ ಕ್ಷುಲ್ಲಕ ಕಾರಣಕ್ಕೆ ಡಿ.ಐ.ಜಿ.ಯನ್ನು ಕರೆದು ತನ್ನ ಸಿಟ್ಟನ್ನು ತೀರಿಸುತ್ತಾನೆ. ಇದರಿಂದ ಮನನೊಂದ ಡಿ.ಐ.ಜಿ. ಕಛೇರಿಯಲ್ಲಿರುವಾಗಲೇ ವಿಶೇಷತೆಯೇನಿಲ್ಲದಿದ್ದರೂ ಎಸ್.ಪಿ.ಯನ್ನು ಕರೆದು ಬೈಯುತ್ತಾನೆ. ಎಸ್ಪಿ, ಡಿವೈಎಸ್ಪಿಯೊಂದಿಗೂ, ಡಿವೈಎಸ್ಪಿ ಸಬ್ ಇನ್ಸ್‌ಪೆಕ್ಟರ್‌ನೊಂದಿಗೂ ಅವರು ಎಸ್.ಐ ನೊಂದಿಗೂ, ಎಸ್ಸೈ ಕಾನ್ಸ್‌ಟೇಬಲ್‌ನೊಂದಿಗೂ ತಮ್ಮ ಕೋಪವನ್ನು ಪ್ರಕಟಪಡಿಸುತ್ತಾರೆ. ಕಾನ್ಸ್‌ಟೇಬಲ್ ತನ್ನ ಪತ್ನಿಯೊಂದಿಗೆ ಕೋಪವನ್ನು ತೀರಿಸುತ್ತಾನೆ. ಪತ್ನಿಯಾದರೋ ಕ್ಷುಲ್ಲಕ ಕಾರಣಕ್ಕೆ ತನ್ನ ಮಗನ ಕೆನ್ನೆಗೆ ಬಾರಿಸಿ ತನ್ನ ಸಿಟ್ಟನ್ನು ತೀರಿಸುತ್ತಾಳೆ.

ಹೆಚ್ಚಿನ ತಂದೆ-ತಾಯಂದಿರು ತಮ್ಮ ಕೋಪವನ್ನು ತಣಿಸಲು ಮಕ್ಕಳನ್ನು ಶಿಕ್ಷಿಸುತ್ತಾರೆ. ಅವರ ತರಬೇತಿ ಮಾಡಲಿಕ್ಕಾಗಿರುವುದಿಲ್ಲ. ಆದ್ದರಿಂದ ಅಂತಹ ಶಿಕ್ಷೆ ಅವರನ್ನು ತರಬೇತುಗೊಳಿಸದೆ, ಅವರು ಕೆಡಲು ಕಾರಣವಾಗುತ್ತದೆ. ತಮ್ಮ ದ್ವೇಷವನ್ನು ತೀರಿಸಲು ಮಕ್ಕಳಿಗೆ ಶಿಕ್ಷೆಕೊಡುವುದರ ದುಷ್ಪರಿಣಾಮವಾಗಿ ಮಕ್ಕಳಲ್ಲಿ ಮಾತಾಪಿತರ ಬಗ್ಗೆ ಪ್ರತೀಕಾರ ಭಾವನೆ ಜನ್ಮ ತಾಳುತ್ತದೆ. ಶಿಕ್ಷೆ ಪುನರಾವರ್ತಿಸಿದರೆ ಆ ಭಾವನೆ ಮೊಳಕೆಯೊಡೆಯುತ್ತದೆ. ಕೊನೆಗೆ ಮಾತಾಪಿತರು ಅವರ ಪಾಲಿಗೆ ದ್ವೇಷಕ್ಕೆ ಕಾರಣರಾಗುತ್ತಾರೆ. ಕಾಲ ಕ್ರಮೇಣ ಮಕ್ಕಳಲ್ಲಿ ಅವರನ್ನು ವಿರೋಧಿಸುವ ಶಕ್ತಿ ಬೆಳೆಯ ತೊಡಗುತ್ತದೆ. ಅದನ್ನು ಅವರು ಕುಟುಂಬದವರೊಂದಿಗೂ, ಸಮಾಜದೊಂದಿಗೂ ಪ್ರಕಟಪಡಿಸಲು ತೊಡಗುತ್ತಾರೆ. ಈ ರೀತಿ ಸಮಾಜಘಾತುಕರ ಸೃಷ್ಟಿಯಾಗುತ್ತದೆ. ವಾಸ್ತವದಲ್ಲಿ ಅವರನ್ನು ಸಮಾಜಘಾತುಕರನ್ನಾಗಿ ಮಾಡುವುದರಲ್ಲಿ ತಂದೆ ತಾಯಂದಿರ ಪಾತ್ರ ಮುಖ್ಯ. ಆದ್ದರಿಂದ ಪತಿ ಅಥವಾ ಮನೆ ಮಂದಿಯ ಮೇಲಿರುವ ದ್ವೇಷವನ್ನು ಅಥವಾ ಕೋಪವನ್ನು ಮಕ್ಕಳಿಗೆ ಶಿಕ್ಷೆಕೊಟ್ಟು ತೀರಿಸಬಾರದು. ಮಕ್ಕಳು ಏನಾದರೂ ಅಪ್ರಿಯ ಕಾರ್ಯ ಮಾಡಿದಾಗ ಉಂಟಾಗುವ ಕೋಪವನ್ನು ತಣಿಸಲಿಕ್ಕೂ ಅವರನ್ನು ಶಿಕ್ಷಿಸಬಾರದು. ಯಾವುದೇ ವಿಷಯವಾದರೂ ಕೋಪ ಇರುವಾಗ ತೀರ್ಮಾನ ತೆಗೆದುಕೊಳ್ಳುವುದು ತಪ್ಪು. ಅದು ಅಕ್ರಮ-ಅನ್ಯಾಯಕ್ಕೆ ಕಾರಣವಾಗುತ್ತದೆ ಎಂಬುದೇ ಮುಖ್ಯ ಕಾರಣ. ಇದೇ ಕಾರಣಕ್ಕಾಗಿ ಪ್ರವಾದಿ(ಸ) ಕೋಪ ಬಂದಾಗ ಅದನ್ನು ನುಂಗಿಕೊಳ್ಳಬೇಕೆಂದೂ, ವುಝೂ ಮಾಡಬೇಕೆಂದೂ ಆಜ್ಞಾಪಿಸಿರುತ್ತಾರೆ. ಆತ್ಮ ನಿಯಂತ್ರಣ ಮಾಡಿದ ಬಳಿಕವಷ್ಟೇ ಮಕ್ಕಳ ಅಥವಾ ಇತರ ವಿಷಯಗಳ ಸರಿಯಾದ ತೀರ್ಮಾನ ತೆಗೆದುಕೊಳ್ಳಬೇಕು.

❖❖❖❖

ಪರಿಗಣನೆ ಮತ್ತು ಸಮಾಲೋಚನೆ

ಭೂಮಿಯ ಮೇಲೆ ಜನಿಸುವ ಪ್ರತಿಯೊಬ್ಬರಿಗೂ ಸ್ವತಂತ್ರ ವ್ಯಕ್ತಿತ್ವವಿದೆ. ಅದಕ್ಕೆ ಪ್ರಾಯದ ವ್ಯತ್ಯಾಸವಿಲ್ಲ. ಸ್ವಂತ ವ್ಯಕ್ತಿತ್ವಕ್ಕೆ ಅಂಗೀಕಾರ ಲಭಿಸಬೇಕೆಂದು ಚಿಕ್ಕ ಮಕ್ಕಳಿಂದ ಹಿಡಿದು ಮುದಿ ಪ್ರಾಯದ ವರೆಗೆ ಎಲ್ಲರೂ ಬಯಸುತ್ತಾರೆ. ಅದು ತಡೆಯಲ್ಪಟ್ಟಾಗ ಸಿಟ್ಟಾಗುತ್ತಾರೆ. ದುಃಖಿತ ರಾಗುತ್ತಾರೆ. ಆದ್ದರಿಂದ, ಮಾತಾಪಿತರು ಮಕ್ಕಳ ವ್ಯಕ್ತಿತ್ವವನ್ನು ಅಂಗೀಕರಿಸಿ ಅವರಿಗೆ ಸೂಕ್ತ ಪರಿಗಣನೆ ನೀಡಬೇಕು. ತಮ್ಮ ಮಕ್ಕಳ ಬಗ್ಗೆ ತೀರ್ಮಾನ ಕೈಗೊಳ್ಳಬೇಕಾದವರು ತಾವು ಎಂದು ಭಾವಿಸುವ ತಂದೆ–ತಾಯಿಗಳು ಮಕ್ಕಳಿಗೆ ಅನ್ಯಾಯ ಮಾಡುತ್ತಾರೆ.

ಮನೆಯ ಕಾರ್ಯಕಲಾಪಗಳ ಬಗ್ಗೆ ತೀರ್ಮಾನ ಮಾಡುವಾಗ ಅವರೊಂದಿಗೆ ಸಮಾಲೋಚನೆ ನಡೆಸಬೇಕು. ಅವರ ಅಭಿಪ್ರಾಯಗಳಿಗೆ ಸೂಕ್ತ ಮನ್ನಣೆ ಕೊಡಬೇಕು. ಅದನ್ನು ಸ್ವೀಕರಿಸಲು ಸಾಧ್ಯವಾಗದಿದ್ದರೆ ಅದರ ಸೂಕ್ತ ಕಾರಣವನ್ನು ಅವರಿಗೆ ತಿಳಿಸಬೇಕು. ಈ ರೀತಿಯಾಗಿ ಮಕ್ಕಳೊಂದಿಗೆ ಸಮಾಲೋಚಿಸಿ, ಅಭಿಪ್ರಾಯಗಳಿಗೆ ಮನ್ನಣೆ ನೀಡಿದರೆ ಅವರದನ್ನು ಕಾರ್ಯರೂಪಕ್ಕೆ ತರಲು ಸಹಕಾರ ನೀಡುವರು. ಅದನ್ನು ಫಲಪ್ರದಗೊಳಿಸಲು ತಮ್ಮಿಂದಾದಷ್ಟು ಪ್ರಯತ್ನಿಸುವರು.

ಪರಿಗಣನೆ ಮತ್ತು ಸಮಾಲೋಚನೆಯಲ್ಲಿ ಪಾಲ್ಗೊಂಡ ಮಕ್ಕಳು ಬೆಳೆದು ಬರುವಾಗ ಮಾನಸಿಕವಾಗಿ ಆರೋಗ್ಯವಂತರಾದ ನಾಯಕತ್ವ ಗುಣಗಳನ್ನು ಹೊಂದುತ್ತಾರೆ. ಚಿಕ್ಕ ಪ್ರಾಯದಲ್ಲಿ ನಿರ್ಲಕ್ಷಿಸಲ್ಪಟ್ಟ ಮಕ್ಕಳಲ್ಲಿ ಸ್ವಭಾವ ವೈಫಲ್ಯಗಳುಂಟಾಗುವ ಸಾಧ್ಯತೆ ಅತಿ ಹೆಚ್ಚು. ಅಂತಹ ಮಕ್ಕಳನ್ನು ಪ್ರೋತ್ಸಾಹಿಸುತ್ತಲಿರಬೇಕು. ಪ್ರವಾದಿ(ಸ) ಹೇಳಿದರು: ''ಸುಲಭಗೊಳಿಸಿರಿ. ಕಠಿಣಗೊಳಿಸದಿರಿ.'' ಮಕ್ಕಳ ದೈಹಿಕ, ಮಾನಸಿಕ ಸಾಮರ್ಥ್ಯಗಳನ್ನು ಪರಿಗಣಿಸಿ ಹೊಣೆಗಾರಿಕೆಗಳನ್ನು ನೀಡಬೇಕು. ಬೌದ್ಧಿಕವಾಗಿ ದುರ್ಬಲರಾಗಿರುವ ಮಕ್ಕಳ ಪ್ರತಿಷ್ಠೆಯ ಹೆಸರಲ್ಲಿ ಮಕ್ಕಳ ಮೇಲೆ ಒತ್ತಡ ಹೇರುವಂತಹ ಶಾಲೆಗಳಿಗೆ ಸೇರಿಸುವುದನ್ನು ನಿಲ್ಲಿಸಬೇಕು. ಆ ರೀತಿ ಮಾಡದಿದ್ದರೆ ಮಕ್ಕಳು ಕಲಿಕೆಯಲ್ಲಿ ಇತರ ವಿದ್ಯಾರ್ಥಿಗಳಿಂದ ಹಿಂದುಳಿಯುವರು. ಅದು ಅವರನ್ನು ನಿರಾಶೆಗೆ ಒಳಪಡಿಸುತ್ತದೆ. ಕ್ರಮೇಣ ಕಲಿಕೆಯಲ್ಲಿ ನಿರಾಸಕ್ತಿ, ದ್ವೇಷ ಬೆಳೆಯತೊಡಗುತ್ತದೆ. ಕೊನೆಗೆ ವಿದ್ಯಾಭ್ಯಾಸವನ್ನು ತೊರೆಯುವ ಸಾಧ್ಯತೆ ಇದೆ. ಆದ್ದರಿಂದ ವಿದ್ಯಾಭ್ಯಾಸ ರಂಗದಲ್ಲಿ ಮಾತಾಪಿತರ ಅಭಿಲಾಷೆಗಳಿಗಿಂತ ಮಕ್ಕಳ ಅಭಿರುಚಿಗಳಿಗೆ ವಿಶೇಷ ಗಮನಹರಿಸಬೇಕು. ಅದು ಮಕ್ಕಳ ಉತ್ತಮ ಭವಿಷ್ಯಕ್ಕೆ ಪ್ರಯೋಜನಕಾರಿಯಾದೀತು. ಆದರೆ,

ಹೆಚ್ಚಿನ ತಂದೆ-ತಾಯಿಗಳು ಮಕ್ಕಳ ಭವಿಷ್ಯಕ್ಕಿಂತ ಹೆಚ್ಚಾಗಿ ತಮ್ಮ ಗೌರವಕ್ಕೆ ಪ್ರಾಮುಖ್ಯತೆ ನೀಡುತ್ತಾರೆ. ತನ್ನ ಮಗು ಇಂತಿಂತಹ ಸಂಸ್ಥೆಯಲ್ಲಿ ಕಲಿಯುತ್ತಿದೆಯೆಂದು ಹೇಳಿ ಹೆಮ್ಮೆಪಡಲಿಕ್ಕಾಗಿ ಸ್ವಂತ ಮಕ್ಕಳನ್ನು ಬಲಿಪಶುಗಳನ್ನಾಗಿ ಮಾಡುವ ತಂದೆ-ತಾಯಿಗಳು ಅವರನ್ನು ನಾಶ ಕೂಪಕ್ಕೆ ತಳ್ಳುತ್ತಾರೆ.

ಮಕ್ಕಳ ವಿದ್ಯಾಭ್ಯಾಸದ ಕಾರ್ಯದಲ್ಲಿ ಅವರಿಗೆ ಸಹಾಯ ಮಾಡುವ ತಂದೆ-ತಾಯಿಗಳು ಅದಕ್ಕೆ ಸಿದ್ಧರಾಗಬೇಕು. ಅವರ ಬಳಿ ಕುಳಿತು ಪ್ರೀತಿಯಿಂದ ಉಪದೇಶಿಸುತ್ತಾ, ಅವರಿಗೆ ಗೊತ್ತಿಲ್ಲದ ವಿಷಯಗಳನ್ನು ಹೇಳಿಕೊಡಬೇಕು. ಆದರೆ ತಂದೆ-ತಾಯಿಗಳು ಮುಂಗೋಪಿಗಳಾಗಿದ್ದರೆ ಮಕ್ಕಳಿಗೆ ಕಲಿಸುವುದರಿಂದ ದೂರ ನಿಲ್ಲಬೇಕು. ಹಾಗೆಯೇ ಮಕ್ಕಳು ಕಲಿಯುತ್ತಿರುವಾಗ ಅವರಿಗೆ ಸಮಾಧಾನ ಹೇಳುತ್ತಾ, ಅವರಲ್ಲಿ ಶುಭ ನಿರೀಕ್ಷೆಗಳನ್ನು ಹುಟ್ಟಿಸಬೇಕು.

ಮಕ್ಕಳಿಗೆ ಅಗತ್ಯದ ವಸ್ತುಗಳನ್ನು ತೆಗೆದುಕೊಡಲು ಪ್ರಯತ್ನಿಸಬೇಕು. ಆದರೆ ಅವರಿಗೆ ಅಗತ್ಯಕ್ಕಿಂತ ಹೆಚ್ಚು ಹಣ ನೀಡಬಾರದು. ಅದು ಅವರನ್ನು ಕೆಡಿಸುವ ಸಾಧ್ಯತೆಗಳಿವೆ. ಅವರಲ್ಲಿ ಅನಗತ್ಯ ಖರ್ಚು ಮಾಡುವ ಸ್ವಭಾವ ಬೆಳೆದು ಬರಬಹುದು. ದುಂದುವೆಚ್ಚ ಮಾಡಲು ಪ್ರೇರಣೆಯಾಗಬಹುದು. ಸುಖ ಸಮೃದ್ಧವಾದ ಜೀವನಕ್ಕಿಂತ ಸ್ವಲ್ಪವಾದರೂ ಸಂಕಷ್ಟದ ಸಂದರ್ಭಗಳನ್ನು ಅನುಭವಿಸಲು ಅವಕಾಶಗಳನ್ನು ಒದಗಿಸಿಕೊಡಬೇಕು. ಹಾಗೆ ಮಾಡದಿದ್ದರೆ ಜೀವನದಲ್ಲಿ ಸಂಕಷ್ಟ ಬಂದಾಗ ಅದನ್ನು ಎದುರಿಸಲು ಶಕ್ತರಾಗದೆ ದುರ್ಬಲರಾಗಬಹುದು. ಮಕ್ಕಳು ಕೇಳುವುದೆಲ್ಲವನ್ನು ನೀಡಬಾರದೆಂಬುದೇ ಇದರ ಅರ್ಥ. ಭೌತಿಕ ವಸ್ತುಗಳನ್ನು ಒದಗಿಸುವುದರ ಮೂಲಕ ಮಾತ್ರ ಮಕ್ಕಳ ಮೇಲೆ ಪ್ರೀತಿ ತೋರಬೇಕೆಂದಿಲ್ಲ, ಆ ರೀತಿ ಅಭ್ಯಾಸ ಮಾಡಿದರೆ, ಅವರು ಕೇಳುವಾಗ ತಂದೆ-ತಾಯಿಗಳಿಗೆ ಹಣ ನೀಡಲು ಸಾಧ್ಯವಾಗದೆ ಹೋದರೆ ಅವರು ತಂದೆ-ತಾಯಿಗಳನ್ನು ದ್ವೇಷಿಸಲು ಕಾರಣವಾಗಬಹುದು.

ಪ್ರೀತಿ ಮತ್ತು ಸಚ್ಚಾರಿತ್ರ್ಯಗಳನ್ನು ಉದಾರವಾಗಿ ನೀಡಿದರೆ ಅದು ನಿರಂತರ ಮುಂದುವರಿಯುತ್ತದೆ. ನಿನಗಾಗಿ ತಾವು ಕಷ್ಟಪಡುವುದು ಎಂದು ಮಾತಾಪಿತರು ಮಕ್ಕಳಿಗೆ ಹೇಳಬಾರದು. ಅವರಿಗೆ ಮಾಡುವ ಸೇವೆಗಳನ್ನೂ, ತ್ಯಾಗಗಳನ್ನೂ, ಹಣದ ಲೆಕ್ಕಾಚಾರವನ್ನು ಯಾವ ಕಾರಣಕ್ಕೂ ಅವರ ಮುಂದಿಡಬಾರದು. ಪ್ರತಿಯೊಬ್ಬ ತಂದೆ-ತಾಯಿಗಳು ಮಕ್ಕಳಿಗಾಗಿ ಅತಿದೊಡ್ಡ ತ್ಯಾಗಗಳನ್ನು ಸಹಿಸುತ್ತಾರೆ. ಅದನ್ನು ಎತ್ತಿ ಹೇಳಿದರೆ ಮಕ್ಕಳಲ್ಲಿ ತಪ್ಪುಕಲ್ಪನೆ ಉಂಟಾಗುತ್ತದೆ. ಪ್ರತ್ಯುಪಕಾರ ಬಯಸಿ ತಮ್ಮನ್ನು ಸಾಕುವುದೆಂದು ಅವರದಕ್ಕೆ ಬೆಲೆ ಕಟ್ಟುತ್ತಾರೆ. ಇದು ಅವರಲ್ಲಿ ನಿರಾಶೆ ಮತ್ತು ದ್ವೇಷವನ್ನುಂಟು ಮಾಡುತ್ತದೆ. ವಾಸ್ತವದಲ್ಲಿ ತಂದೆ-ತಾಯಿಗಳು ಅವರಿಗಾಗಿ ಸಹಿಸಿದ ತ್ಯಾಗ-ಬಲಿದಾನಗಳನ್ನು ಅವರು ಅನುಭವಿಸಿ ತಿಳಿಯಬೇಕು. ಅವರಲ್ಲಿ ಅದರ ಪ್ರಜ್ಞೆ ಬೆಳೆದು ಬರಬೇಕು. ಆಗ ಮಾತ್ರ ಮಕ್ಕಳು ಮಾತಾಪಿತರನ್ನು ನಿಸ್ವಾರ್ಥವಾಗಿ ಪ್ರೀತಿಸುತ್ತಾರೆ. ಅವರ ಹಕ್ಕು ಬಾಧ್ಯತೆಗಳನ್ನು ಅರಿಯುತ್ತಾರೆ.

❖❖❖❖

ದೂಷಣೆ ಮತ್ತು ಹೊಣೆಗಾರಿಕೆ

ನಮ್ಮಲ್ಲಿ ಯಾರು ಕೂಡಾ ಸ್ವತಃ ಬಯಸಿಯೋ, ಪರಿಶ್ರಮಪಟ್ಟೋ ಇಲ್ಲಿ ಜನಿಸಿಲ್ಲ, ನಮ್ಮ ದೇಶ, ನಾಡು, ಭಾಷೆ, ಕಾಲ ಇದ್ಯಾವುದನ್ನೂ ನಾವು ತೀರ್ಮಾನಿಸಲಿಲ್ಲ, ಹಾಗೆಯೇ ನಮ್ಮ ಬೌದ್ಧಿಕ ಸಾಮರ್ಥ್ಯ, ಅದರ ಕೊರತೆ, ನೆನಪು ಶಕ್ತಿ, ಅದಿಲ್ಲದಿರುವುದು ಇತ್ಯಾದಿ. ನಮ್ಮ ಆಶೆ ಅಭಿಲಾಷೆಗಳಿಗೆ ಬದ್ಧವಾಗಿಲ್ಲ, ಆದರೆ ಹೆಚ್ಚಿನವರು ಇದು ಯಾವುದನ್ನೂ ನೆನೆಪಿಸುವುದಿಲ್ಲ, ವಿಶೇಷವಾಗಿ ತಂದೆ-ತಾಯಿಗಳು ಮತ್ತು ಅಧ್ಯಾಪಕರು. ಆದ್ದರಿಂದಲೇ ಬೌದ್ಧಿಕವಾಗಿ ಕೊರತೆ ಇರುವವರನ್ನು ಪೆದ್ದರೆಂದು ಕರೆದು ಹೀಯಾಳಿಸುತ್ತಾರೆ. ಕಲಿಯಲು ಹಿಂದೆ ಇದ್ದವರನ್ನು ಸೋಮಾರಿಗಳೆಂದು ಮುದ್ರೆ ಹಾಕಿ ಬಿಡುತ್ತಾರೆ. ಕಲಿತದ್ದನ್ನು ಕೂಡಲೇ ಮರೆತು ಬಿಡುವವರನ್ನು 'ಅರಣೆ'ಯಂತೆ ಎಂದು ಮೂದಲಿಸುತ್ತಾರೆ. ಇದೆಲ್ಲವೂ ಘೋರ ಪಾಪವಾಗಿದೆ. ಮಕ್ಕಳನ್ನು ಅವರದಲ್ಲದ ಕಾರಣಗಳಿಗಾಗಿ, ಕೊರತೆಗಳ ಹೆಸರಲ್ಲಿ ಶಿಕ್ಷಿಸುವುದು ನ್ಯಾಯಕ್ಕೆ ವಿರುದ್ಧವಾಗಿದೆ.

ಆದ್ದರಿಂದ ಮಕ್ಕಳು ಬುದ್ಧಿಶಕ್ತಿ ಹಾಗೂ ನೆನಪು ಶಕ್ತಿಯಲ್ಲಿ ಇತರರಿಗಿಂತ ಹಿಂದಿದ್ದರೆ ಅದರ ಕಾರಣವನ್ನು ಕಂಡುಹಿಡಿಯಬೇಕು. ಕೆಲವೊಮ್ಮೆ ದೈಹಿಕವಾಗಿರಬಹುದು. ಹಲವು ರೀತಿಯ ದೈಹಿಕ ಸಮಸ್ಯೆಗಳು, ರೋಗ, ಮಕ್ಕಳ ಬೌದ್ಧಿಕ ಶಕ್ತಿ ಮತ್ತು ಅವರ ಕಲಿಕೆಯ ಮೇಲೆ ಪ್ರತಿಕೂಲ ಪರಿಣಾಮ ಬೀಳುತ್ತದೆ. ಕಲಿಕಾ ದೌರ್ಬಲ್ಯ (Learning disability) ಹಲವು ರೀತಿಗಳಲ್ಲಿರಬಹುದು. ಓದಲು ಕಷ್ಟವಾಗುವುದು (Disclosia) ಬರೆಯಲು ಕಷ್ಟವಾಗುವುದು, ಲೆಕ್ಕ ಮಾಡಲು ಸಾಧ್ಯವಾಗದಿರುವುದು (Discaleulia), ಸ್ವಲ್ಪವೂ ಗಮನಿಸದಿರುವುದು (Attention debicit), ಒಂದೇ ಕಡೆಯಲ್ಲಿ ಕುಳಿತಿರಲು ಸಾಧ್ಯವಾಗದಿರುವುದು (Hyper activity disorder) ಇತ್ಯಾದಿ ಉದಾಹರಣೆಗಳು. ಇಂತಹ ದೌರ್ಬಲ್ಯಗಳಿರುವ ಮಕ್ಕಳನ್ನು ಅರ್ಥೈಸದೆ ತಮಾಷೆ ಮಾಡಿದರೆ, ಅವರನ್ನೇ ತಪ್ಪಿತಸ್ಥರೆಂದು ಹೇಳಿದರೆ, ಇತರರಿಗೆ ಹೋಲಿಸಿದರೆ ಅದು ಅವರಲ್ಲಿ ಅತಿಯಾದ ಪಾಪಪ್ರಜ್ಞೆ ಉಂಟಾಗಿ ಅವರಲ್ಲಿ ಆತ್ಮವಿಶ್ವಾಸವನ್ನು ನಷ್ಟಪಡಿಸುತ್ತದೆ. ಭವಿಷ್ಯದಲ್ಲಿ ಅವರು ಸಮಾಜದ್ರೋಹಿಗಳಾಗುವ ಸಾಧ್ಯತೆಯೇ ಹೆಚ್ಚು.

ಆದ್ದರಿಂದ ಸೂಕ್ತ ಡಾಕ್ಟರರನ್ನು ಭೇಟಿ ಮಾಡಿ ದೈಹಿಕ ಮಾನಸಿಕ ಸಮಸ್ಯೆಗಳಿಲ್ಲವೆಂಬುದನ್ನು ಖಚಿತಪಡಿಸಬೇಕು. ನಂತರವೂ ಅದೇ ಸ್ಥಿತಿ ಮುಂದುವರಿದರೆ ಕೌನ್ಸಿಲಿಂಗ್ ಮಾಡಿಸಿ ಸಮಸ್ಯೆಯನ್ನು ಕಂಡುಹಿಡಿಯಬೇಕು. ಹೀಗೆ ಹಿಂದುಳಿಯುವಿಕೆಯ ಕಾರಣಗಳನ್ನು ಕಂಡು

ಹಿಡಿದು ಪರಿಹರಿಸಬೇಕು ಅಥವಾ ಬೌದ್ಧಿಕವಾಗಿ, ನೆನಪು ಶಕ್ತಿ ಕಡಿಮೆಗೆ ಕಾರಣ ಜನ್ಮಸಿದ್ಧವಾಗಿದ್ದರೆ ಮಗುವಿನ ಸಾಮರ್ಥ್ಯಕ್ಕನುಗುಣವಾದ ವಿದ್ಯಾಭ್ಯಾಸ ಮತ್ತು ಕೆಲಸ ಕೊಡಬೇಕು. ಮಗುವನ್ನು ಪರಿಶೀಲಿಸಿ ನಂತರ ಅದಕ್ಕೆ ಹೊಂದಿಕೊಳ್ಳುವ ರೀತಿಯನ್ನು ಅವಲಂಬಿಸಬೇಕು. ಆದರೆ ಯಾವ ಕಾರಣಕ್ಕೂ ಈ ವಿಷಯದಲ್ಲಿ ಮಕ್ಕಳನ್ನು ಜರೆಯಬಾರದು,. ಹೀಯಾಳಿಸಬಾರದು. ಅದು ಮಕ್ಕಳನ್ನು ಧಿಕ್ಕಾರಿಗಳಾಗಿ ಮಾರ್ಪಡಿಸಲು ಕಾರಣವಾಗುತ್ತದೆ.

ಪೆದ್ದ, ಮಂದಬುದ್ಧಿ, ಯಾವುದಕ್ಕೂ ಸಲ್ಲದವನು ಎಂಬಿತ್ಯಾದಿಯಾಗಿ ಮಕ್ಕಳನ್ನು ನಿರಂತರ ದೂಷಿಸುತ್ತಿದ್ದರೆ ಅವರು ಶೀಘ್ರದಲ್ಲೇ ಆ ರೀತಿಯಾಗಿ ಬಿಡುತ್ತಾರೆ ಎಂಬುದನ್ನು ಮರೆಯಬಾರದು. ಕೆಲವೊಮ್ಮೆ ರೋಗಿಗಳಾಗಬಹುದು. ಮಕ್ಕಳ ಮಧ್ಯೆ ಸಂಪೂರ್ಣ ನ್ಯಾಯ ಪಾಲಿಸಲು ತಂದೆ-ತಾಯಿಗಳು ಬಾಧ್ಯಸ್ಥರಾಗಿದ್ದಾರೆ. ಅವರ ಮಧ್ಯೆ ಭೇದ-ಭಾವ ತೋರುವುದು ಅನ್ಯಾಯವಾಗಿದೆ. ಆದ್ದರಿಂದಲೇ ಅದು ಅತಿ ದೊಡ್ಡ ಪಾಪವಾಗಿದೆ.

ನುಅ್‌ಮಾನ್ ಬಿನ್ ಬಶೀರ್(ರ) ತನ್ನ ಅನುಭವವನ್ನು ವಿವರಿಸುತ್ತಾರೆ: ಒಮ್ಮೆ ನನ್ನ ತಂದೆ ನನ್ನನ್ನು ಕರೆದುಕೊಂಡು ಪ್ರವಾದಿಯವರ(ಸ) ಬಳಿಗೆ ಬಂದು, ''ಓ ಪ್ರವಾದಿವರ್ಯರೇ(ಸ) ನನ್ನ ಬಳಿ ಓರ್ವ ಗುಲಾಮನಿದ್ದ, ನಾನವನನ್ನು ಈ ಹುಡುಗನಿಗೆ ನೀಡಿದೆ'' ಎಂದರು. ಆಗ ಪ್ರವಾದಿಯವರು(ಸ) ''ನೀವು ನಿಮ್ಮ ಎಲ್ಲ ಮಕ್ಕಳಿಗೆ ಒಬ್ಬೊಬ್ಬ ಗುಲಾಮನನ್ನು ನೀಡಿರುವಿರಾ?'' ಎಂದು ಕೇಳಿದರು. ಹ. ಬಶೀರ್(ರ) 'ಇಲ್ಲ' ಎಂದಾಗ ಪ್ರವಾದಿ(ಸ), ''ಈ ಗುಲಾಮನನ್ನು ನೀವು ಹಿಂದಕ್ಕೆ ಪಡೆಯಿರಿ. ದೇವನನ್ನು ಭಯಪಡಿರಿ. ನಿಮ್ಮ ಮಕ್ಕಳ ಜೊತೆ ಸಮಾನತೆಯ ವ್ಯವಹಾರ ಮಾಡಿರಿ'' ಎಂದು ಆದೇಶಿಸಿದರು. ಅದರಂತೆ ಮನೆಗೆ ಮರಳಿದಾಗ ಹ.ಬಶೀರ್(ರ) ಆ ಗುಲಾಮನನ್ನು ಹಿಂತೆಗೆದುಕೊಂಡರು. ಇನ್ನೊಂದು ವರದಿಯಂತೆ ಪ್ರವಾದಿ(ಸ) ಹಾಗಾದರೆ ''ನನ್ನನ್ನು ಪಾಪಕ್ಕೆ ಸಾಕ್ಷಿಯಾಗಿಸದಿರಿ. ನಾನು ಅನ್ಯಾಯಕ್ಕೆ ಸಾಕ್ಷಿಯಾಗಲಾರೆ'' ಎಂದರು. ಮತ್ತೊಂದು ವರದಿಯಂತೆ ಪ್ರವಾದಿ(ಸ) ಎಲ್ಲಾ ಮಕ್ಕಳೂ ನಿಮ್ಮೊಂದಿಗೆ ಉತ್ತಮ ವ್ಯವಹಾರ ಮಾಡಬೇಕೆಂದು ನೀವು ಬಯಸುವುದಿಲ್ಲವೇ? ಎಂದು ಪ್ರಶ್ನಿಸಿದರು. ಬಶೀರ್(ರ) ಹೌದೆಂದಾಗ, ''ಹಾಗಿದ್ದರೆ ಇಂತಹ ಕೆಲಸ ಮಾಡದಿರಿ'' ಎಂದು ಹೇಳಿದರು. (ಮುತ್ತಫಕುನ್ ಅಲೈಹಿ)

ಸ್ವಭಾವ ಮತ್ತು ವ್ಯವಹಾರದಲ್ಲಿ ತಾರತಮ್ಯ ತೋರಿಸುವುದು ಆರ್ಥಿಕ ತಾರತಮ್ಯಕ್ಕಿಂತ ಗುರುತರವಾಗಿದೆ. ಆದ್ದರಿಂದ ಮಕ್ಕಳಲ್ಲಿ ಕೆಲವರನ್ನು ಪ್ರಶಂಸಿಸುವುದು, ಕೆಲವರನ್ನು ಮಾತ್ರ ಪ್ರೋತ್ಸಾಹಿಸುವುದು, ಹೊಗಳುವುದು, ಇನ್ನು ಕೆಲವರನ್ನು ದೂಷಿಸುವುದು, ಹೀಯಾಳಿಸುವುದು ಅತಿಕ್ರಮವಾಗಿದೆ. ಹೆಚ್ಚಿನ ತಂದೆ-ತಾಯಿಗಳು ಇತರರ ಮುಂದೆ ತಮ್ಮ ಮಕ್ಕಳ ಮಧ್ಯೆ ಭೇದ-ಭಾವ ತೋರಿಸುತ್ತಾರೆ. ಕೆಲವು ಮಕ್ಕಳ ಒಳಿತುಗಳನ್ನು ಹೊಗಳಿ ಇತರ ಮಕ್ಕಳ ತಪ್ಪುಗಳನ್ನೂ, ಕುಂದುಕೊರತೆಗಳನ್ನೂ ಎತ್ತಿ ಹೇಳುತ್ತಾರೆ. ಇಂತಹ ದೂಷಣೆಗೊಳಗಾಗುವ ಮಗು ಕೀಳರಿಮೆಗೆ ತುತ್ತಾಗಿ ಕ್ರಮೇಣ ಯಾವುದಕ್ಕೂ ಸಲ್ಲದವನಾಗಿ ಮಾರ್ಪಡುತ್ತಾನೆ.

ತಂದೆ-ತಾಯಿಗಳಿಂದ ದೂರ ನಿಲ್ಲಲು ಪ್ರಯತ್ನಿಸುತ್ತಾನೆ. ಅದರೊಂದಿಗೆ ಹೊಗಳಲ್ಪಟ್ಟ ಸಹೋದರ ಅಥವಾ ಸಹೋದರಿಯೊಡನೆ ಅಸೂಯೆಯನ್ನು ಹೊಂದಲು ಕಾರಣವಾಗುತ್ತದೆ. ಹೀಗೆ ತಂದೆ-ತಾಯಿಗಳು ತಿಳಿದೋ, ತಿಳಿಯದೆಯೋ ಮಕ್ಕಳ ಮಧ್ಯೆ ಶತ್ರುತ್ವವನ್ನುಂಟು ಮಾಡುತ್ತಾರೆ.

ತಾರತಮ್ಯ ನೀತಿಯಿಂದ ಬೆಳೆದ ಮಕ್ಕಳು ಯಾರೊಂದಿಗೆ ಅವರನ್ನು ಭೇದ-ಭಾವ ತೋರಿಸಲಾಗಿತ್ತೋ ಅವರನ್ನು ಶತ್ರುಗಳಂತೆ ಕಾಣುತ್ತಾರೆ. ಕೆಲವೊಮ್ಮೆ ಅವರ ಮಧ್ಯೆ ಅನಾರೋಗ್ಯಕರವಾದ ಪೈಪೋಟಿ ನಡೆಯುತ್ತಿರುತ್ತದೆ. ಅವರಿಗಿಂತ ಉನ್ನತರಾಗಲು, ಶ್ರೀಮಂತರಾಗಲು ಸಮಾಜದಲ್ಲಿ ಸ್ಥಾನಮಾನ ಗಳಿಸಲು ಅಡ್ಡ ದಾರಿಗಳನ್ನು ಹಿಡಿಯುವ ಸಾಧ್ಯತೆಗಳಿರುತ್ತವೆ. ದುರ್ಬಲ ಮನಸ್ಕರು ಯಾರಾದರೂ ತಮ್ಮನ್ನು ಪ್ರೀತಿಸುವುದಾಗಿ ಅಥವಾ ಪರಿಗಣಿಸುವುದಾಗಿ ಕಂಡರೆ ಅದನ್ನು ನಿರಂತರ ಅನುಭವಿಸಲು ಅಡ್ಡ ದಾರಿಗಳನ್ನು ಕ್ರಮಿಸುತ್ತಾರೆ. ಕ್ಷಣಿಕವಾದ ಸಿಟ್ಟಿನಿಂದಲೋ ಅಜ್ಞಾನದಿಂದಲೋ ಭೇದ-ಭಾವ ತೋರಿಸುವವರು ಭವಿಷ್ಯದಲ್ಲಿ ಎದುರಿಸಬೇಕಾದ ಇಂತಹ ಸಮಸ್ಯೆಗಳ ಕಡೆಗೆ ಗಮನಹರಿಸುವುದೇ ಇಲ್ಲ. ಆದ್ದರಿಂದ, ಯಾವುದೇ ಕಾರಣಕ್ಕೂ ಮಕ್ಕಳ ಮಧ್ಯೆ ಭೇದ-ಭಾವ ತೋರಿಸಬಾರದು. ಎಲ್ಲ ರೀತಿಯ ತಾರತಮ್ಯ, ಅನ್ಯಾಯಗಳನ್ನು ಸಂಪೂರ್ಣವಾಗಿ ತೊರೆಯಬೇಕು.

❖❖❖❖

ಉತ್ತಮ ಮತ್ತು ಕೆಟ್ಟ ಸ್ನೇಹಿತರು

ಕವಿವಾಣಿ ಮಾತ್ರವಲ್ಲ, ನಿರಾಕರಿಸಲಾಗದ ಜೀವನದ ವಾಸ್ತವಿಕತೆಯಾಗಿದೆ. ''ಸೆಗಣಿ ಪೂಸಿದರೆ ಸೆಗಣಿ ವಾಸನೆ ಬರುತ್ತದೆ. ಸುಗಂಧ ಪೂಸಿದರೆ ಸುಗಂಧ ಪರಿಮಳ ಬರುತ್ತದೆ'' ಎಂಬುದು ಅದೇ ರೀತಿಯಾಗಿದೆ.

ಪ್ರೀತಿ-ಸೌಹಾರ್ದಗಳನ್ನು ಸ್ಥಾಪಿಸುವಾಗ ಕಡ್ಡಾಯವಾಗಿ ಪಾಲಿಸಬೇಕಾದ ಸೂಕ್ಷ್ಮ ವಿಷಯಗಳ ಕಡೆಗೆ ಇದು ಬೆಳಕು ಚೆಲ್ಲುತ್ತದೆ.

ಕೆಡುಕಿಗೆ ಅನೇಕ ಮುಖಗಳಿವೆ. ಅದರ ಕಡೆಗೆ ಸೆಳೆಯುವ ಅನೇಕ ಮಾರ್ಗಗಳೂ ಇವೆ. ದುರ್ಮಾರ್ಗಗಳೂ ಬಹಳಷ್ಟಿವೆ. ಆದರೆ ನೇರ ಮಾರ್ಗ ಒಂದು ಮಾತ್ರ. ಆದ್ದರಿಂದಲೇ ಪವಿತ್ರ ಕುರ್‌ಆನ್ ಪಥಭ್ರಷ್ಟತೆಯನ್ನು ಅಂಧಕಾರಗಳೆಂದು ಬಹುವಚನ ರೂಪದಲ್ಲೂ, ಸನ್ಮಾರ್ಗವನ್ನು ಪ್ರಕಾಶವೆಂದು ಏಕವಚನ ರೂಪದಲ್ಲೂ ಪ್ರಯೋಗಿಸಿದೆ. (ಅಲ್‌ಬಕರ: 257, ಅಲ್‌ಮಾಇದ: 16, ಇಬ್ರಾಹೀಮ್: 5, ಅಲ್‌ಅಹ್‌ಝಾಬ್: 43, ಅಲ್‌ಹದೀದ್: 9 ಇತ್ಯಾದಿ ಸೂಕ್ತಗಳನ್ನು ನೋಡಿರಿ.)

ಆದ್ದರಿಂದ ಪಾಪಗಳ ಅಂಧಕಾರದಲ್ಲಿ ಬೀಳುವ ಸಾಧ್ಯತೆಗಳು ಧಾರಾಳ ಇವೆ. ಹಾಗಾಗದಿರಲು ಅತ್ಯಧಿಕ ಜಾಗ್ರತೆ ಪಾಲಿಸಬೇಕಾದುದು ಅಗತ್ಯ. ಸನ್ಮಾರ್ಗಲಬ್ಧಿಗೆ ಉತ್ತಮ ಪ್ರಜ್ಞೆ ಬೇಕಾಗಿದೆ.

ಹುಟ್ಟಿನಿಂದಲೇ ಎಲ್ಲ ಮಾನವರೂ ಶುದ್ಧ ಪ್ರಕೃತಿಯವರಾಗಿರುತ್ತಾರೆ. ತರುವಾಯ ಸನ್ನಿವೇಶಗಳು, ಸಮಾಜ ಅವರಲ್ಲಿ ಹೆಚ್ಚಿನವರನ್ನು ದಾರಿತಪ್ಪಿಸುತ್ತದೆ. ವಿಶೇಷವಾಗಿ ಸ್ನೇಹಿತರು, ಆಪ್ತ ಸ್ನೇಹಿತರ ಪ್ರಭಾವ ಪ್ರತಿಯೊಬ್ಬರಿಗೂ ಮಹತ್ವದ್ದಾಗಿರುತ್ತದೆ.

ಸ್ನೇಹಿತರು ಹೇಳುವುದನ್ನು ಕೇಳದವರು, ಆಜ್ಞಾಪಿಸಿದ್ದನ್ನು ಅನುಸರಿಸದವರು ವಿರಳ. ಕೆಲವರ ಜೀವನದಲ್ಲಿ ಸ್ವಂತ ತಂದೆ-ತಾಯಿಗಳಿಗಿಂತಲೂ ಸ್ನೇಹಿತರ ಪ್ರಭಾವ ಹೆಚ್ಚಿರುತ್ತದೆ. ಹೆಚ್ಚಿನವರ ಜೀವನವನ್ನು ಸ್ನೇಹಿತರೇ ನಿಯಂತ್ರಿಸುತ್ತಾರೆ. ಆದ್ದರಿಂದ ಸ್ನೇಹಿತರ ಆಯ್ಕೆ ಅತಿ ಪ್ರಧಾನವಾಗಿದೆ.

ಮಿತ್ರತ್ವದ ಮಹತ್ವವನ್ನು ಸ್ಪಷ್ಟಪಡಿಸುವ ಅನೇಕ ಕುರ್‌ಆನ್ ಸೂಕ್ತಗಳಿವೆ. ಭೂಮಿಯ ಮೇಲೆ ಕೆಟ್ಟ ಸ್ನೇಹಿತರನ್ನು ಆಯ್ಕೆ ಮಾಡಿರುವುದರ ಪರಿಣಾಮವಾಗಿ ಪರಲೋಕದಲ್ಲಿ ಸಿಗುವ

ಮಹಾ ನಷ್ಟದ ಬಗ್ಗೆ ಅದು ಕಟುವಾದ ಭಾಷೆಯಲ್ಲಿ ಎಚ್ಚರಿಕೆ ನೀಡುತ್ತದೆ. ಸ್ನೇಹಿತನಿಂದ ದಾರಿತಪ್ಪಿದ ದುರ್ದೈವಿ ವಿಚಾರಣೆಯ ದಿನದಂದು ಈ ರೀತಿ ಗೋಳಿಡುವನು: **''ಆ ದಿನ ಅಕ್ರಮಿಯು ತನ್ನ ಕೈಗಳನ್ನು ಕಚ್ಚಿಕೊಳ್ಳುವನು ಮತ್ತು ಅಕಟ! ನಾನು ಪ್ರವಾದಿಯವರೊಂದಿಗೆ ಸಹಕರಿಸುತ್ತಿದ್ದರೆ! ಅಯ್ಯೋ ನನ್ನ ದುರ್ದೆಸೆಯೇ! ಅಕಟ! ನಾನು ಆ ವ್ಯಕ್ತಿಯನ್ನು ಮಿತ್ರನಾಗಿ ಮಾಡಿಕೊಳ್ಳದಿರುತ್ತಿದ್ದರೆ! ಅವನ ದುರ್ಬೋಧನೆಗೆ ಮರುಳಾಗಿ ನನ್ನ ಬಳಿಗೆ ಬಂದಿದ್ದ ಸದ್ಬೋಧನೆಯನ್ನು ನಾನು ಸ್ವೀಕರಿಸಲಿಲ್ಲ. ಶೈತಾನನು ಮಾನವನ ಮಟ್ಟಿಗೆ ಮಹಾ ವಿಶ್ವಾಸ ಘಾತುಕನಾಗಿ ಬಿಟ್ಟನು''** ಎಂದು ಹೇಳುವನು. (ಸೂರಃ ಅಲ್‌ಫುರ್ಕಾನ್: 27–29)

ಕೆಟ್ಟ ಸ್ನೇಹಿತರು ಅಂದು ಪರಸ್ಪರ ದೂಷಿಸುವರು: **''ಆ ದಿನ ಬಂದಾಗ ಧರ್ಮನಿಷ್ಠರ ಹೊರತು ಇತರೆಲ್ಲ ಮಿತ್ರರೂ ಪರಸ್ಪರ ಶತ್ರುಗಳಾಗಿ ಬಿಡುವರು.''**

(ಸೂರಃ ಅಝ್ಝುಖ್‌ರುಫ: 67)

ಪ್ರವಾದಿ(ಸ) ಹೇಳುತ್ತಾರೆ: ''ಮಾನವನು ತನ್ನ ಸ್ನೇಹಿತನ ಧರ್ಮದಲ್ಲಿರುತ್ತಾನೆ. ಆದ್ದರಿಂದ ನಿಮ್ಮ ಪೈಕಿ ಪ್ರತಿಯೊಬ್ಬರೂ ಯಾರೊಂದಿಗೆ ಮಿತ್ರತ್ವ ಬೆಳೆಸಬೇಕೆಂದು ಯೋಚಿಸಿ ತೀರ್ಮಾನಿಸಲಿ.'' (ತಿರ್ಮಿದಿ)

''ಮಾನವನು ತನ್ನ ಸ್ನೇಹಿತನ ಜೊತೆಗಿರುತ್ತಾನೆ. ಪ್ರತಿಯೊಬ್ಬನಿಗೂ ತಾನು ಸಂಪಾದಿಸಿದ್ದು ಮಾತ್ರ ಸಿಗುತ್ತದೆ.'' (ತಿರ್ಮಿದಿ)

''ಕೆಟ್ಟ ಸ್ನೇಹಿತನ ಬಗ್ಗೆ ಎಚ್ಚರ ವಹಿಸಿರಿ. ಏಕೆಂದರೆ ನೀವು ಅವನ ಹೆಸರಲ್ಲಿ ಗುರುತಿಸಲ್ಪಡುತ್ತೀರಿ.'' (ಇಬ್ನು ಅಸಾಕಿರ್)

ಒಳ್ಳೆಯ ಮತ್ತು ಕೆಟ್ಟ ಸ್ನೇಹಿತರ ಉದಾಹರಣೆಯು ಸುಗಂಧ ದ್ರವ್ಯದ ವ್ಯಾಪಾರಿ ಮತ್ತು ಕಮ್ಮಾರನಂತಿದೆ. ಸುಗಂಧ ದ್ರವ್ಯದ ವ್ಯಾಪಾರಿಯಿಂದ ನಿಮಗೆ ಪ್ರಯೋಜನವಾಗುವುದು ಖಚಿತ. ಒಂದೋ ನೀವು ಸುಗಂಧ ದ್ರವ್ಯ ಖರೀದಿಸಬಹುದು. ಇಲ್ಲವಾದರೆ ಅದರ ಪರಿಮಳ ವಾದರೂ ನಿಮಗೆ ದೊರಕಬಹುದು. ಕಮ್ಮಾರನ ಒಲೆಯು ನಿಮ್ಮ ವಸ್ತುವನ್ನು ಸುಟ್ಟೀತು ಅಥವಾ ನಿಮಗೆ ಅದರ ಹೊಗೆಯಾದರೂ ತಲುಪಬಹುದು. (ಬುಖಾರಿ, ಮುಸ್ಲಿಮ್)

ಮಕ್ಕಳ ಸ್ನೇಹಿತರು ಯಾರೆಂಬುದನ್ನು ತಂದೆ–ತಾಯಿಗಳು ಸದಾ ಗಮನಿಸುತ್ತಿರಬೇಕು. ವಿಶೇಷವಾಗಿ ತಮ್ಮ ಮಕ್ಕಳು ಇತರರ ಮೇಲೆ ಪ್ರಭಾವ ಬೀಳಲು ಸಾಮರ್ಥ್ಯವಿಲ್ಲದವರೂ, ದುರ್ಬಲ ಮನಸ್ಕರೂ ಆಗಿರುವಾಗ, ಇಂತಹವರು ಅತೀ ಶೀಘ್ರ ಇತರರಿಂದ ಆಕರ್ಷಿತರಾಗು ತ್ತಾರೆ. ಆದ್ದರಿಂದ ಮಕ್ಕಳ ಸ್ನೇಹಿತರು, ಸಹವರ್ತಿಗಳು ಉತ್ತಮರಾಗಿದ್ದಾರೋ ಎಂಬುದನ್ನು ಖಚಿತಪಡಿಸಬೇಕು. ಕೆಟ್ಟ ಸ್ನೇಹಿತರ ಸಹವಾಸದಲ್ಲಿ ಬೀಳದಿರಲು ಸದಾ ಜಾಗ್ರತೆ ವಹಿಸಬೇಕು. ಆದರೆ ತಂದೆ–ತಾಯಿಗಳು ಈ ರೀತಿಯಲ್ಲಿ ನಮ್ಮನ್ನು ಗಮನಿಸುತ್ತಿದ್ದಾರೆಂದು ಅವರಿಗೆ ಸಂಶಯ ಬರಬಾರದು. ಹಾಗೆಯೇ ಮಕ್ಕಳೊಂದಿಗೆ ಯಾರನ್ನು ಸ್ನೇಹಿತರನ್ನಾಗಿ ಸ್ವೀಕರಿಸ ಬಹುದು. ಯಾರನ್ನು ಸ್ವೀಕರಿಸಬಾರದೆಂದು ಆದೇಶಿಸಲೂ ಬಾರದು. ಹಾಗೆ ಮಾಡಿದರೆ

ಮಕ್ಕಳಲ್ಲಿ ಧಿಕ್ಕಾರ ಭಾವನೆ ಬೆಳೆಯುತ್ತದೆ. ಅದರ ವಿರುದ್ಧ ಕಾರ್ಯ ಪ್ರವೃತ್ತರಾಗಲು ಅವರನ್ನು ಅದು ಪ್ರೇರೇಪಿಸುತ್ತದೆ.

ಉತ್ತಮ ಸ್ನೇಹಿತರನ್ನು ಸದಾ ಮನೆಗೆ ಆಹ್ವಾನಿಸಿ, ಸ್ವಂತ ಮಕ್ಕಳೊಂದಿಗೆ ಆಟವಾಡಲು, ಆಹಾರ ಸೇವಿಸಲು, ಮಾತನಾಡಲು ಯುಕ್ತಿಯಿಂದ ಅವಕಾಶ ಒದಗಿಸಬೇಕು. ಹೀಗೆ ಅವರನ್ನು ತಮ್ಮ ಮಕ್ಕಳ ಉತ್ತಮ ಸ್ನೇಹಿತರನ್ನಾಗಿ ಮಾರ್ಪಡಿಸಬೇಕು. ಉತ್ತಮ ಸ್ನೇಹಿತರ ಜೊತೆ ವಿಹಾರಕ್ಕೆ ಕಳುಹಿಸಿ ಕೊಡಬೇಕು. ಹೀಗೆ ಬಹಳ ತಂತ್ರಗಾರಿಕೆಯಿಂದ, ಪ್ರಜ್ಞಾಪೂರ್ವಕವಾಗಿ ಮಕ್ಕಳಿಗೆ ಸಚ್ಚರಿತರಾದ ಸ್ನೇಹಿತರನ್ನು ಒದಗಿಸಿಕೊಡಬೇಕು.

ಉತ್ತಮ ಸ್ನೇಹ ಸಂಬಂಧಗಳೂ ಕೆಲವೊಮ್ಮೆ ದಾರಿ ತಪ್ಪಲು ಕಾರಣವಾಗುತ್ತದೆ. ಆದ್ದರಿಂದ ನಮ್ಮ ಮಕ್ಕಳ ಸ್ನೇಹಿತರ ತಂದೆ-ತಾಯಿಗಳನ್ನು ನಮ್ಮ ಸ್ನೇಹಿತರನ್ನಾಗಿ ಮಾಡಬೇಕು. ಇದು ಉನ್ನತ ಕುಟುಂಬ ಸಂಬಂಧಕ್ಕೂ ದಾರಿ ಸುಗಮಗೊಳಿಸಬಹುದು.

❖❖❖❖

ಅಭಿನಂದಿಸಲು ಹಿಂಜರಿಯದಿರಿ

ಕತರ್ ಸಂದರ್ಶನದಲ್ಲಿ ಒಂದು ಕಾರ್ಯಕ್ರಮದ ಕೊನೆಯ ದಿನ ದೋಹದಲ್ಲಿ ಒಂದು ಕುಟುಂಬ ಸಮ್ಮಿಲನ ನಡೆದಿತ್ತು. ಅನೇಕ ಧರ್ಮದವರು ಸೇರಿದ್ದ ಪ್ರಸ್ತುತ ಕಾರ್ಯಕ್ರಮದಲ್ಲಿ ಕುಟುಂಬ ಜೀವನದ ಬಗ್ಗೆ ಮಾತನಾಡಿದ್ದೆ. ಭಾಷಣ ಮುಗಿಸಿ ಕುರ್ಚಿಯಲ್ಲಿ ಕುಳಿತುಕೊಂಡಾಗ ಒಂದು ಸಣ್ಣ ಮಗು ಓಡಿ ಬಂದು ನನ್ನ ಕೈಯಲ್ಲಿ ಒಂದು ಕಾಗದ ನೀಡಿತು. ಅದರಲ್ಲಿ ಏನಾದರೊಂದು ಬರೆದು ಸಹಿ ಹಾಕಿಕೊಡಬೇಕೆಂದು ಆ ಮಗು ಹೇಳಿತು. ಮಗುವಿನ ಹೆಸರು ಅಮೃತ. ಕತರ್ ಇಂಡಿಯನ್ ಇಂಗ್ಲೀಷ್ ಮೀಡಿಯಂ ಶಾಲೆಯ ಮೂರನೇ ತರಗತಿಯಲ್ಲಿ ಕಲಿಯುತ್ತಿದ್ದಾಳೆ. ಆ ಮಗುವಿನ ಬೇಡಿಕೆಗನುಸಾರ ಬರೆದುಕೊಟ್ಟೆ. ಅವಳು ತನ್ನ ಹತ್ತಿರವಿದ್ದವರ ಕೈಯಲ್ಲಿ ಕ್ಯಾಮರಾ ಕೊಟ್ಟು ನಮ್ಮೊಟ್ಟಿಗೆ ಕುಳಿತು ಫೋಟೋ ತೆಗೆಸಿದಳು. ಆಗಲೇ ಅವಳ ಅಮ್ಮ ಹತ್ತಿರ ಬಂದರು. ಅಮೃತ ಹೇಳಿದಳು, ''ನನ್ನ ಈ ಮಮ್ಮಿ ಮಾಮ ಹೇಳಿದ ಹಾಗೆಯೇ ಇದ್ದಾರೆ. ಪರೀಕ್ಷೆಯಲ್ಲಿ ಯಾವಾಗಲಾದರೊಮ್ಮೆ ಮೊದಲ ಸ್ಥಾನ ಸಿಗದಿದ್ದರೆ ಬೈಯುತ್ತಾರೆ. ನಿರಂತರ ಬೈಯುತ್ತಿರುತ್ತಾರೆ. ನಾನು ಎಲ್ಲ ಕಲಿಸಿ ಕಳಿಸಿದ್ದೆನಲ್ಲ ಎಂದು ಕಿರಿಕಿರಿ ಮಾಡುತ್ತಾರೆ. ಮಾಮ ಹೇಳಿದಂತೆ ನೂರರಲ್ಲಿ 95 ಸಿಕ್ಕಿದರೆ ಒಂದು ಒಳ್ಳೆಯ ಮಾತು ಕೂಡಾ ಹೇಳುವುದಿಲ್ಲ. ನೂರು ಮಾರ್ಕ್ ಸಿಗದಿದ್ದಕ್ಕೆ ಒಂದೊಂದು ಹೇಳಿ ತೊಂದರೆ ಪಡಿಸುತ್ತಾರೆ.'' ಆಗ ಅಮ್ಮ ಹೇಳಿದರು: ''ಅವಳು ಹೇಳಿದ ಮಾತು ನಿಜ. ಹಾಗೆಯೇ ನಾನು ಮಾಡುತ್ತಿದ್ದೆ. ನಾನು ಅವಳ ಒಳಿತು ಬಯಸಿದ್ದೆ. ನಿಮ್ಮ ಮಾತು ಕೇಳಿ ತಪ್ಪಿನ ಅರಿವಾಯಿತು. ಇನ್ನು ಮುಂದೆ ನಾನು ಅವಳನ್ನು ಬೈಯಲಾರೆ.'' ಇದನ್ನು ಆಲಿಸಿದ ಅಮೃತಳ ಕಣ್ಣುಗಳು ಮಂಜಾದುವು. ಅಮ್ಮ ಅವಳನ್ನು ಅಪ್ಪಿಹಿಡಿದು ಸಮಾಧಾನ ಪಡಿಸಿದರಾದರೂ, ಕಠಿಣ ಮನೋವ್ಯಥೆ ಅನುಭವಿಸುತ್ತಿದ್ದ ಒಂದು ಪುಟ್ಟ ಮಗುವಿಗೆ ಸಾಂತ್ವನ ನೀಡಲು ಸಾಧ್ಯವಾದುದರಲ್ಲಿ ಸಂತೋಷವೂ ಸಮಾಧಾನವೂ ಆಯಿತು. ಅದಕ್ಕೆ ಅನುಗ್ರಹಿಸಿದ ದೇವನನ್ನು ಸ್ತುತಿಸಿದೆ.

ಇಂದು ಹೆಚ್ಚಿನ ಮಕ್ಕಳು ಅಮೃತಳಂತೆ ಮಾನಸಿಕವಾಗಿ ಸಂಕಷ್ಟ ಅನುಭವಿಸುತ್ತಿದ್ದಾರೆ. ವಿಶೇಷವಾಗಿ ದೊಡ್ಡ ಕುಟುಂಬದ ಮಕ್ಕಳು. ತಂದೆ-ತಾಯಿಗಳು ವಿದ್ಯಾವಂತರು, ಉದ್ಯೋಗಸ್ಥರೂ ಆಗಿದ್ದರೆ ಹೇಳುವುದೇ ಬೇಡ. ಇದರಿಂದ ಮಕ್ಕಳಿಗೆ ಸ್ವಲ್ಪವೂ ಸಮಾಧಾನ ಸಿಗಲಾರದು. ಅವರು ಯಾವಾಗಲೂ ಅಸ್ವಸ್ಥರಾಗಿರುತ್ತಾರೆ. ಕಲಿಯುವಾಗಲೂ,

ಪರೀಕ್ಷೆ ಬರೆಯುವಾಗಲೂ ಅಂಕ ಕಡಿಮೆಯಾಗಬಹುದೋ ಎಂಬ ಭಯ ಅವರನ್ನು ಕಾಡುತ್ತಿರುತ್ತದೆ. ಹಾಗೇನಾದರೂ ಸಂಭವಿಸಿದರೆ ತಂದೆ-ತಾಯಿಗಳ ಪ್ರತಿಕ್ರಿಯೆಯನ್ನು ನೆನಪಿಸಿ ಭಯಭೀತರಾಗುತ್ತಾರೆ.

ಹೆಚ್ಚಿನ ತಂದೆ-ತಾಯಿಗಳು ಮಕ್ಕಳನ್ನು ಅಭಿನಂದಿಸಲು, ಪ್ರೋತ್ಸಾಹಿಸಲು ಜಿಪುಣತೆ ತೋರುತ್ತಾರೆ. ಅದೇ ವೇಳೆ ಮಕ್ಕಳು ಹಿರಿಯರ ಅಭಿನಂದನೆ, ಪ್ರೋತ್ಸಾಹಗಳನ್ನು ನಿರೀಕ್ಷಿಸುತ್ತಿರು ತ್ತಾರೆ. ಒಳ್ಳೆಯ ಕೆಲಸ ಮಾಡಿದಾಗ ಅಭಿನಂದಿಸಿದರೆ ನಂತರ ಮಾಡುವ ಕೆಲಸ ವನ್ನು ಇನ್ನಷ್ಟು ಉತ್ತಮವಾಗಿ ನಿರ್ವಹಿಸುತ್ತಾರೆ. ಪರೀಕ್ಷೆಯಲ್ಲಿ ಗಳಿಸಿದ ಅಂಕದ ಬಗ್ಗೆ ಸಂತೋಷ ವ್ಯಕ್ತಪಡಿಸು ತ್ತಿರಬೇಕು. ಪ್ರಶಂಸಿಸಿದರೆ ಮುಂದಿನ ಪರೀಕ್ಷೆಯಲ್ಲಿ ಹೆಚ್ಚು ಅಂಕ ಗಳಿಸಲು ಬಯಸುತ್ತಾರೆ. ಇದು ಪ್ರತಿಯೊಬ್ಬ ಮನುಷ್ಯನ ಸಹಜ ಪ್ರಕೃತಿಯಾಗಿದೆ. ತಾಯಂದಿರು ತಮ್ಮ ಜೀವನ ಸಂಗಾತಿಯ ಅಭಿನಂದನೆ, ಉತ್ತಮ ಮಾತುಗಳು ತನ್ನಲ್ಲಿ ಉಂಟು ಮಾಡುವ ಸಂತೋಷ ಹಾಗೂ ಅದು ನೀಡುವ ಪ್ರಚೋದನೆಗಳ ಬಗ್ಗೆ ತಿಳಿದವರಲ್ಲವೇ? ಮೇಲಧಿಕಾರಿಗಳ ಅಭಿನಂದನೆಗಳು ಕೆಲಸದಾಳುಗಳನ್ನು ಆವೇಶಭರಿತರನ್ನಾಗಿಸುತ್ತದೆ. ನಾಯಕರ ಇಂತಹ ವ್ಯವಹಾರಗಳು ಅನುಯಾಯಿಗಳಲ್ಲಿ ಕರ್ಮೋತ್ಸಾಹ ಬೆಳೆಸುತ್ತದೆ. ಪ್ರವಾದಿಯವರು(ಸ) ಕೂಡಾ ತನ್ನ ಅನುಯಾಯಿಗಳ ಮಹತ್ಕಾರ್ಯಗಳನ್ನು ಹೃದಯಾಂತರಾಳದಿಂದ ಹೊಗಳುತ್ತಿದ್ದರು. ಅದಕ್ಕಾಗಿ ಅವರಿಗೆ ಸಿದ್ದೀಕ್, ಅಲ್‌ಫಾರೂಕ್, ಅಸದುಲ್ಲಾಹ್, ಸೈಫುಲ್ಲಾ ಇತ್ಯಾದಿ ಬಿರುದು ಗಳನ್ನು ನೀಡುತ್ತಿದ್ದರು.

ದೂಷಿಸುವುದರಿಂದ ಯಾರೂ ಉತ್ತಮರಾಗುವುದಿಲ್ಲ, ಅದು ಮಕ್ಕಳಲ್ಲಿ ಭೀತಿ ಮತ್ತು ದ್ವೇಷವನ್ನುಂಟು ಮಾಡುತ್ತದೆ. ಮಕ್ಕಳು ಸಣ್ಣ ಪ್ರಾಯದಲ್ಲಿ ಒತ್ತಡ ಅನುಭವಿಸಿದರೆ ಅದು ಅವರ ಬೌದ್ಧಿಕ ಬೆಳವಣಿಗೆಗೆ ಅತ್ಯಧಿಕ ಬಾಧಿಸುತ್ತದೆ. ದೂಷಿಸುವುದರ ಮೂಲಕ ಅವರಲ್ಲಿ ಆಶಂಕೆಗಳನ್ನುಂಟು ಮಾಡುತ್ತದೆ. ಹೀಗೆ ಅವರ ಮಾನಸಿಕ ಆರೋಗ್ಯ ಕುಂಠಿತವಾಗುತ್ತದೆ. ಹಿರಿಯರ ಮೇಲೆಯೇ ಆಕ್ಷೇಪ, ದೂಷಣೆಗಳು ಉತ್ತಮ ಪರಿಣಾಮ ಬೀರುವುದಿಲ್ಲ, ಆದ್ದರಿಂದ ಮಕ್ಕಳು ಬೆಳೆಯಲು, ಉನ್ನತರಾಗಲು, ಅಭಿವೃದ್ಧಿ ಹೊಂದಲು ಅವರನ್ನು ದೂಷಿಸುವುದಕ್ಕಿಂತ ಅಭಿನಂದಿಸುವುದರಿಂದ, ಪ್ರೋತ್ಸಾಹಿಸುವುದರಿಂದ ಸಾಧ್ಯವಾಗುತ್ತದೆ.

ಆದರೆ ಅತಿಯಾದರೆ ಅಮೃತವೂ ವಿಷ ಅಂದ ಹಾಗೆ ಅಭಿನಂದನೆ, ಪ್ರಶಂಸೆಗಳು ಮೇರೆ ಮೀರಿದರೆ ಅಪಾಯಕ್ಕೆ ಕಾರಣವಾಗುತ್ತದೆ. ಒಳ್ಳೆಯ ಕೆಲಸ ಮಾಡಿದಾಗ ಮಕ್ಕಳನ್ನು ಅಭಿನಂದಿಸಬೇಕು. ತಪ್ಪು ಮಾಡಿದಾಗ ಆಕ್ಷೇಪಿಸದೆ, ದೂಷಿಸದೆ ನಿಮ್ಮ ದೃಷ್ಟಿಯಲ್ಲಿ ಅದು ಅಪ್ರಿಯ ಎಂದು ಅವರಿಗೆ ಮನವರಿಕೆ ಮಾಡಿಸಬೇಕು. ಕಠಿಣ ಪ್ರಯತ್ನಗಳ ಹೊರತಾಗಿಯೂ ಮಕ್ಕಳಿಗೆ ಅಂಕ ಕಡಿಮೆ ಸಿಕ್ಕಿದರೆ ಅವರನ್ನೆಂದೂ ದೂಷಿಸಬಾರದು. ಕಲಿತದ್ದನ್ನು ಮರೆತರು ಕೂಡಾ. ಮರೆವು ಮಾನವ ಸಹಜ ಪ್ರಕೃತಿಯಾಗಿದೆ. ಹೆಚ್ಚಿನ ಸಂದರ್ಭಗಳಲ್ಲಿ ಮಾನವನ ಪರಿಧಿಗೆ ಹೊರತಾಗಿದೆ. ವಿಶೇಷತಃ ಪುಟ್ಟ ಮಕ್ಕಳ ನೆನಪು ಶಕ್ತಿ.

ಕಲಿಕೆಯಲ್ಲಿ ಹಿಂದುಳಿಯುವಿಕೆಗೂ, ಅನಾಸಕ್ತಿಗೂ ಆಲಸ್ಯ, ಕಲಿಯದಿರುವುದು ಎಂಬುದರ ಹೊರತಾಗಿಯೂ ಕೆಲವು ಕಾರಣಗಳಿರಬಹುದು. ಅದನ್ನು ಕಂಡು ಹಿಡಿದು ಪರಿಹರಿಸಬೇಕು.

ಯಾವಾಗಲೂ ಬೈಯುವ, ದೂಷಿಸುವ ತಂದೆ-ತಾಯಿಗಳ ಮಾತುಗಳಿಗೆ ಮಕ್ಕಳು ಬೆಲೆ ಕಲ್ಪಿಸುವುದಿಲ್ಲ, ಅದು ಅವರಲ್ಲಿ ದ್ವೇಷವನ್ನುಂಟು ಮಾಡುತ್ತದೆ. ಆದರೆ ಒಳ್ಳೆಯ ಅಂಶಗಳನ್ನು ಅಭಿನಂದಿಸುವ ತಂದೆ-ತಾಯಿಗಳು ಯಾವಾಗಲಾದರೊಮ್ಮೆ ಮಕ್ಕಳು ತಪ್ಪೆಸಗಿದಾಗ ಬೈದರೆ ಅಥವಾ ವಿಮರ್ಶಿಸಿದರೆ ಅದು ಬಹಳ ಪ್ರಯೋಜನಕಾರಿಯಾದೀತು.

ಅದು ಮಕ್ಕಳಿಗೆ ಹೆಚ್ಚು ಉತ್ತಮ ಕೆಲಸಗಳನ್ನು ಮಾಡಲು, ಅಸಂಬದ್ಧ ಕಾರ್ಯಗಳಿಂದ ದೂರ ಉಳಿಯಲು ಪ್ರೇರೇಪಿಸಬಹುದು. ಆದ್ದರಿಂದ ಸಂತಾನಗಳಲ್ಲಿರುವ ಒಳಿತುಗಳನ್ನು ಅಭಿನಂದಿಸಲು ಜಿಪುಣತೆ ತೋರದಿರಲು ಮತ್ತು ನಿರಂತರ ಅವರನ್ನು ದೂಷಿಸದಿರಲು ತಂದೆ-ತಾಯಿಗಳು ಜಾಗ್ರತೆ ವಹಿಸಬೇಕು. ಅದರಲ್ಲಿಯೇ ಅವರ ಒಳಿತು ಮತ್ತು ವಿಜಯ ಅಡಕವಾಗಿದೆ.

❖❖❖❖

ಈಜಿನಿಂದ ಶೂಟಿಂಗ್ ತನಕ

ಮಕ್ಕಳು ಯಾವಾಗಲೂ ಆಟವಾಡಲು ಇಷ್ಟಪಡುತ್ತಾರೆ. ಮಕ್ಕಳ ಆಟದ ಬಗ್ಗೆ ದೂರುಗಳಿಲ್ಲದ ತಂದೆ-ತಾಯಿಗಳು ವಿರಳ. ಆಟದಲ್ಲಿ ನಿರತರಾದರೆ ತಿನ್ನುವುದನ್ನು, ಕುಡಿಯುವುದನ್ನು ಮರೆತು ಬಿಡುವಷ್ಟು ಅವರು ವಿನೋದ ಪ್ರಿಯರಾಗಿರುತ್ತಾರೆ. ಆಟದಲ್ಲಿ ಆಸಕ್ತಿ ಇಲ್ಲದ ಮಕ್ಕಳಲ್ಲಿ ದೈಹಿಕ ಹಾಗೂ ಮಾನಸಿಕ ಕೊರತೆಗಳಿರಬಹುದೆಂಬುದು ಖಚಿತ. ಮಕ್ಕಳಿಗೆ ಸುಮ್ಮನೆ ಕುಳಿತುಕೊಳ್ಳಲು ಸಾಧ್ಯವಿಲ್ಲ, ಅವರು ಯಾವಾಗಲೂ ಕಾರ್ಯ ನಿರತರಾಗಿರುತ್ತಾರೆ. ಸಮ ವಯಸ್ಕರು ಸಿಗದಿದ್ದರೆ ದೊಡ್ಡವರೊಂದಿಗೆ ಆಟವಾಡಲು ಗರಿಷ್ಠ ಪ್ರಯತ್ನಿಸುತ್ತಾರೆ. ಓಡಿ, ಆಡಿ, ಕುಣಿದು ಕುಪ್ಪಳಿಸುತ್ತಾ ಆಟವಾಡುವುದೆಂದರೆ ಅವರಿಗೆ ಬಲು ಪ್ರಿಯ. ಚೆಂಡನ್ನು ಕೈಯಿಂದ ಬಿಸಾಡಿ, ಕಾಲಿನಿಂದ ಆಟವಾಡುವ ಮಕ್ಕಳು ಎಲ್ಲರಲ್ಲೂ ಕುತೂಹಲ ಮೂಡಿಸುತ್ತಾರೆ. ಈ ರೀತಿಯ ಆಟಗಳನ್ನಾಡಲು ಅವಕಾಶ ಒದಗಿಸಿಕೊಡಬೇಕು. ಅದು ಅವರ ದೈಹಿಕ ಮತ್ತು ಮಾನಸಿಕ ಬೆಳವಣಿಗೆಗೆ ಅತೀ ಅಗತ್ಯವಾಗಿದೆ.

ಇಂದು ಹೆಚ್ಚಿನ ಮನೆಗಳಲ್ಲಿ ಒಂದೋ ಎರಡೋ ಮಕ್ಕಳಿರುತ್ತಾರೆ. ಮಾತ್ರವಲ್ಲದೆ, ಅವರ ಮಧ್ಯೆ ಬಹಳ ಅಂತರವಿರುತ್ತದೆ. ನೆರೆಯ ಮಕ್ಕಳೊಂದಿಗೆ ಬೆರೆಯಲು ಅವಕಾಶ ಲಭಿಸುವುದಿಲ್ಲ, ಮನೆಗಳ ಸುತ್ತಲೂ ಎತ್ತಿ ಕಟ್ಟಿದ ಗೋಡೆಗಳು ಮಕ್ಕಳಿಗೆ ದೊಡ್ಡ ಮರೆಯಾಗಿರುತ್ತದೆ. ಆದ್ದರಿಂದ ಕುಣಿದು ಕುಪ್ಪಳಿಸಿ, ಮುದ್ದಾಡಿ ಬೆಳೆಯುವ ಸಾಧ್ಯತೆ ನಿಷೇಧಿಸಲ್ಪಡುತ್ತವೆ. ಇದು ಮಕ್ಕಳ ಮಾನಸಿಕ, ದೈಹಿಕ ಬೆಳವಣಿಗೆಯ ಮೇಲೆ ದುಷ್ಪರಿಣಾಮ ಬೀರುತ್ತದೆ. ಅವರನ್ನು ಅತ್ಯಧಿಕ ಸ್ವಾರ್ಥಿಗಳಾಗಿ ಮತ್ತು ಹಠಮಾರಿಗಳನ್ನಾಗಿ ಪರಿವರ್ತಿಸುತ್ತದೆ. ಮಕ್ಕಳು ಪರಸ್ಪರ ಬೆರೆತು, ಜಗಳವಾಡಿ, ಪ್ರೀತಿಸಿ, ಮುದ್ದಿಸಿ ಬೆಳೆದು ಬರಬೇಕಾಗಿದೆ. ಅದುವೇ ಸ್ವಾಭಾವಿಕವೂ ಪ್ರಕೃತಿದತ್ತವೂ ಆಗಿದೆ.

ಮಕ್ಕಳು ಬೆಳೆದು ಬರುವಾಗಲೇ ಅವರ ಆಟ ವಿನೋದಗಳ ಸಮಯ ಮತ್ತು ಅವಕಾಶಗಳನ್ನು ಪಾಠ ಶಾಲೆಗಳು ಮತ್ತು ಪಠ್ಯ ಪುಸ್ತಕಗಳು ಕಬಳಿಸುತ್ತವೆ. ಡಾಕ್ಟರ್, ಇಂಜಿನಿಯರ್‌ಗಳಾಗಿ ಮಾಡಬೇಕೆಂಬ ಜಿಜ್ಞಾಸೆಯಲ್ಲಿ ತಂದೆ-ತಾಯಿಗಳು ಅವರನ್ನು ಪಠ್ಯ ಪುಸ್ತಕಗಳಲ್ಲಿ ಬಂಧಿಸಿಡುತ್ತಾರೆ. ಬಾಯಿಗೆ ಹಾಲುಣಿಸಿ ಹೊಟ್ಟೆ ತುಂಬಿಸುವಂತೆ ಜ್ಞಾನಕೊಟ್ಟು ಮನಸ್ಸು ತುಂಬಲು ಪ್ರಯತ್ನಿಸುತ್ತಾರೆ. ಆದ್ದರಿಂದ ಅವರಿಗೆ ಸಮಯ ಸಿಗುವುದಿಲ್ಲ, ಮಕ್ಕಳು ಸ್ವಲ್ಪ ಸಮಯ ಸಿಕ್ಕಿದರೆ ಕಂಪ್ಯೂಟರ್‌ನ ಮೊರೆ ಹೋಗುತ್ತಾರೆ. ಸಿಗುವ ಸಮಯವನ್ನು ಅದರ ಮುಂದೆ ಬಿದ್ದುಕೊಂಡಿರಲು ವ್ಯಯಿಸುತ್ತಾರೆ. ಆದ್ದರಿಂದ ಇಂದಿನ ಮಕ್ಕಳಿಗೆ ಆಟ ವಿನೋದಗಳಲ್ಲಿ

ಭಾಗವಹಿಸಲು ಸಾಧ್ಯವಾಗುವುದಿಲ್ಲ. ಇದು ಅವರಲ್ಲಿ ಕೊಬ್ಬು ಬೆಳೆಯಲು ಕಾರಣವಾಗುತ್ತದೆ.

ವಾಸ್ತವದಲ್ಲಿ ಮಕ್ಕಳ ದೈಹಿಕ ಆರೋಗ್ಯ ಮಾನಸಿಕ ಆರೋಗ್ಯದಷ್ಟೇ ಅತೀ ಮುಖ್ಯವಾಗಿದೆ. ಸಣ್ಣಪ್ರಾಯದಲ್ಲಿ ಚೈತನ್ಯ, ಮನೋದಾರ್ಢ್ಯತೆ, ಶಕ್ತಿ ಇಲ್ಲದೆ ಬೆಳೆದರೆ ಯೌವನ ಮುಗಿಯುವಾಗ ದುರ್ಬಲರೂ, ರೋಗಿಗಳೂ ಆಗಿ ಬಿಡುತ್ತಾರೆ.

ಆರೋಗ್ಯವಂತರೂ, ದೃಢಕಾಯರೂ ಆಗಿರಬೇಕೆಂದು ಇಸ್ಲಾಮ್ ಬಯಸುತ್ತದೆ. ಪ್ರವಾದಿಯವರು(ಸ) ಹೇಳುತ್ತಾರೆ: ''ಬಲಶಾಲಿಯಾದ ವಿಶ್ವಾಸಿಯು ದುರ್ಬಲ ವಿಶ್ವಾಸಿಗಿಂತ ಉತ್ತಮ ಹಾಗೂ ಅಲ್ಲಾಹನಿಗೆ ಪ್ರಿಯನಾಗಿರುತ್ತಾನೆ. ಇಬ್ಬರೂ ಒಳ್ಳೆಯವರೇ, ನೀನು (ಪರಲೋಕದಲ್ಲಿ) ಪ್ರಯೋಜನ ನೀಡುವಂತಹ ವಸ್ತುವಿನ ಆಶೆಪಡು. ಸಂಕಷ್ಟಗಳೆದುರಾದಾಗ ಅಲ್ಲಾಹನಿಂದ ಸಹಾಯ ಯಾಚಿಸು ಮತ್ತು ಧೈರ್ಯಗುಂದದಿರು.'' ಇನ್ನೊಂದು ಸಂದರ್ಭದಲ್ಲಿ ಹೇಳಿದರು: ''5 ವಸ್ತುಗಳನ್ನು 5 ವಿಷಯಗಳಿಗಿಂತ ಮುಂಚೆ ಸದುಪಯೋಗಪಡಿಸಿರಿ. ಮರಣಕ್ಕಿಂತ ಮುಂಚೆ ಜೀವನ, ಅನಾರೋಗ್ಯಕ್ಕಿಂತ ಮುಂಚೆ ಆರೋಗ್ಯ, ನಿಬಿಡತೆಗಿಂತ ಮುಂಚೆ ಬಿಡುವು, ವಾರ್ಧಕ್ಯಕ್ಕಿಂತ ಮುಂಚೆ ಯೌವನ, ದಾರಿದ್ರ್ಯಕ್ಕಿಂತ ಮುಂಚೆ ಶ್ರೀಮಂತಿಕೆ.''

(ಹಾಕಿಮ್, ಬೈಹಕಿ)

''ದೃಢಕಾಯದವನನ್ನು ಅಲ್ಲಾಹನು ಅನುಗ್ರಹಿಸಲಿ.''

(ಇಬ್ನು ಇಸ್‌ಹಾಕ್, ಇಬ್ನು ಹಾಶಿಮ್)

''ದೇವಸ್ಮರಣೆಯಿಲ್ಲದ ಎಲ್ಲವೂ ವ್ಯರ್ಥ ಅಥವಾ ವಿನೋದ ಮತ್ತು ಮರೆವು ಆಗಿದೆ. ನಾಲ್ಕು ವಿಷಯಗಳ ಹೊರತು- ಬಾಣ ಎಸೆಯಲು, ಎರಡರವುಗಳ ನಡುವೆ ನಡಿಗೆ, ಕುದುರೆಯನ್ನು ಪಳಗಿಸುವುದು, ಮನೆಯಾಕೆಯನ್ನು ರಮಿಸುವುದು ಈಜು ಕಲಿಸುವುದು.''

(ತಬ್ರಾನಿ, ಹಾಕಿಮ್)

''ನೀವು ನಡೆಯುತ್ತಾ, ಬಿಲ್ಲುಬಾಣ ಹಿಡಿದು ವಾಹನದಲ್ಲಿ ಸಂಚರಿಸುತ್ತಾ ಇರಿ. ನೀವು ವಾಹನದಲ್ಲಿ ಸಂಚರಿಸುವುದಕ್ಕಿಂತ ನೀವು ಬಾಣ ಬಿಡುವುದು ನನಗೆ ಇಷ್ಟ.''

(ನಸಾಈ, ತಿರ್ಮಿದಿ)

ಉಮರ್ ಫಾರೂಕ್(ರ) ಹೇಳುತ್ತಾರೆ, ''ನೀವು ನಿಮ್ಮ ಮಕ್ಕಳಿಗೆ ಬಾಣ ಎಸೆಯಲು ಮತ್ತು ಈಜಲು ಕಲಿಸಿರಿ. ಕುದುರೆ ಸವಾರಿಯ ತರಬೇತಿ ನೀಡಿರಿ.''

ನಮ್ಮ ಕಾಲದಲ್ಲಿ ಬಿಲ್ಲುಬಾಣದ ಸ್ಥಾನವನ್ನು ಶೂಟಿಂಗ್ ಕಬಳಿಸಿದೆ. ಆದ್ದರಿಂದ, ಮಕ್ಕಳ ದೈಹಿಕ ಆರೋಗ್ಯ ಮತ್ತು ಮಾನಸಿಕ ಆರೋಗ್ಯವನ್ನು ಹೆಚ್ಚಿಸಲು ಸಹಾಯಕವಾದ ಆಟ ವಿನೋದಗಳಲ್ಲಿ ಮಕ್ಕಳನ್ನು ತೊಡಗಿಸಬೇಕು. ಈಜು, ಸೈಕಲ್ ಸವಾರಿ, ಓಟದ ಸ್ಪರ್ಧೆ, ಶೂಟಿಂಗ್ ಇತ್ಯಾದಿ ಆಟೋಟ ಸ್ಪರ್ಧೆಗಳಲ್ಲಿ ಅವರನ್ನು ಸೇರಿಸಬೇಕು. ಎಲ್ಲ ರೀತಿಯ ಆಟ ವಿನೋದಗಳಿಂದ ಮಕ್ಕಳನ್ನು ದೂರ ನಿಲ್ಲಿಸುವುದರಿಂದ ಅವರ ದೈಹಿಕ ಆರೋಗ್ಯದಂತೆ ಮಾನಸಿಕ ಆರೋಗ್ಯದ ಮೇಲೂ ದುಷ್ಪರಿಣಾಮ ಬೀರುತ್ತವೆ.

❖❖❖❖

ಮೊಬೈಲ್ ಮತ್ತು ಇಂಟರ್‌ನೆಟ್

ವೈಜ್ಞಾನಿಕ ತಂತ್ರಜ್ಞಾನ ಅತ್ಯಂತ ವೇಗವಾಗಿ ಬೆಳೆದು ವಿಕಾಸ ಹೊಂದಿದೆ. ಇಂದು ಜನಜೀವನವನ್ನು ನಿಯಂತ್ರಿಸುವುದರಲ್ಲಿ ಅದು ನಿರ್ವಹಿಸುವ ಪಾತ್ರವನ್ನು ವಿವರಿಸಲಸಾಧ್ಯ. ಅದರ ಪ್ರಭಾವದಿಂದ ಯಾರಿಗೂ ಸಂಪೂರ್ಣವಾಗಿ ದೂರ ನಿಲ್ಲಲು ಸಾಧ್ಯವಿಲ್ಲ. ಮೊಬೈಲ್ ಸಾರ್ವತ್ರಿಕವಾಗಿದೆ. ಕಂಪ್ಯೂಟರ್ ವಿದ್ಯೆಯು ಸಾಕ್ಷರತೆಯ ಭಾಗವಾಗಿದೆ. ಮೊಬೈಲ್, ಇಂಟರ್ ನೆಟ್, ಟ್ವಿಟರ್, ಫೇಸ್‌ಬುಕ್ ಇತ್ಯಾದಿ ತಂತ್ರಜ್ಞಾನಗಳು ಜನಜೀವನವನ್ನು ಅಡಿಯಿಂದ ಮುಡಿತನಕ ಬದಲಾಯಿಸಿ ಬಿಟ್ಟಿದೆ. ಜಗತ್ತನ್ನು ಒಂದು ಪುಟ್ಟ ಗ್ರಾಮವನ್ನಾಗಿ ಮಾರ್ಪಡಿಸಿದೆ. ಮಾನವ ಕುಲಕ್ಕೆ ಇವೆಲ್ಲವೂ ನೀಡುವ ಸಂಭಾವನೆಗಳು ಮಹತ್ತರವಾದುದು. ಉನ್ನತ ಕ್ರಾಂತಿಗಳಿಗೂ ಅದು ದಾರಿ ತೆರೆದುಕೊಟ್ಟಿದೆ.

ಮೊಬೈಲ್, ಇಂಟರ್‌ನೆಟ್ ಇತ್ಯಾದಿ ಒಂದು ಚೂರಿಯಂತೆ. ತರಕಾರಿ ಕೊಯ್ಯುವ ಕತ್ತಿಯಿಂದಲೇ ತನ್ನ ಸಹಜೀವಿಯನ್ನು ಕೊಲ್ಲಲಾಗುತ್ತದೆ. ಅದೇ ರೀತಿ ಈ ತಂತ್ರಜ್ಞಾನ ಮನುಷ್ಯನ ಬೆಳವಣಿಗೆಗೂ, ಉನ್ನತಿಗೂ ಮಹತ್ತರ ಕೊಡುಗೆಗಳನ್ನು ನೀಡಿವೆ. ಜೀವನದ ಸವಲತ್ತುಗಳನ್ನು ಹೆಚ್ಚಿಸಿವೆ. ಅನೇಕ ಸಂಕಷ್ಟಗಳನ್ನು ಸುಲಭಗೊಳಿಸುತ್ತದೆ. ಮನುಷ್ಯನ ಪರಿಶ್ರಮಗಳನ್ನು ಕಡಿಮೆಗೊಳಿಸಿವೆ. ಅದರೊಂದಿಗೆ ಅನೇಕ ಕೆಡುಕುಗಳಿಗೆ ಅವು ದಾರಿ ಮಾಡಿಕೊಟ್ಟಿವೆ. ಸುಳ್ಳು, ವಂಚನೆ, ಕೊಲೆ, ಕೊಳ್ಳೆ, ವ್ಯಭಿಚಾರ, ಲೈಂಗಿಕ ದೌರ್ಜನ್ಯ ಇತ್ಯಾದಿ ಅನೇಕ ಸಾಮಾಜಿಕ ಕೆಡುಕುಗಳ ಪ್ರಮುಖ ಆರೋಪಿ ಇಂದು ಮೊಬೈಲ್, ಇಂಟರ್‌ನೆಟ್ ಮುಂತಾದ ಇಲೆಕ್ಟ್ರೋನಿಕ್ ಉಪಕರಣಗಳಾಗಿವೆ.

ಬಾಲಾಪರಾಧಿಗಳನ್ನು ಸೃಷ್ಟಿಸುವುರಲ್ಲಿ ಇಂದು ಅತಿ ಹೆಚ್ಚಿನ ಪಾತ್ರ ಮೊಬೈಲ್ ಇಂಟರ್‌ನೆಟ್‌ಗಳಾಗಿವೆ. ಸಣ್ಣ ಮಕ್ಕಳು ಕೂಡಾ ಇಂದು ಕಳ್ಳರೂ, ವ್ಯಭಿಚಾರಿಗಳೂ ಆಗಿ ಮಾರ್ಪಡುತ್ತಿದ್ದಾರೆ. ಆರನೇ, ಏಳನೇ ತರಗತಿಗಳಲ್ಲಿ ಕಲಿಯುತ್ತಿರುವ ಹೆಣ್ಮಕ್ಕಳು, ಗಂಡು ಮಕ್ಕಳು ಮೊಬೈಲ್ ಇಂಟರ್‌ನೆಟ್‌ಗಳ ಮೂಲಕ ಸಂಬಂಧ ಬೆಳೆಸುತ್ತಾರೆ. ಪ್ರತಿದಿನ ಗಂಟೆಗಟ್ಟಲೆ ಪರಸ್ಪರ ಮಾತನಾಡುತ್ತಿರುತ್ತಾರೆ. ಕೆಲವು ವರ್ಷಗಳ ಹಿಂದೆ ಹೆಣ್ಣು ಮತ್ತು ಗಂಡು ಮಕ್ಕಳು ಪರಸ್ಪರ ಮಾತನಾಡುವುದು ಇತರರ ಗಮನಕ್ಕೆ ಬರುತ್ತಿತ್ತು. ಆದರೆ ಇಂದು ಯಾರೂ ತಿಳಿಯದೆ ಎಷ್ಟು ಸಮಯ ಬೇಕಾದರೂ ಪರಸ್ಪರ ನೋಡಿ ಮಾತನಾಡುತ್ತಾ ಕಾಲ ಕಳೆಯಬಹುದು. ಈ ರೀತಿಯಾಗಿ ಬೆಳೆದು ಬರುವ ಸಂಬಂಧಗಳು ಮುಂದಿನ ಜೀವನದಲ್ಲಿ ದೊಡ್ಡ ದುರಂತಗಳಿಗೆ

ಕಾರಣವಾಗುತ್ತದೆ.

ಸಣ್ಣ ಪ್ರಾಯದಲ್ಲಿ ಪ್ರೇಮ ಪ್ರಕರಣಗಳಿಗೆ ಬಲಿಯಾಗುವವರು ಕಲಿಕೆಯಲ್ಲಿ ಕ್ರಮೇಣ ಹಿಂದೆ ಬೀಳುತ್ತಾರೆ. ಅವರ ಭಾವನೆಗಳ ಮೇಲೆ ಅಗಾಧವಾದ ಪ್ರಭಾವ ಬೀರುತ್ತದೆ. ಹೆಚ್ಚಿನ ಸಂದರ್ಭಗಳಲ್ಲಿ ಬಾಲಕ-ಬಾಲಕಿಯರಾಗಿರುವಾಗಲೇ ಅನೈತಿಕ ಸಂಬಂಧಗಳಲ್ಲಿ ಸಿಲುಕುತ್ತಾರೆ. ಬಹಳಷ್ಟು ಮಂದಿಯ ಸಂಬಂಧಗಳು ಅರ್ಧದಲ್ಲಿಯೇ ಮುರಿದು ಬೀಳುತ್ತದೆ. ಕೆಲವರು ಆ ಸಂಬಂಧವನ್ನು ಮುಂದುವರಿಸುತ್ತಾರೆ. ಪೋಷಕರು ಅದನ್ನು ತಡೆದರೆ ಕ್ಲಿಷ್ಟಕರವಾದ ಅನೇಕ ಸಮಸ್ಯೆಗಳು ಹುಟ್ಟಿಕೊಳ್ಳುತ್ತವೆ. ವಿವಾಹಿತರಾದ ಬಳಿಕವೂ ಬೇರ್ಪಡುವವರ ಸಂಖ್ಯೆ ಕಡಿಮೆಯೇನಲ್ಲ. ಮೊಬೈಲ್, ಇಂಟರ್‌ನೆಟ್‌ಗಳ ಮೂಲಕ ಸಂಬಂಧ ಬೆಳೆಸಿ ವಿವಾಹವಾಗುವವರು ಸಂತೃಪ್ತ ಜೀವನ ಸಾಗಿಸುವುದು ಬಹಳ ಕಡಿಮೆ. ಹಾಗೆಯೇ ಮಧ್ಯದಲ್ಲಿ ಸಂಬಂಧಗಳನ್ನು ಕಡಿಯುವವರೂ ಧಾರಾಳ ಮಂದಿ ಇದ್ದಾರೆ. ಅಕಸ್ಮಾತ್ ಆಗಿ ಉಂಟಾಗುವ ಸಂಬಂಧಗಳಿಗೆ ಇಂತಹ ಪರಿಣಾಮಗಳು ಸ್ವಾಭಾವಿಕವಲ್ಲವೇ?

ಹಾಗೆಯೇ ಮೊಬೈಲ್, ಇಂಟರ್‌ನೆಟ್ ಅನೇಕ ಯುವಕರ ಜೀವನವನ್ನು ಹಾಳು ಮಾಡುತ್ತದೆ. ಅವರನ್ನು ತಪ್ಪಿತಸ್ಥರನ್ನಾಗಿಯೂ ಮಾಡುತ್ತದೆ. ಸಮಾಜದಲ್ಲಿ ನೈತಿಕ ಅಧಃಪತನ ವನ್ನು ಸೃಷ್ಟಿಸುತ್ತದೆ. ತನ್ಮೂಲಕ ಲೈಂಗಿಕ ಅರಾಜಕತೆಗೆ ದಾರಿ ಮಾಡಿಕೊಡುತ್ತದೆ.

ವಿವಾಹಕ್ಕಿಂತ ಮುಂಚೆ ರಕ್ತ ಸಂಬಂಧಿಗಳಲ್ಲದ ಸ್ತ್ರೀ-ಪುರುಷರು ಪರಸ್ಪರ ಅನ್ಯರಾಗಿರು ತ್ತಾರೆ. ಪುರುಷನು ಪರಸ್ತ್ರೀಯನ್ನು ನೋಡುವುದು, ಅನಗತ್ಯ ವಿಷಯಗಳನ್ನು ಮಾತನಾಡು ವುದು ಮಹಾಪಾಪವಾಗಿದೆ. ಪವಿತ್ರ ಕುರ್‌ಆನ್ ಅದನ್ನು ತಡೆಯುತ್ತದೆ. ಮೊಬೈಲ್ ಮತ್ತು ಇಂಟರ್‌ನೆಟ್‌ಗಳ ಮೂಲಕ ಪರ ಸ್ತ್ರೀ-ಪುರುಷರು ಪರಸ್ಪರ ನೋಡಿ ಮಾತನಾಡುವುದರ ಮೂಲಕ ಏಕಾಂತದಲ್ಲಿರಬಾರದೆಂಬ ಪ್ರವಾದಿಯವರ(ಸ) ಆದೇಶವನ್ನು ಸ್ಪಷ್ಟವಾಗಿ ಉಲ್ಲಂಘಿಸು ತ್ತಾರೆ. ಆ ಮೂಲಕ ನಿಷಿದ್ಧ ಮಾರ್ಗದಲ್ಲಿ ಸಿಲುಕುತ್ತಾರೆ. ಪರ ಸ್ತ್ರೀ ಇತರ ಪುರುಷನ ಬಗ್ಗೆಯೂ ಪರ ಪುರುಷ ಇತರ ಪರ ಸ್ತ್ರೀಯ ಬಗ್ಗೆಯೂ ಮನಸ್ಸಿನಲ್ಲಿ ಆಲೋಚಿಸುತ್ತಿರುವುದೇ ಮನಸ್ಸಿನ ವ್ಯಭಿಚಾರವಾಗಿದೆ. ಯುವ ಪ್ರಾಯದ ಮಕ್ಕಳಿಗೆ ಈ ವಿಷಯವನ್ನು ಸ್ಪಷ್ಟವಾಗಿ ಮನವರಿಕೆ ಮಾಡಿಸಲು ತಂದೆ-ತಾಯಿಗಳು ಬಾಧ್ಯಸ್ಥರಾಗಿದ್ದಾರೆ.

ನಮ್ಮ ದೇಶದ ಮಕ್ಕಳು ಅತ್ಯುತ್ಸಾಹದಿಂದ ಉಪಯೋಗಿಸುವ ಕಂಪ್ಯೂಟರ್ ಗೇಮ್‌ಗಳು ಅವರ ಮೇಲೆ ಬೀರುವ ಪ್ರಭಾವವು ಮಹತ್ತರವಾದುದು. ಅದರಲ್ಲಿರುವ ಕಥಾ ಪಾತ್ರಗಳಲ್ಲಿ ಹೆಚ್ಚಿನವರು ಕೊಲೆಮಾಡುವುದು, ಬಂದೂಕು ಚಲಾಯಿಸುವುದು ಇತ್ಯಾದಿ ಕ್ರೂರ ಕೃತ್ಯಗಳನ್ನೆ ಸಗುವವರಾಗಿರುತ್ತಾರೆ.

ಈ ಕ್ರೂರ ಭಾವನೆಗಳಿರುವ ಭೀಕರ ಚಿತ್ರಣಗಳು ಸೌಮ್ಯ ಸ್ವಭಾವದ ಮಕ್ಕಳ ಮೇಲೆ ಪ್ರಭಾವ ಬೀರದಿರಲು ಗರಿಷ್ಠ ಪ್ರಯತ್ನಿಸಬೇಕು.

ಮಾನವ ಜೀವಕ್ಕೂ, ರಕ್ತಕ್ಕೂ ಬೆಲೆ ಕಲ್ಪಿಸದ ಇಂತಹ ಕಥಾ ವಸ್ತುಗಳು ಮಕ್ಕಳಿಗೆ

ಮಾದರಿಗಳಾದರೆ ಉಂಟಾಗುವ ಅನಾಹುತಗಳು ವಿವರಿಸಲಸಾಧ್ಯ. ಆದ್ದರಿಂದಲೇ ಮಕ್ಕಳು ಅಶ್ಲೀಲ ಸೀಡಿಗಳನ್ನು ವೀಕ್ಷಿಸಬಾರದೆಂಬಂತೆ, ಇಂತಹ ಕ್ರೂರಕೃತ್ಯಗಳನ್ನು ಬಿಂಬಿಸುವ ಕಂಪ್ಯೂಟರ್ ಗೇಮ್‌ಗಳನ್ನೂ ವೀಕ್ಷಿಸದಂತೆ ತಂದೆ-ತಾಯಿಗಳು ಜಾಗ್ರತೆ ವಹಿಸಬೇಕು. ಮಕ್ಕಳು ಕಂಪ್ಯೂಟರ್ ಮುಂದೆ ಕುಳಿತಿದ್ದಾಗಲೂ, ರಾತ್ರಿ ನಿದ್ದೆಗೆಟ್ಟು ಓದುವಾಗಲೂ ತಮ್ಮ ಮಕ್ಕಳು ಕಲಿಯುತ್ತಿದ್ದಾರೆಂದು ಸಮಾಧಾನದಿಂದಿರದೆ ಅವರು ಏನನ್ನು ಓದುತ್ತಿದ್ದಾರೆ ಎಂಬುದರ ಬಗ್ಗೆ ಸಂಪೂರ್ಣ ಗಮನವಿರಬೇಕು.

ಮಕ್ಕಳಿಗೆ ಮೊಬೈಲ್ ನೀಡದಿರಲು ಸಾಧ್ಯವಿದೆ. ಆದರೆ, ಅದರಿಂದೇನೂ ಪ್ರಯೋಜನವಿಲ್ಲ, ಕಾರಣ ಇಂಟರ್‌ನೆಟ್ ಹೊಸ ವಿದ್ಯಾಭ್ಯಾಸ ವ್ಯವಸ್ಥೆಯಲ್ಲಿ ಅನಿವಾರ್ಯ ಘಟಕವಾಗಿರುವುದರಿಂದ ಮೊಬೈಲ್ ತಡೆ ಹಿಡಿಯುವುದರಿಂದ ಯಾವುದೇ ಪ್ರಯೋಜನವಾಗಬೇಕೆಂದಿಲ್ಲ.

ಮೊಬೈಲ್ ಹೊಸ ವಿದ್ಯಾಭ್ಯಾಸಗಳಿಗೆ ಆಯಾಮವಾಗಿಯೂ ಕಂಪ್ಯೂಟರ್ ವಿದ್ಯಾಭ್ಯಾಸದ ಭಾಗವಾಗಿಯೂ ಗುರುತಿಸಲ್ಪಟ್ಟಿರುವಾಗ ಮೊಬೈಲ್‌ನಿಂದ ದೂರವಿರುವುದರಿಂದ ಅಷ್ಟೇನೂ ಪ್ರಯೋಜನವಾಗುವುದಿಲ್ಲ, ಇಂತಹ ಸಂದರ್ಭಗಳಲ್ಲಿ ಮೊಬೈಲ್ ಮತ್ತು ಇಂಟರ್‌ನೆಟ್‌ನಿಂದ ಮಕ್ಕಳನ್ನು ದೂರವಿಡುವ ಬದಲು ಅದರಲ್ಲಿರುವ ಅನಾಹುತಗಳ ಬಗ್ಗೆ ಮನವರಿಕೆ ಮಾಡಬೇಕು. ಅದರಿಂದ ಮಾತ್ರ ಪ್ರಯೋಜನವಾಗಬಹುದು. ಕೆಡುಕಿನ ಮಾರ್ಗಗಳನ್ನು ಅವರಿಗೆ ಬೋಧಿಸುವ ಮೂಲಕ ಆ ಮಾರ್ಗಗಳಿಂದ ದೂರ ಸರಿದು, ದೇವ ಸ್ಮರಣೆ, ಅಚಂಚಲ ಪರಲೋಕ ವಿಶ್ವಾಸ, ಸದಾಚಾರ ನಿಷ್ಠೆಗಳನ್ನು ಬೆಳೆಸಿಕೊಳ್ಳಲು ಉಪದೇಶಿಸಬೇಕು. ಅದರೊಂದಿಗೆ ಈ ಅಪಾಯಕಾರಿ ವಸ್ತುಗಳನ್ನು ಆದಷ್ಟು ಉತ್ತಮ ಕೆಲಸ ಕಾರ್ಯಗಳಿಗಾಗಿ ಉಪಯೋಗಿಸಲು ಅವರಿಗೆ ಬೋಧಿಸುವುದರೊಂದಿಗೆ ಪರಿಶೀಲಿಸುತ್ತಲೂ ಇರಬೇಕಾದುದು ಅತ್ಯಗತ್ಯವಾಗಿದೆ.

ಮೊಬೈಲ್ ಫೋನ್ ಇಂದು ಹಲವಾರು ಆರೋಗ್ಯ ಸಮಸ್ಯೆಗಳ ಗೂಡಾಗಿ ಪ್ರಚಲಿತವಾಗಿದೆ. ಅಧ್ಯಾಪಕರಿಗಾಗಿ ನಡೆಸಿದ ಪ್ರಾಜೆಕ್ಟ್ ಸ್ಪರ್ಧೆಯಲ್ಲಿ ದೇಶೀಯ ಪ್ರತಿನಿಧಿಯಾಗಿ ನ್ಯಾಷನಲ್ ಎಯರೋಸ್ಪೇಸ್ ಲಾಬೋರೆಟರಿಯ ಪ್ರತ್ಯೇಕ ಪುರಸ್ಕಾರ ಲಭಿಸಿದ ಏಟುಮಾನೂರ್ ಸರಕಾರಿ ಹೈಸ್ಕೂಲ್ ಅಧ್ಯಾಪಕ ಡಾ। ಸುಧೀರ್ ನಡೆಸಿದ ಅಧ್ಯಯನವು ಈ ಕುರಿತು ಯಾವುದೇ ಸಂಶಯಕ್ಕೆ ಎಡೆ ಮಾಡದೆ ಸವಿಸ್ತಾರವಾಗಿ ವಿವರಿಸಲ್ಪಟ್ಟಿದೆ. ಮೊದ ಮೊದಲು ಮೊಬೈಲ್ ಫೋನ್ ಉಪಯೋಗಿಸಲು ವಿನಿಯೋಗಿಸಲ್ಪಟ್ಟ ಸಮಯ, ಎಷ್ಟು ಗಂಟೆಗಳ ಕಾಲ ಉಪಯೋಗಿಸುತ್ತಾರೆ, ಎಷ್ಟು ಕಾಲ್‌ಗಳನ್ನು ಸ್ವೀಕರಿಸುತ್ತಾರೆಂಬುದರ ಆಧಾರಗಳ ಮೇಲೆ ರೋಗವನ್ನು ನಿರ್ಧರಿಸಬಹುದು. ಮೊಬೈಲ್ ಫೋನ್ ಉಪಯೋಗಿಸಲು ಆರಂಭಿಸಿದಾಗಿನಿಂದ ಫೋನ್ ಕರೆ ಸ್ವೀಕರಿಸುವವರೆಗೂ ತಕ್ಷಣವೇ ಮಾತುಗಳು ಸಿಗದಂತಹ ಪರಿಸ್ಥಿತಿಗಳು ಎದುರಾಗಬಹುದು. ಇದು ನೂರಕ್ಕೆ ತಲುಪುವಾಗ ಸಣ್ಣ ತಲೆನೋವು, ಇನ್ನೂರಕ್ಕೆ ತಲುಪುವಾಗ ಹಸಿವು ಕಡಿಮೆಯಾಗುವುದು, ನಾನೂರಕ್ಕೆ ತಲುಪುವಾಗ ಅಸ್ವಸ್ಥತೆ, ಐನೂರು ಕರೆಗೆ ತಲುಪಿದಾಗ ನಿದ್ರಾಹೀನತೆ, 1500 ಕರೆಗಳಾಗುವಾಗ ನಿತ್ರಾಣ, 3200

ಆಗುವಾಗ ನೆನಪುಶಕ್ತಿ ಕುಂಠಿತವಾಗುವುದು, 6400 ದಾಟುವಾಗ ದೃಷ್ಟಿ ಮಾಂದ್ಯತೆ, 12,800 ಆಗುವಾಗ ರಕ್ತ ಸಂಚಲನೆಯಲ್ಲಿ ತೊಂದರೆಗಳು, 51,200ಕ್ಕೆ ತಲುಪುವಾಗ ಕಿವಿ ನೋವು, 2,04000 ತಲುಪುವಾಗ ಮಾಂಸಪೇಶಿ ನೋವು ಸೇರಿದಂತೆ ಶರೀರ ಕೆಂಪಾಗುವಿಕೆಯಂತಹ ಹಲವಾರು ರೋಗಗಳು ಮೊಬೈಲ್ ಬಳಕೆಯಿಂದಾಗಿ ಬರುತ್ತದೆಯೆಂಬುದನ್ನು ಅವರು ತಮ್ಮ ಸಂಶೋಧನೆಯಲ್ಲಿ ಸ್ಪಷ್ಟಪಡಿಸಿದ್ದಾರೆ. ನಿರಂತರ ಇದನ್ನು ಹವ್ಯಾಸವಾಗಿ ಶರೀರದ ಹತ್ತಿರವೇ ಇಟ್ಟುಕೊಳ್ಳುವುದರಿಂದ 5 ವರ್ಷದೊಳಗೆ ಕಿವಿ ಮತ್ತು ಮೆದುಳನ್ನು ಸಂಪರ್ಕಿಸುವ ರಕ್ತ ಸಂಚಲನಾ ನರಕ್ಕೆ ಟ್ಯೂಮರ್ ಆಗುವ 'ಲಿಕ್ಕೋಸ್ಟಿಮ್ ನ್ಯೂರೋಮ' ಬಾಧಿಸುವ ಸಾಧ್ಯತೆ ಅತಿ ಹೆಚ್ಚು.

ಇಷ್ಟೆಲ್ಲ ವಿಷಯಗಳನ್ನು ತಿಳಿಸುವ ಮೂಲಕ ಮೊಬೈಲ್‌ಗಳಿಂದ ಮತ್ತು ಅದು ಉಪಯೋಗಿಸುವುದರಿಂದ ದೂರವಿರಬೇಕೆಂದು ಮಕ್ಕಳಿಗೆ ಉಪದೇಶಿಸುವ ಅಗತ್ಯವಿದೆ. ಅದರೊಂದಿಗೆ ಮಕ್ಕಳ ಮೊಬೈಲ್ ಫೋನ್ ಮತ್ತು ಇಂಟರ್‌ನೆಟ್‌ನ ಉಪಯೋಗದ ಮೇಲೆ ನಿಗಾ ವಹಿಸುವುದು ಅತೀ ಅಗತ್ಯವಾಗಿದೆ. ಮಕ್ಕಳು ಹಾಳಾಗದಂತೆ ತಡೆಯಲು ಅವರಿಗೆ ಸದಾ ಎಚ್ಚರಿಕೆ ನೀಡುವ ಮೂಲಕ ಮತ್ತು ಅವರ ಬಗ್ಗೆ ಜಾಗ್ರತರಾಗುವ ಮೂಲಕ ಮಾತ್ರ ಸಾಧ್ಯ.

ಕಂಪ್ಯೂಟರ್‌ಗಳನ್ನು ಉಪಯೋಗಿಸಲು ಉಪಯುಕ್ತವಾಗುವಂತೆ ಅವರ ಬೆಡ್‌ರೂಮ್‌ಗಳಲ್ಲಿ ಅದಕ್ಕೆ ಬೇಕಾದ ವಾತಾವರಣ ನಿರ್ಮಿಸಿ ಕೊಡಬೇಡಿ. ಬದಲಾಗಿ ಎಲ್ಲರೂ ಗಮನಿಸುವ ಹಾಗೂ ಎಲ್ಲರ ಗಮನಕ್ಕೆ ಬರುವಂತಹ ಜಾಗದಲ್ಲಿ ಕಂಪ್ಯೂಟರ್‌ಗಳನ್ನು ಉಪಯೋಗಿಸಲು ಇಡಿ. ಮನೆಯ ಮೂಲೆಗಳಲ್ಲಿರಿಸುವ ಬದಲು ಎಲ್ಲರ ಕಣ್ಣಿಗೆ ಬೀಳುವಂತಹ ಜಾಗವು ಮಕ್ಕಳನ್ನು ಕೆಡುಕಿನಿಂದ ದೂರವುಳಿಯುವಂತೆ ಪ್ರೇರೇಪಿಸುತ್ತದೆಯೆಂಬುದನ್ನು ತಿಳಿದಿರಬೇಕು.

ಮಕ್ಕಳು ಉಪಯೋಗಿಸುವ ವೆಬ್‌ಸೈಟ್‌ಗಳ ಬಗ್ಗೆ ಗಮನವಿಟ್ಟರೆ ಅದನ್ನು ನಿಯಂತ್ರಿಸಲು ಸುಲಭವಿದೆ. ಮಕ್ಕಳು ದುರ್ನಡತೆಯಲ್ಲಿಯೂ, ದಾರಿ ತಪ್ಪಿದಾಗಲೂ ಅವರನ್ನು ಕೆಡುಕಿನಿಂದ ಸರಿಸಿ ಸರಿ ದಾರಿಗೆ ತರುವುದು ಅತ್ಯಂತ ಕ್ಲಿಷ್ಟಕರ ಕಾರ್ಯವೆಂಬುದನ್ನು ಹೆತ್ತವರು ಸದಾ ಗಮನದಲ್ಲಿರಿಸಬೇಕು. ಆದ್ದರಿಂದ ಮಕ್ಕಳ ವಿಷಯದಲ್ಲಿ ಸದಾ ಒಂದು ಕಣ್ಣು ಮತ್ತು ಗಮನ ಅವರ ಕಡೆಗಿರಲಿ.

❖❖❖❖

ಪಿಶಾಚಿಯಾಗಿ ಮಾರ್ಪಡುವ ಚಾನೆಲ್

ನಾಲ್ಕು ವರ್ಷ ಪ್ರಾಯದ ಶ್ರೀಜಳನ್ನು ಲೈಂಗಿಕವಾಗಿ ಪೀಡಿಸಿದ ಬಳಿಕ ಕೊಲೆಮಾಡಿ ಮರದ ಮೇಲೆ ಅಡಗಿಸಿಟ್ಟ ಹದಿಮೂರು ವರ್ಷ ಪ್ರಾಯದ ಬಾಲಕ ಸಿಕ್ಕಿ ಬಿದ್ದ ವಾರ್ತೆ ನಮ್ಮ ವಾರ್ತಾ ಮಾಧ್ಯಮಗಳಲ್ಲಿ ಪ್ರಕಟಗೊಂಡವು. ಚಾನೆಲ್‌ಗಳು ಅದರ ವಿವರಣೆಯನ್ನು ಪ್ರೇಕ್ಷರಿಗಾಗಿ ಬಿತ್ತರಿಸಿದವು. ನಾಲ್ಕು ವರ್ಷದಿಂದ ಹದಿಮೂರು ವರ್ಷದ ವರೆಗಿನ ಹತ್ತಾರು ಹೆಣ್ಮಕ್ಕಳನ್ನು ಅತ್ಯಾಚಾರ ಮಾಡಿದ ಹತ್ತು ವಯಸ್ಸಿನ ಬಾಲಕನನ್ನು ಪೊಲೀಸರು ಬಂಧಿಸಿದ ವಾರ್ತೆಯನ್ನೂ ನಾವು ಓದಬೇಕಾಯಿತು. ಸಣ್ಣ ಮಕ್ಕಳನ್ನು ಈ ರೀತಿ ಅಪರಾಧಿಗಳನ್ನಾಗಿ ಮಾರ್ಪಡಿಸಿದ ಅಂಶ ಯಾವುದೆಂಬುದು ಕೂಡಾ ಪ್ರಸ್ತುತ ವಾರ್ತೆಗಳಲ್ಲಿ ಸ್ಪಷ್ಟಪಡಿಸಲಾಗಿತ್ತು. ಯುವಕರನ್ನು ಅಪರಾಧಗಳೆಡೆಗೆ ಆಕರ್ಷಿಸಿದ್ದರಲ್ಲಿ ಪ್ರಮುಖ ಪಾತ್ರ ಟಿ.ವಿ. ಚಾನೆಲ್‌ಗಳಾಗಿವೆ.

ಇಂದು ನಮ್ಮ ದೇಶದ ಹೆಚ್ಚಿನ ಮನೆಗಳ ಬೆಡ್‌ರೂಮ್‌ಗಳಿಗೆ ಬಾಗಿಲಿನ ಅಗತ್ಯವಿಲ್ಲ. ಪತಿ-ಪತ್ನಿಯರ ಮಧ್ಯೆ ಏನು ನಡೆಯುತ್ತಿದೆಯೆಂಬುದು ಇತರರು ಕಾಣಬಾರದೆಂದು ಬಾಗಿಲನ್ನು ಮುಚ್ಚಲಾಗುತ್ತದೆ. ಆದರೆ ಅದೇ ಕಾರ್ಯಗಳನ್ನು ಚಾನೆಲ್‌ಗಳ ಮುಂದೆ ಕುಳಿತು ಕುಟುಂಬ ಸಮೇತ ನೋಡುವುದಾದರೆ ಇನ್ನಾಕೆ ದಂಪತಿಗಳ ಲೈಂಗಿಕ ಕ್ರಿಯೆಗಳನ್ನು ಗುಪ್ತವಾಗಿಡಬೇಕು? ಟಿ.ವಿ.ಯನ್ನು ಅನಿಯಂತ್ರಿತವಾಗಿ ಬಳಸುವ ಒಂದು ಮಗು, 10-15 ವರ್ಷ ಪ್ರಾಯದವನಾಗುವಾಗ ಸರಿ ಸುಮಾರು 800 ಕೊಲೆಪಾತಕಗಳನ್ನೂ, 16000ದ ವರೆಗೆ ಇತರ ಅಪರಾಧಗಳನ್ನೂ ನೋಡುವ ಸಾಧ್ಯತೆಗಳಿವೆ ಎಂಬುದನ್ನು ಅಧ್ಯಯನ ಅಭಿಪ್ರಾಯ ಪಡುತ್ತದೆ.

ನಮ್ಮ ದೇಶದ ಪರಮೋನ್ನತ ನ್ಯಾಯ ಪೀಠವು ಟಿ.ವಿ.ಯಲ್ಲಿನ ಅಶ್ಲೀಲ, ಅಕ್ರಮ ದೃಶ್ಯಗಳನ್ನು ತಡೆಯುವ ವ್ಯವಸ್ಥೆ ಮಾಡುತ್ತದೆ. ಕುಟುಂಬ ಸದಸ್ಯರು ಒಟ್ಟಿಗೆ ಕುಳಿತು ಟಿ.ವಿ. ನೋಡಲು ಸಾಧ್ಯವಾಗದ ಪರಿಸ್ಥಿತಿ ನಿರ್ಮಾಣವಾಗಿದೆಯೆಂಬುದನ್ನು ಸುಪ್ರೀಮ್ ಕೋರ್ಟ್ ಪ್ರಸ್ತುತ ಆದೇಶದಲ್ಲಿ ಹೇಳಿದೆ. ಒಂದು ವರ್ಷದಲ್ಲಿ ಯಾವುದಾದರೊಂದು ದಿನ ಸಭ್ಯರಿಗೆ ಕುಟುಂಬದೊಂದಿಗೆ ಸೇರಿ ಚಾನೆಲ್ ನೋಡಲು ಸಾಧ್ಯವಿದೆಯೇ ಎಂಬ ತ್ರಿ ಸದಸ್ಯ ನ್ಯಾಯಾಧೀಶರ ತಂಡ ಪಾಲಿಸಿಟರ್ ಜನರಲ್ ಗೋಪಾಲ್ ಸಿಂಗ್‌ರೊಂದಿಗೆ ಕೇಳಿದ ಪ್ರಶ್ನೆ ವಾಸ್ತವದಲ್ಲಿ ಸಮಾಜದ ಆತ್ಮಸಾಕ್ಷಿಗೆ ಹಾಕಿದ ಪ್ರಶ್ನೆಯಾಗಿರುತ್ತದೆ.

ಪ್ರಖ್ಯಾತ ಕವಯಿತ್ರಿ ಸುಗತ ಕುಮಾರಿ 8,000 ವಿದ್ಯಾರ್ಥಿಗಳನ್ನು ಅಧ್ಯಯನ ಮಾಡಿದಾಗ ಅದರಲ್ಲಿ 6000 ಮಂದಿ ನಿತ್ಯ ಅಶ್ಲೀಲ ಚಿತ್ರಗಳನ್ನು ವೀಕ್ಷಿಸುತ್ತಿದ್ದಾರೆಂಬುದನ್ನು ಒಪ್ಪಿಕೊಂಡಿದ್ದಾರೆ ಎಂದು ಸ್ಪಷ್ಟಪಡಿಸಿದ್ದಾರೆ. ನಮ್ಮ ರಾಜ್ಯದ ಹೆಸರುವಾಸಿಯಾದ ಕಾಲೇಜಿನಲ್ಲಿ ಸರ್ವೇ ನಡೆಸಿದಾಗ ಚಾನೆಲ್‌ಗಳ ಮುಖಾಂತರ ಅಶ್ಲೀಲ ಚಿತ್ರಗಳನ್ನು ವೀಕ್ಷಿಸದವರು 5% ಕ್ಕಿಂತ ಕಡಿಮೆ ಎಂಬುದು ಬಹಿರಂಗವಾಯಿತು.

ಟೆಲಿವಿಷನ್ ನಮ್ಮ ಮಕ್ಕಳ ಸಮಯವನ್ನು ಗರಿಷ್ಠ ಮಟ್ಟದಲ್ಲಿ ಕಸಿಯುತ್ತಿದೆ. ಕಲಿಕೆಯಿಂದ ಅವರ ಗಮನವನ್ನು ದೂರ ಸರಿಸುತ್ತದೆ. ದೃಕಶಕ್ತಿಯನ್ನು ನಾಶಪಡಿಸುತ್ತದೆ. ಚಿಂತನಾಶಕ್ತಿಯನ್ನು ದುರ್ಬಲಗೊಳಿಸುತ್ತದೆ. ಆಲೋಚನಾ ಶಕ್ತಿಯನ್ನು ಅಡಿಮೇಲುಗೊಳಿಸುತ್ತದೆ. ನೈತಿಕ ಪ್ರಜ್ಞೆಯನ್ನು ಕೆಡಿಸುತ್ತದೆ. ಮೌಲ್ಯ ಚಿಂತನೆಗಳಿಗೆ ತೆರೆ ಬೀಳುತ್ತದೆ. ಅಶ್ಲೀಲತೆಯೊಂದಿಗೆ ಇರುವ ದ್ವೇಷ ಇಲ್ಲವಾಗಿಸುತ್ತದೆ. ಅಪರಾಧಗಳು ಮಹಾ ಸಾಹಸವೆಂಬ ರೀತಿಯಲ್ಲಿ ನೋಡುವ ಮಾನಸಿಕ ತೊಂದರೆಗಳಿಗೆ ಒಳಪಡಿಸುತ್ತದೆ. ಅಕ್ರಮ, ಅನ್ಯಾಯಗಳೊಂದಿಗೆ ಉಂಟಾಗ ಬೇಕಿದ್ದ ದ್ವೇಷ ಹಾಗೂ ಭಯವನ್ನು ನಾಶಪಡಿಸುತ್ತದೆ. ಸಂಪೂರ್ಣ ಲಜ್ಜೆಯನ್ನೇ ನಷ್ಟಪಡಿಸುತ್ತದೆ. ಆದ್ದರಿಂದ ಮಕ್ಕಳು ಎಂತಹ ಕ್ರೂರ ಕೃತ್ಯಗಳನ್ನೆಸಗಲೂ ಅಳುಕುವುದಿಲ್ಲ, ಬಾಲಾಪರಾಧಿಗಳ ಸಂಖ್ಯೆ ಹೆಚ್ಚಾಗಲು ಇದುವೇ ಕಾರಣ.

ಟೆಲಿವಿಷನ್‌ಗಳಿಲ್ಲದ ಮನೆಗಳು ಇಂದು ಬಹಳ ವಿರಳ. ಚಾನೆಲುಗಳಿಂದ ಮಕ್ಕಳನ್ನು ದೂರವಾಗಿಸುವುದು ಸ್ವೀಕಾರಾರ್ಹವೋ, ಪ್ರಾಯೋಗಿಕವೋ ಅಲ್ಲ. ಆದ್ದರಿಂದ ಚಾನೆಲುಗಳನ್ನು ತಡೆಯುವುದಕ್ಕಿಂತ ಅದರಲ್ಲಿ ನಿಯಂತ್ರಣ ಮಾಡುವುದು ಉತ್ತಮ. ನೋಡಬಾರದ, ಅಶ್ಲೀಲ ದೃಶ್ಯಗಳು ಪ್ರತ್ಯಕ್ಷವಾಗುವಾಗ ತಕ್ಷಣ ಚಾನೆಲ್ ಬದಲಾಯಿಸುವುದು ಅಥವಾ ಇತರ ಒಳ್ಳೆಯ ಚಾನೆಲ್‌ಗಳಿಗೆ ಮಕ್ಕಳನ್ನು ತಿರುಗಿಸುವುದು ಒಳಿತು. ಈ ರೀತಿ ಮಾಡಿದರೆ ಕ್ರಮೇಣ ಮಕ್ಕಳಲ್ಲಿಯೂ ಈ ಅಭ್ಯಾಸ ಬೆಳೆದು ಬರುತ್ತದೆ. ಆ ಮೂಲಕ ಅವರನ್ನು ಅಪರಾಧ ಕೃತ್ಯಗಳ, ಅಶ್ಲೀಲ ಚಿತ್ರಗಳು ಹಾಗೂ ಅಪರಾಧ ಕೃತ್ಯಗಳನ್ನು ನೋಡದಂತೆ ತಡೆಯಲು ಸಾಧ್ಯವಿದೆ. ಮಕ್ಕಳನ್ನು ದೂರ ಮಾಡಿ ಹಿರಿಯರು ಟಿ.ವಿ. ನೋಡುವುದನ್ನು ರೂಢಿಗೊಳಿಸಿದರೆ, ಸಿಗುವ ಮೊದಲ ಸಂದರ್ಭವನ್ನೇ ಬಳಸಿಕೊಂಡು ಗುಪ್ತವಾಗಿ ಅವರಿಗೆ ಆಸಕ್ತಿಯಿರುವ ದೃಶ್ಯಗಳನ್ನು ನೋಡ ತೊಡಗುವರು. ಮಕ್ಕಳು ನೋಡಬಾರದ ಚಾನೆಲ್‌ಗಳನ್ನು ಹಿರಿಯರು ನೋಡಬಾರದು. ತಾನು ನೋಡುವುದನ್ನೇ ತನ್ನ ಮಕ್ಕಳು ನೋಡುತ್ತಾರೆಂಬ ಪ್ರಜ್ಞೆಯೊಂದಿಗೆ ಮಾತಾಪಿತರು ಟೆಲಿವಿಷನ್ ಉಪಯೋಗಿಸಬೇಕು.

ಚಾನೆಲುಗಳನ್ನು ಉತ್ತಮವಾಗಿ ಬಳಸಿದರೆ ಮಕ್ಕಳ ವೈಜ್ಞಾನಿಕ ಪ್ರಗತಿ ಮತ್ತು ವಿದ್ಯಾಭ್ಯಾಸ ಬೆಳವಣಿಗೆಗೂ ಇತರ ಸಾಮರ್ಥ್ಯಗಳನ್ನು ಬೆಳೆಸಲೂ ಹೆಚ್ಚು ಉಪಕಾರಿಯಾಗ ಬಹುದು. ಸಾಂಸ್ಕೃತಿಕ ಪ್ರಜ್ಞೆ ರಾಜಕೀಯ ಚಿಂತನೆ, ಲೋಕದ ವಿವರಗಳನ್ನು ತಿಳಿದು ಆ ಮೂಲಕ ಅವರನ್ನು ಸ್ವಾಯತ್ತಗೊಳಿಸಿ ಬೆಳೆಸಲು ಹೆಚ್ಚು ಪ್ರಯೋಜನಕಾರಿಯಾದೀತು.

ನಕಾರಾತ್ಮಕ ದೃಷ್ಟಿಕೋನಕ್ಕಿಂತ ಸಕಾರಾತ್ಮಕ (ರಚನಾತ್ಮಕ) ದೃಷ್ಟಿಕೋನ ಬೆಳೆಸುವುದು ಹೆಚ್ಚು ಉತ್ತಮ. ಆದ್ದರಿಂದ ಟೆಲಿವಿಷನ್ ತಡೆಯುವುದರ ಮೂಲಕ ಅದನ್ನು ಉಲ್ಲಂಘಿಸುವ ಆಸೆ ಬೆಳೆಸುವುದಕ್ಕಿಂತ ಅದನ್ನು ವಿವೇಕ ಚಿತ್ತದೊಂದಿಗೆ ಉಪಯೋಗಿಸಲು ಸಂದರ್ಭಗಳನ್ನೊದಗಿಸಿ ಕೊಡುವುದು ಉತ್ತಮ. ಒಟ್ಟಿಗೆ ಕುಳಿತು ಟಿ.ವಿ. ವೀಕ್ಷಿಸುವಾಗ ಮಕ್ಕಳಲ್ಲಿ ಒಳಿತು-ಕೆಡುಕುಗಳ ವ್ಯತ್ಯಾಸವನ್ನು ತಿಳಿಯುವ ಪ್ರಜ್ಞೆಯನ್ನು ಬೆಳೆಸಲು ಸಾಧ್ಯವಿದೆ. ಎಲ್ಲ ವಿಷಯಗಳಲ್ಲಿಯೂ ನಿಷೇಧದ ಬೋರ್ಡ್‌ಗಳನ್ನಿಟ್ಟು ಮುಂದಿನ ಪೀಳಿಗೆಯನ್ನು ಉತ್ತಮವಾಗಿ ಬೆಳೆಸಬಹುದೆಂದು ಭಾವಿಸುವುದು ಪ್ರಸ್ತುತ ಸನ್ನಿವೇಶಗಳಲ್ಲಿ ಮೂರ್ಖತನವಾಗಿದೆ. ಆದ್ದರಿಂದ, ನೀವು ಮತ್ತು ನಿಮ್ಮ ಮಕ್ಕಳು ಒಳ್ಳೆಯದನ್ನು ನೋಡಿ, ಒಳ್ಳೆಯದನ್ನು ಕೇಳಿ. ಅಶ್ಲೀಲತೆಗಳ ವಿರುದ್ಧ ಕಣ್ಣು ಮತ್ತು ಕಿವಿಯನ್ನು ಮುಚ್ಚಿಬಿಡಿ.

ಉದ್ದೇಶ ಪ್ರಜ್ಞೆಯನ್ನು ಬೆಳೆಸಿರಿ:

ಇಟಲಿಯ ಆರಂಭಕಾಲದ ಕವಿಯೂ ಕಥೆಗಾರನೂ ಆದ ಬೊಕಾಚಿಯೋ ಅವರು ಅಲೆಕ್ಸಾಂಡರ್ ಮತ್ತು ಚಕ್ರವರ್ತಿ ಡಯೋಜಿನಸ್‌ರ ಮಧ್ಯೆ ನಡೆದ ಒಂದು ಸಂಭಾಷಣೆಯನ್ನು ಮುಂದಿಡುತ್ತಾರೆ. ದಾರ್ಶನಿಕನಾದ ಡಯೋಜಿನಸ್ ದಿಗ್ವಿಜಯಿಯಾದ ಅಲೆಕ್ಸಾಂಡರಿನೊಂದಿಗೆ ಕೇಳುತ್ತಾರೆ, ಅಥೆನ್ಸನ್ನು ಅಧೀನಗೊಳಿಸಿದ ಬಳಿಕ ತಾವೇನು ಮಾಡುತ್ತೀರಿ? ಪರ್ಶಿಯ ವಶಪಡಿಸುತ್ತೇನೆ. ಚಕ್ರವರ್ತಿ ಹೇಳಿದರು.

''ನಂತರ''?

''ಈಜಿಪ್ಟ್ ವಶಪಡಿಸುತ್ತೇನೆ.''

''ಅದೂ ಆದರೆ?''

''ಇಡೀ ಜಗತ್ತಿನಲ್ಲಿ ನನ್ನ ಆಧಿಪತ್ಯ ಸ್ಥಾಪಿಸುತ್ತೇನೆ.'' ಅಲೆಕ್ಸಾಂಡರ್ ಗಟ್ಟಿ ಸ್ವರದಲ್ಲಿ ಹೇಳಿದನು. ''ಆ ಗುರಿಯೂ ಪೂರ್ಣಗೊಂಡರೆ?'' ಡಯೋಜಿನಸ್ ಪ್ರಶ್ನೆ ಮುಂದುವರಿಸಿದರು. ''ನಂತರ ಹಾಯಾಗಿ ವಿಶ್ರಮಿಸಬೇಕು. ಸುಖವಾಗಿ ಬಾಳಬೇಕು.''

''ಅಂತಿಮ ಗುರಿ ಅದಾಗಿದ್ದರೆ ಯಾಕೆ ಈ ಯುದ್ಧಗಳು? ಅದಕ್ಕಾಗಿ ಸಾವಿರಾರು ಮಂದಿಯನ್ನು ಕೊಲೆಮಾಡಬೇಕೇ? ಸುಖ ಅನುಭವಿಸಲು ಬೇಕಾದಷ್ಟು ನಿಮ್ಮ ಬಳಿಯಲ್ಲಿ ಈಗಲೇ ಇದೆಯಲ್ಲವೇ?'' ಡಯೋಜಿನಸ್‌ನ ಈ ಪ್ರಶ್ನೆಗೆ ಅಲೆಕ್ಸಾಂಡರ್‌ನ ಬಳಿ ತೃಪ್ತಿಕರವಾದ ಉತ್ತರವಿರಲಿಲ್ಲ

ಮನುಷ್ಯ ಯಾರು? ಎಲ್ಲಿಂದ ಬಂದ? ಎಲ್ಲಿಗೆ ಹೋಗುತ್ತಾನೆ? ಜೀವನವೆಂದರೇನು? ಯಾಕೆ ಇರುವುದು? ಹೇಗಿರಬೇಕು? ಮರಣಾನಂತರ ಏನು? ಇತ್ಯಾದಿ ಮೂಲಭೂತ ಪ್ರಮುಖ ಪ್ರಶ್ನೆಗಳಿಗೆ ನೀಡುವ ಉತ್ತರಗಳು ಜೀವನದ ಗುರಿ ನಿರ್ಣಯಿಸುವುದರಲ್ಲಿ ಪ್ರಮುಖ ಪಾತ್ರ ವಹಿಸುತ್ತದೆ. ಆದ್ದರಿಂದ ಈ ಪ್ರಶ್ನೆಗಳನ್ನು ಮಕ್ಕಳಲ್ಲಿ ಕೇಳಬೇಕು. ಅದಕ್ಕೆ ಸರಿಯಾದ

ಉತ್ತರ ನೀಡಲು ತಂದೆ-ತಾಯಿಗಳು ಸಹಕರಿಸಬೇಕು. ಹೀಗೆ ಜೀವನದ ನೈಜ ಗುರಿಯನ್ನು ನಿರ್ಣಯಿಸಲು, ಅದನ್ನು ಸಾಕ್ಷಾತ್ಕರಿಸಲು ಅಗತ್ಯವಾದ ಮಾರ್ಗವನ್ನು ತೋರಿಸಬೇಕಾದುದು ತಂದೆ-ತಾಯಂದಿರ ಕರ್ತವ್ಯವಾಗಿದೆ. ಸ್ವತಃ ಈ ಕೆಲಸ ಮಾಡಲು ಸಾಧ್ಯವಾಗದವರು ಇತರರ ಸಹಕಾರವನ್ನು ಪಡೆದಾದರೂ ಈ ಕರ್ತವ್ಯವನ್ನು ಪೂರ್ಣಗೊಳಿಸಬೇಕು. ಆಗ ಮಾತ್ರ ಮಕ್ಕಳ ಜೀವನದ ಗುರಿ ಸಫಲವಾಗುತ್ತದೆ. ಅದಕ್ಕಾಗಿ ವಕ್ರತೆಯಿಂದ ನೇರ ಮಾರ್ಗವನ್ನು ಆಯ್ಕೆ ಮಾಡಬೇಕು.

ಭೂಮಿಯ ಮೇಲೆ ಮಾನವನಿಗೆ ಅತೀ ಅಗತ್ಯವಾಗಿ ಬೇಕಾಗಿರುವುದು ಮನಶ್ಶಾಂತಿ, ಜೀವನದ ಪರಿಶುದ್ಧತೆ, ಕುಟುಂಬ ಭದ್ರತೆ, ಸಾಮಾಜಿಕ ಸುರಕ್ಷೆಯಾಗಿದೆ. ಪರಲೋಕ ವಿಜಯವು ಪರಮ ಗುರಿ. ಇದೆಲ್ಲವೂ ಸಾಧಿಸಬೇಕಾದರೆ ಅಲ್ಲಾಹನ ಮೇಲಿನ ದೃಢವಿಶ್ವಾಸ ಮತ್ತು ಅಚಂಚಲವಾದ ಪರಲೋಕ ಪ್ರಜ್ಞೆಯಿರಬೇಕು. ಆದ್ದರಿಂದ ಅದನ್ನರಿತು ಎರಡನ್ನೂ ಮಕ್ಕಳಲ್ಲಿ ಬೆಳೆಸಲು ಜಾಣ್ಮೆಯೊಂದಿಗೆ ಪ್ರಯತ್ನಿಸಬೇಕು. ಅದಕ್ಕಾಗಿ ಇಸ್ಲಾಮಿನ ಚಾರಿತ್ರಿಕ ಘಟನೆಗಳನ್ನೂ, ಪ್ರಾಕೃತಿಕ ವಿಸ್ಮಯಗಳನ್ನೂ ಅವರಿಗೆ ವಿವರಿಸಿ ಕೊಡಬೇಕು. ಸ್ವತಃ ಇದನ್ನು ಮಾಡಲು ಸಾಧ್ಯವಾಗದ ತಂದೆ-ತಾಯಿಗಳು ಇಂತಹ ವಿಷಯಗಳ ಬಗ್ಗೆ ಪ್ರಜ್ಞಾವಂತರನ್ನಾಗಿ ಮಾಡುವ ಕ್ಲಾಸುಗಳಿಗೆ, ಕಾರ್ಯಕ್ರಮಗಳಿಗೆ ಮಕ್ಕಳನ್ನು ಕಳುಹಿಸಿಕೊಡಬೇಕು. ಜೀವನದ ನೈಜ ಗುರಿ ಮತ್ತು ಸರಿಯಾದ ಮಾರ್ಗದ ಬಗ್ಗೆ ಪ್ರಜ್ಞೆ ಇರುವ ವಿದ್ಯಾರ್ಥಿ ಸಂಘಟನೆಗಳೊಂದಿಗೆ ಅವರನ್ನು ಜೋಡಿಸಬೇಕು. ಮಕ್ಕಳನ್ನು ಡಾಕ್ಟರ್, ಇಂಜಿನಿಯರ್ ಮಾಡುವ ತರಾತುರಿಯಲ್ಲಿ ಇಂತಹ ಮೂಲಭೂತ ಕಾರ್ಯಗಳನ್ನು ಗಮನಿಸದೆ ಹೋದರೆ ಈ ಲೋಕ ಮತ್ತು ಪರಲೋಕದಲ್ಲಿ ಅವರು ನಮ್ಮ ಪಾಲಿಗೆ ಶಾಪ ಹಾಗೂ ಸಮಸ್ಯೆಯಾಗಿ ಪರಿಣಮಿಸಬಹುದು. ಅಲ್ಲಾಹನ ಮುಂದೆ ನಮ್ಮ ವಿರುದ್ಧ ಸಾಕ್ಷಿ ಹೇಳುವ ಶತ್ರುಗಳಾಗಿ ಮಾರ್ಪಡುವರು.

ಮಕ್ಕಳಿಗೆ ಇಂತಹ ಕಾರ್ಯಗಳನ್ನು ಕಲಿಸುವ, ಪ್ರಜ್ಞಾವಂತರನ್ನಾಗಿ ಮಾಡುವ ಒಂದು ಉತ್ತಮ ಮಾದರಿ ಪವಿತ್ರ ಕುರ್‌ಆನಿನಲ್ಲಿದೆ. ಎಷ್ಟು ಪ್ರೀತಿ, ವಾತ್ಸಲ್ಯದೊಂದಿಗೆ ಹಾಗೂ ಹಿತಾಕಾಂಕ್ಷೆಯೊಂದಿಗೆ ಮತ್ತು ಉತ್ಸಾಹದಿಂದ ಮಕ್ಕಳನ್ನು ಉಪದೇಶಿಸಬೇಕು ಮತ್ತು ನೇರ ಮಾರ್ಗದಲ್ಲಿ ನಡೆಸಬೇಕು ಎಂಬುದನ್ನು ಅದು ಸ್ಪಷ್ಟಪಡಿಸುತ್ತದೆ.

ಪ್ರಖ್ಯಾತ ಪಂಡಿತನೂ, ತತ್ವಜ್ಞಾನಿಯೂ ಆದ ಲುಕ್ಮಾನ್(ಅ)ರ ಸಾರೋಪದೇಶಗಳನ್ನು ಕುರ್‌ಆನ್ ಪ್ರಸ್ತುತ ಪಡಿಸುತ್ತದೆ:

''ಮಗನೇ ಅಲ್ಲಾಹನೊಂದಿಗೆ ಯಾರನ್ನೂ ಸಹಭಾಗಿಯಾಗಿ ಮಾಡಬೇಡ, ನಿಜವಾಗಿಯೂ 'ಬಹುದೇವವಿಶ್ವಾಸ' ಮಹಾ ಅಕ್ರಮವಾಗಿದೆ.'' (ಸೂರಃ ಲುಕ್ಮಾನ್: 13)

''ಮಗನೇ! ಸಾಸಿವೆ ಕಾಳಿನಷ್ಟಿರುವ ಒಂದು ವಸ್ತುವೇ ಇರಲಿ, ಅದು ಒಂದು ಬಂಡೆಯಲ್ಲಿ ಅಥವಾ ಆಕಾಶಗಳಲ್ಲಿ ಅಥವಾ ಭೂಮಿಯೊಳಗೆ ಎಲ್ಲಾದರೂ ಅಡಗಿರಲಿ, ಅಲ್ಲಾಹನು ಅದನ್ನು ಹೊರ ತರುವನು. ಅವನು ಸೂಕ್ಷ್ಮದರ್ಶಿ ಮತ್ತು ವಿವರಪೂರ್ಣನಾಗಿರುತ್ತಾನೆ. ಮಗನೇ

ನಮಾಝನ್ನು ಸಂಸ್ಥಾಪಿಸು, ಒಳಿತಿನ ಆದೇಶ ಕೊಡು, ಕೆಡುಕಿನಿಂದ ತಡೆ ಮತ್ತು ಯಾವ ಕಷ್ಟವೇ ಬರಲಿ ಸಹನೆ ವಹಿಸು. ಇವು ಅತಿ ಹೆಚ್ಚು ತಾಕೀತು ಮಾಡಲ್ಪಟ್ಟ ವಿಷಯಗಳು. ಜನರೊಡನೆ ಮುಖ ತಿರುಗಿಸಿ ಮಾತಾಡಬೇಡ. ಭೂಮಿಯ ಮೇಲೆ ದರ್ಪದಿಂದ ನಡೆಯಬೇಡ, ದುರಭಿಮಾನ ಹಾಗೂ ಅಹಂಕಾರ ಪಡುವವನನ್ನು ಅಲ್ಲಾಹನು ಮೆಚ್ಚುವುದಿಲ್ಲ. ನಿನ್ನ ನಡೆಯಲ್ಲಿ ಇತಿಮಿತಿಯನ್ನಿರಿಸು. ನಿನ್ನ ಸ್ವರವನ್ನು ಸ್ವಲ್ಪ ತಗ್ಗಿಸು. ಎಲ್ಲ ಸ್ವರಗಳಿಗಿಂತ ಕೆಟ್ಟ ಸ್ವರವು ಕತ್ತೆಯ ಸ್ವರವಾಗಿರುತ್ತದೆ.'' (ಸೂರಃ ಲುಕ್ಮಾನ್: 16–19)

ಈ ರೀತಿ ಪ್ರೀತಿಪೂರ್ವಕ ಸದುಪದೇಶಗಳು, ಕಥೆಗಳು, ಚಾರಿತ್ರಿಕ ಘಟನೆಗಳ ಮೂಲಕ ಮಕ್ಕಳಲ್ಲಿ ನೈಜ ವಿಶ್ವಾಸ ಮತ್ತು ಗುರಿಯನ್ನು ಬೆಳೆಸಲು ಮಾತಾಪಿತರು ಜಾಗ್ರತೆ ವಹಿಸಬೇಕು. ಇತರ ಶಿಕ್ಷಣ, ಅಧ್ಯಯನಗಳೆಲ್ಲವೂ ಇದರ ಕೆಳಗೆ ಬರುತ್ತದೆಯೆಂಬ ವಾಸ್ತವಿಕತೆಯನ್ನು ಮರೆಯಬಾರದು.

❖❖❖❖

ಆರಾಧನೆಗಳಲ್ಲಿ ನಿಷ್ಠೆ

ಮಾನವನಿಗೆ ಆಧ್ಯಾತ್ಮಿಕ, ಮನಶ್ಶಾಂತಿ, ಜೀವನ ಶುದ್ಧಿ, ಸ್ವಭಾವ ಸಂಸ್ಕರಣೆ, ವ್ಯಕ್ತಿತ್ವ ವಿಕಸನ, ದೈಹಿಕ ಸಾಮರ್ಥ್ಯವನ್ನು ಒದಗಿಸುವ ಅತಿ ವಿಶಿಷ್ಟವಾದ ಒಂದು ಆರಾಧನಾ ಕರ್ಮವಾಗಿದೆ ನಮಾಝ್. ಅದು ಸೃಷ್ಟಿ ಮತ್ತು ಸೃಷ್ಟಿಕರ್ತನ ಮಧ್ಯೆ ಇರುವ ಗುಪ್ತ ಸಂಭಾಷಣೆಯಾಗಿದೆ. ದಾಸನು ತನ್ನ ಒಡೆಯನ ಸನ್ನಿಧಿಗೆ ಹೋಗುವ ತೀರ್ಥಯಾತ್ರೆ. ಒಬ್ಬ ಸತ್ಯವಿಶ್ವಾಸಿಯು ಆ ಮೂಲಕ ತನ್ನ ಒಡೆಯನೊಂದಿಗೆ ಮಾತನಾಡುತ್ತಾನೆ. ತನ್ನ ದುಃಖ ದುಮ್ಮಾನಗಳನ್ನು, ಸಂಕಷ್ಟಗಳನ್ನು, ಅಗತ್ಯಗಳನ್ನು ಆತನ ಮುಂದೆ ಸಮರ್ಪಿಸುತ್ತಾನೆ. ಹೀಗೆ ನಮಾಝ್ ಭೂಮಿಯ ಮೇಲೆ ನಿಲ್ಲುವ ಸತ್ಯವಿಶ್ವಾಸಿಯನ್ನು ನಕ್ಷತ್ರ ಪಥಗಳಿಂದಾಚೆ, ಭೌತಿಕ ಲೋಕವನ್ನು ಮೀರಿ ದೇವ ಸನ್ನಿಧಿಗೆ ತಲುಪಿಸುತ್ತದೆ.

ಅದೇ ವೇಳೆ ಅದು ಮನುಷ್ಯನನ್ನು ವ್ಯಕ್ತಿಯಿಂದ ಸಮಾಜದೆಡೆಗೆ ಸಾಗಿಸುತ್ತದೆ. ಕಾಲ, ದೇಶ, ಭಾಷೆ, ಲಿಂಗ, ವರ್ಗ, ವರ್ಣ ಭೇದಗಳಿಗತೀತವಾಗಿ ವಿಶ್ವ ಮಾನವನನ್ನಾಗಿ ಬೆಳೆಸುತ್ತದೆ. ಮನಸ್ಸನ್ನು ಎಲ್ಲ ರೀತಿಯ ಕೆಡುಕುಗಳಿಂದ ಮುಕ್ತಗೊಳಿಸಿ ವಿಶಾಲಗೊಳಿಸುತ್ತದೆ. ನಮಾಝ್ ಸತ್ಯವಿಶ್ವಾಸಿಯನ್ನು ಸಕಲ ಸಚ್ಚರಿತರ ಪ್ರಾರ್ಥನೆಗೆ ಅರ್ಹ ಗೊಳಿಸುತ್ತದೆ. ಸಕಲ ಲೋಕವಾಸಿಗಳಿಗೆ ಪ್ರಾರ್ಥಿಸುವವನನ್ನಾಗಿ ಮಾರ್ಪಡಿಸುತ್ತದೆ.

ನಮಾಝ್ ಸತ್ಯವಿಶ್ವಾಸಿ ಮತ್ತು ಸತ್ಯನಿಷೇಧಿ ಹಾಗೂ ಮುಸ್ಲಿಮ್ ಮತ್ತು ಮುಸ್ಲಿಮೇತರರನ್ನು ಬೇರ್ಪಡಿಸುವ ಮೂಲಭೂತ ಮಾನದಂಡವಾಗಿದೆ. ಒಬ್ಬ ಸತ್ಯವಿಶ್ವಾಸಿ ಮತ್ತು ಸತ್ಯನಿಷೇಧಿಯ ಮಧ್ಯೆ ಇರುವ ಅಂತರ ನಮಾಝ್ ತೊರೆಯುವುದಾಗಿದೆ. (ಅಹ್ಮದ್, ಮುಸ್ಲಿಮ್, ಅಬೂದಾವೂದ್) ಅದನ್ನು ನೇರವೇರಿಸದವರು ಸತ್ಯನಿಷೇಧಿಯಾಗಿದ್ದಾರೆಂದು ಪ್ರವಾದಿಯವರು(ಸ) ಕಲಿಸಿರುವರು. ನರಕ ವಿಮುಕ್ತಿ ಹಾಗೂ ಸ್ವರ್ಗ ಪ್ರಾಪ್ತಿಗೂ ಅದು ಅನಿವಾರ್ಯ ಎಂದು ಕುರ್‌ಆನ್ ಸ್ಪಷ್ಟಪಡಿಸುತ್ತದೆ. ''ನಿಮ್ಮನ್ನು ನರಕಕ್ಕೆ ಒಯ್ದುದು ಯಾವುದು? **ಅವರು ಹೇಳುವರು: ನಾವು ನಮಾಝ್ ಮಾಡುವವರಾಗಿರಲಿಲ್ಲ.''**

(ಸೂರಃ ಅಲ್‌ಮುದ್ದಸ್ಸಿರ್: 42-43)

''ಅವರು ತಮ್ಮ ನಮಾಝ್‌ಗಳನ್ನು ರಕ್ಷಿಸಿಕೊಳ್ಳುತ್ತಾರೆ. ಇವರೇ ವಾರೀಸುದಾರರು. ವಾರೀಸಿನಲ್ಲಿ ಮಹೋನ್ನತ ಸ್ವರ್ಗ ಪಡೆಯುವರು ಮತ್ತು ಅದರಲ್ಲಿ ಸದಾ ವಾಸಿಸುವರು.''

(ಅಲ್‌ಮೂಮಿನೂನ್: 9-11)

ನಮಾಝ್ ಮಾನವನಲ್ಲಿ ಸದಾ ದೇವಸ್ಮರಣೆಯನ್ನು ನೆಲೆನಿಲ್ಲಿಸಲು ಕಾರಣವಾಗುತ್ತದೆ.

ಆ ಮೂಲಕ ಜೀವನವನ್ನು ಎಲ್ಲ ರೀತಿಯ ಕೆಡುಕುಗಳಿಂದಲೂ, ಅಶ್ಲೀಲತೆಗಳಿಂದಲೂ ಮುಕ್ತಗೊಳಿಸಲು ಸಹಾಯ ಮಾಡುತ್ತದೆ. ಅಲ್ಲಾಹನು ಹೇಳುತ್ತಾನೆ: ''ನನ್ನ ಸ್ಮರಣೆಗಾಗಿ ನಮಾಝನ್ನು ಸಂಸ್ಥಾಪಿಸಿರಿ.'' (ಸೂರಃ ತ್ವಾಹಾ: 14)

''ನಮಾಝನ್ನು ಸಂಸ್ಥಾಪಿಸಿರಿ. ನಿಶ್ಚಯವಾಗಿಯೂ ನಮಾಝ್ ಅಶ್ಲೀಲ ಹಾಗೂ ದುಷ್ಕೃತ್ಯಗಳಿಂದ ತಡೆಯುತ್ತದೆ ಮತ್ತು ಅಲ್ಲಾಹನ ಧ್ಯಾನ ಇದಕ್ಕಿಂತಲೂ ದೊಡ್ಡದು. ನೀವು ಮಾಡುವುದೆಲ್ಲವನ್ನೂ ಅಲ್ಲಾಹನು ಅರಿಯುತ್ತಾನೆ.'' (ಸೂರಃ ಅಲ್‌ಅಂಕಬೂತ್: 45)

ಆದ್ದರಿಂದ ಮಕ್ಕಳಿಗೆ ಸಣ್ಣ ಪ್ರಾಯದಲ್ಲಿಯೇ ನಮಾಝ್ ಮಾಡಲು ತರಬೇತುಗೊಳಿಸಬೇಕು. ನಮಾಝ್ ಕಲಿಸಲು ಪಾಠ ಶಾಲೆಗಳನ್ನು ಆಶ್ರಯಿಸಬೇಕಾದ ಅಗತ್ಯವಿಲ್ಲ. ತಂದೆ-ತಾಯಿಗಳು ನಮಾಝ್ ಮಾಡುವಾಗ ಮಕ್ಕಳನ್ನು ಜೊತೆಯಲ್ಲಿ ಸೇರಿಸಿ ಕಲಿಸಿದರೆ ಸಾಕು. ಇದನ್ನು ಮಕ್ಕಳು ಆಸಕ್ತಿಯಿಂದ ಕಲಿಯದೆ ಇರುವುದಿಲ್ಲ. ಸಾಮೂಹಿಕ ನಮಾಝ್‌ಗೆ ಒಂಟಿಯಾಗಿ ನಿರ್ವಹಿಸುವ ನಮಾಝ್‌ಗಿಂತ 27 ಪಟ್ಟು ಪ್ರತಿಫಲ ಲಭಿಸುತ್ತದೆ. ಸಣ್ಣ ಪ್ರಾಯದಲ್ಲಿಯೇ ಮಕ್ಕಳನ್ನು ಮಸೀದಿಗೆ ಹೋಗಲು ತರಬೇತುಗೊಳಿಸಬೇಕು ಮತ್ತು ಅದಕ್ಕಾಗಿ ಪ್ರೋತ್ಸಾಹಿಸುತ್ತಿರಬೇಕು. ತಂದೆ ಮಸೀದಿಗೆ ಹೋಗುವಾಗ ಮಕ್ಕಳನ್ನು ಜೊತೆಯಲ್ಲಿ ಕರೆದುಕೊಂಡು ಹೋದರೆ ಅದು ಹೆಚ್ಚು ಪ್ರಯೋಜನಕಾರಿಯಾದೀತು.

ನಮಾಝಿನ ಶಿಷ್ಟಾಚಾರಗಳು, ಪ್ರಾರ್ಥನೆಗಳನ್ನು ಕಲಿಸುವುದರ ಜೊತೆಗೆ ಅದರ ಚೈತನ್ಯ ಹಾಗೂ ಅದರ ಮರ್ಮವನ್ನು ಮನವರಿಕೆ ಮಾಡಿಕೊಡಬೇಕಾದುದು ಅಷ್ಟೇ ಅಗತ್ಯವಾಗಿದೆ. ಅದಕ್ಕಾಗಿ ಅಗತ್ಯವಾದ ಲೇಖನಗಳನ್ನು, ಪುಸ್ತಕಗಳನ್ನು ಕುಟುಂಬವು ಜೊತೆಯಾಗಿ ಕುಳಿತು ಓದಿ ಚರ್ಚಿಸುವುದು ಒಳಿತು.

ನಮಾಝ್‌ನಂತೆ ಉಪವಾಸವೂ ಅತೀ ಪ್ರಧಾನ ಆರಾಧನೆಯಾಗಿದೆ. ಮಕ್ಕಳಿಗೆ ಉಪವಾಸ ಆಚರಿಸಲು ತರಬೇತುಗೊಳಿಸಬೇಕು. ಅನ್ಯಥಾ ದೊಡ್ಡವರಾದಾಗ ಅದನ್ನು ಆಚರಿಸಲು ಕಷ್ಟವಾಗಬಹುದು. ಆದ್ದರಿಂದ ಸಣ್ಣ ಪ್ರಾಯದಲ್ಲಿಯೇ ಕೆಲವು ದಿನಗಳಾದರೂ ಉಪವಾಸ ಆಚರಿಸಲು ಪ್ರೇರೇಪಿಸುವುದು ಒಳ್ಳೆಯದು. ಸಣ್ಣ ಮಕ್ಕಳಿಗೆ ಝಕಾತ್, ಹಜ್ಜ್ ಅನ್ವಯಿಸುವುದಿಲ್ಲ. ಆದರೂ, ಝಕಾತ್ ಮತ್ತು ಹಜ್ಜ್‌ನ ಬಗ್ಗೆ ಅವರಲ್ಲಿ ಪ್ರಜ್ಞೆಯನ್ನುಂಟು ಮಾಡಲು ಸಾಧ್ಯವಾಗಬೇಕು.

ಹಾಗೆಯೇ ಮಕ್ಕಳಿಗೆ ಅವರ ಪ್ರಾಯಕ್ಕೆ ಅನುಗುಣವಾದ ರೀತಿಯಲ್ಲಿ ಮಾತೃ ಭಾಷೆಯಲ್ಲಿ ಅಲ್ಲಾಹನೊಂದಿಗೆ ಪ್ರಾರ್ಥಿಸಲು ಕಲಿಸಬೇಕು. ಇಂತಹ ವಿಷಯಗಳಲ್ಲಿ ತಂದೆ-ತಾಯಂದಿರು ತಮ್ಮ ಮಕ್ಕಳನ್ನು ಪ್ರಾರ್ಥನಾ ವೇಳೆಗಳಲ್ಲಿ, ಆರಾಧನಾ ಕರ್ಮಗಳಲ್ಲಿ ಅವರನ್ನು ಸೇರಿಸಿ ಕೊಳ್ಳಬೇಕು. ಆದರೆ ಇಂತಹ ವಿಷಯಗಳನ್ನು ಕಲಿಸುವಾಗ ಮಕ್ಕಳಿಗೆ ಆರಾಧನಾ ಕರ್ಮಗಳ ಬಗ್ಗೆ ಜಿಗುಪ್ಸೆ ಮೂಡುವಂತಾಗಬಾರದು. ಅನ್ಯಥಾ ಅದು ಪ್ರತಿಕೂಲ ಪರಿಣಾಮ ಬೀರಬಹುದು.

❖❖❖❖

ಆಹಾರ ಪದ್ಧತಿ ಮತ್ತು ವಸ್ತ್ರಧಾರಣೆ

ಹೆಚ್ಚಿನ ತಂದೆ-ತಾಯಂದಿರು ತಮ್ಮ ಮಕ್ಕಳಿಗೆ ತಿಂಡಿ-ತಿನಿಸುಗಳನ್ನು ನೀಡಿ ಪ್ರೀತಿಯನ್ನು ಪ್ರಕಟಿಸುತ್ತಾರೆ. ಮನೆಗೆ ಬರುವ ಅತಿಥಿಗಳು ತಿಂಡಿ-ತಿನಿಸುಗಳನ್ನು ತಾರದಿದ್ದರೆ ಅದೊಂದು ತಾತ್ಸಾರವಾಗಿ ಹೆಚ್ಚಿನ ಆತಿಥೇಯರು ಕಾಣುತ್ತಾರೆ. ಆದ್ದರಿಂದಲೇ ಇಂದು ಹೆಚ್ಚಿನವರ ಜೇಬುಗಳನ್ನು ಬೇಕರಿಗಳು ವಶಪಡಿಸುತ್ತವೆ. ಹೆಚ್ಚಿನ ಕಡೆಗಳಲ್ಲಿ ದಿನಸಿ ಅಂಗಡಿಗಳಿಗಿಂತಲೂ ಬೇಕರಿಗಳು ಹೆಚ್ಚಾಗಲು ಇದುವೇ ಕಾರಣ.

ತಿಂಡಿ-ತಿನಿಸುಗಳು ತಂದೆ-ತಾಯಿಗಳ ಜೇಬುಗಳನ್ನು ಖಾಲಿ ಮಾಡುವುದಕ್ಕಿಂತಲೂ ಮಕ್ಕಳ ಆರೋಗ್ಯವನ್ನು ಕೆಡಿಸುತ್ತದೆ. ಇಂದು ಬೇಕರಿಗಳಲ್ಲಿ ಸಿಗುವ ಆಹಾರ ಪದಾರ್ಥಗಳು, ಬಿಸ್ಕತ್ತುಗಳು ರೋಗಗಳಿಗೆ ಆಹ್ವಾನ ನೀಡುತ್ತವೆ. ಅದಕ್ಕಾಗಿ ಬಳಸುವ ಪೌಡರ್ (ಹುಡಿ), ಎಣ್ಣೆ ಬಣ್ಣ ಶರೀರದಲ್ಲಿರುವ ಪ್ರಕೃತಿದತ್ತವಾದ ಪ್ರತಿರೋಧಕ ಶಕ್ತಿಯನ್ನು ನಾಶಪಡಿಸಿ, ವಿನಾಶಕರ ವಾದ ಅನೇಕ ವಸ್ತುಗಳನ್ನು ಶರೀರದಲ್ಲಿ ಸೇರಿಸಿಕೊಳ್ಳುತ್ತದೆ. ಅದೇ ಸಂದರ್ಭದಲ್ಲಿ ಬೇಕರಿ ಪದಾರ್ಥಗಳನ್ನು, ಚಾಕಲೇಟುಗಳನ್ನು ತಿಂದು ಅಭ್ಯಾಸ ಇರುವ ಮಕ್ಕಳು ಅದರ ಗುಲಾಮರಾಗಿ ಮಾರ್ಪಡುತ್ತಾರೆ. ಇತರ ಅನ್ನ ಪಾನೀಯಗಳೊಂದಿಗೆ ದ್ವೇಷವನ್ನುಂಟು ಮಾಡುತ್ತದೆ. ಐಸ್ ಕ್ರೀಮ್ ಪಾರ್ಲರ್‌ಗಳು, ಬೇಕರಿಗಳ ಗುಲಾಮರಾಗುವ ಮಕ್ಕಳು ಬೇಗನೇ ರೋಗಿಗಳಾಗು ತ್ತಾರೆ. ಆದ್ದರಿಂದ ಬೇಕರಿ ಪದಾರ್ಥಗಳನ್ನು ಮಕ್ಕಳಿಗೆ ಖರೀದಿಸಿಕೊಟ್ಟು ಹಣ ಪೋಲು ಮಾಡಿ ಅವರನ್ನು ರೋಗಿಗಳಾಗಿಯೂ, ದುಸ್ವಭಾವಿಗಳಾಗಿಯೂ ಮಾರ್ಪಡಿಸುವುದರಿಂದ ತಂದೆ-ತಾಯಿಗಳು ಜಾಗರೂಕತೆ ಪಾಲಿಸಬೇಕು. ಅದೇ ರೀತಿ ಅದರಲ್ಲಿ ಅಡಕವಾಗಿರುವ ಅಪಾಯಗಳ ಬಗ್ಗೆ ಮಕ್ಕಳನ್ನು ಪ್ರಜ್ಞಾವಂತರನ್ನಾಗಿಸಬೇಕು.

ಮನೆಯಲ್ಲಿ ಆಹಾರ ತಿನ್ನುವ ಸಾಧ್ಯತೆಗಳಿದ್ದರೂ ಹೆಚ್ಚಿನವರು ಇಂದು ಫಾಸ್ಟ್ ಫುಡ್ ರೆಸ್ಟೋರೆಂಟ್‌ಗಳಿಗೆ ಹೋಗುತ್ತಾರೆ. ಮಕ್ಕಳು ಕೂಡಾ ಈ ಅಭ್ಯಾಸವನ್ನು ಬೇಗನೇ ತಮ್ಮದಾಗಿಸಿಕೊಳ್ಳುತ್ತಾರೆ. ಇಂದು ಎಲ್ಲರೂ ತಿನ್ನಲು ಅಂಗಡಿಗಳಿಗೂ, ಸಿನಿಮಾ ನೋಡಲು ಮನೆಗೂ ಹೋಗುತ್ತಾರೆ ಎಂಬ ಸುಕುಮಾರರ ಮಾತನ್ನು ತಳ್ಳಿ ಹಾಕುವಂತಿಲ್ಲ. ಈ ಸಂಪ್ರದಾಯ ಮಕ್ಕಳನ್ನು ಮನೆಗಳಿಂದ ದೂರ ಮಾಡಿ ಅಂಗಡಿಗಳಿಗೆ ಹತ್ತಿರಗೊಳಿಸುತ್ತದೆ. ಅದು ಸಂಪತ್ತು ಮತ್ತು ಆರೋಗ್ಯವನ್ನೂ ನಾಶಪಡಿಸುತ್ತದೆ. ಸ್ವಂತ ತಾಯಿ ಬೇಯಿಸಿದ ಆಹಾರಕ್ಕಿಂತ ಹೊರಗಡೆ ಲಭಿಸುವ ಆಹಾರಕ್ಕೆ ಹೊಂದಿಕೊಳ್ಳುವುದರಿಂದ ತಾಯಿಯೊಂದಿಗಿನ ಆತ್ಮೀಯ ಸಂಬಂಧಕ್ಕೆ

ಅದು ಧಕ್ಕೆಯನ್ನುಂಟು ಮಾಡುತ್ತದೆ. ಅನ್ನಪಾನೀಯಕ್ಕೂ ಒಂದು ಆತ್ಮೀಯ ಸಂಬಂಧವಿದೆ. ಮಾತ್ರವಲ್ಲ, ಅದರ ರುಚಿ ನಿರ್ಣಯಿಸುವುದು ಕೇವಲ ನಾಲಗೆ ಮಾತ್ರವಲ್ಲ ಎಂಬುದನ್ನು ಮಾತಾಪಿತರು ಅಗತ್ಯವಾಗಿ ತಿಳಿದಿರಬೇಕು. ಅದನ್ನು ಮಕ್ಕಳಿಗೆ ತಿಳಿಯಪಡಿಸಬೇಕು. ಮನೆಯೊಡತಿ ಮಾಡಿದ ಆಹಾರವನ್ನು ಗೃಹ ನಾಯಕ ಪ್ರಶಂಸಿಸಬೇಕು. ಅದು ಮಕ್ಕಳ ಮೇಲೆ ಪ್ರಭಾವ ಬೀರುತ್ತದೆ. ಅದೇ ರೀತಿ ಮಕ್ಕಳ ಅಭಿರುಚಿಗೆ ತಕ್ಕಂತಹ ಆಹಾರ ಪದಾರ್ಥಗಳನ್ನು ತಯಾರಿಸುವುದು ಉತ್ತಮ. ಆ ರೀತಿಯಲ್ಲಿ ಮಕ್ಕಳನ್ನು ಹೊಟೇಲುಗಳಿಗೆ ಹೋಗುವುದರಿಂದ ತಡೆಯಬಹುದು. ಮನೆ ಮತ್ತು ಮನೆಯವರೊಂದಿಗಿನ ಸಂಬಂಧಗಳನ್ನು ಸುದೃಢಗೊಳಿಸಲು ಈ ವಿಧಾನ ಹೆಚ್ಚು ಪರಿಣಾಮಕಾರಿಯಾಗಬಹುದು.

ಆಹಾರವನ್ನು ಹಾಳುಮಾಡದಂತೆ ಮಕ್ಕಳಿಗೆ ತರಬೇತುಗೊಳಿಸಬೇಕು. ನಮ್ಮ ಸಮಾಜ ದಲ್ಲಿ ಒಂದು ವಿಭಾಗವು ದಾರಿದ್ರ್ಯದಿಂದ ಕಷ್ಟಪಡುತ್ತಿರುವಾಗ ಇನ್ನೊಂದು ವಿಭಾಗವು ಅನ್ನ ಪಾನೀಯಗಳ ಮೂಲಕ ದುಂದುವೆಚ್ಚ ಮಾಡುತ್ತದೆ. ಎಲ್ಲ ವಿಷಯಗಳಂತೆಯೇ ಆಹಾರ ಪದಾರ್ಥಗಳ ಬಗ್ಗೆಯೂ ಸರಳತೆಯನ್ನು ಪಾಲಿಸಲು ಕಲಿಸಿಕೊಡಬೇಕು. ಈ ವಿಷಯದಲ್ಲಿರುವ ಕುರ್‌ಆನ್ ಸೂಕ್ತವನ್ನು ಮರೆಯಬಾರದು. ''ಉಣ್ಣಿರಿ, ಕುಡಿಯಿರಿ ಮತ್ತು ಮಿತಿ ಮೀರ ಬೇಡಿರಿ. ಅಲ್ಲಾಹ್ ಮಿತಿ ಮೀರುವವರನ್ನು ಮೆಚ್ಚುವುದಿಲ್ಲ.'' (ಸೂರಃ ಅಲ್‌ಅಅ್‌ರಾಫ್: 31)

ನೀರು, ವಿದ್ಯುತ್ ಇತ್ಯಾದಿ ಅನಗತ್ಯವಾಗಿ ಹಾಳು ಮಾಡಬಾರದೆಂಬ ಸಂದೇಶವನ್ನು ಮಕ್ಕಳಲ್ಲಿ ಬೆಳೆಸಲು ತಂದೆ-ತಾಯಂದಿರು ಹೊಣೆಗಾರರಾಗಿರುತ್ತಾರೆ. ಸರಳತೆಯನ್ನು ಜೀವನ ಪದ್ಧತಿಯಾಗಿ ಮಾರ್ಪಡಿಸಬೇಕು. ದೊಡ್ಡವರು ಈ ವಿಷಯದಲ್ಲಿ ಮಾದರಿಯಾದರೆ ಮಾತ್ರ ಮಕ್ಕಳನ್ನು ಹಾಗೆಯೇ ಬೆಳೆಸಲು ಸಾಧ್ಯ.

ಆಹಾರ ಪದ್ಧತಿಯಂತೆಯೇ ವಸ್ತ್ರಧಾರಣೆಯೂ ಅತೀ ಪ್ರಮುಖವಾಗಿದೆ. ಗಂಡು ಮತ್ತು ಹೆಣ್ಣು ಮಕ್ಕಳಿಗೆ ಇಸ್ಲಾಮೀ ನಿಯಮಗಳನ್ನು ಪಾಲಿಸಿ ವಸ್ತ್ರ ಧರಿಸಲು ಸಣ್ಣ ಪ್ರಾಯದಲ್ಲಿಯೇ ತರಬೇತುಗೊಳಿಸಬೇಕು. ಪಾಶ್ಚಾತ್ಯ ಸಂಸ್ಕೃತಿಯಿಂದ ಹುಟ್ಟಿಕೊಂಡ ಫ್ಯಾಶನ್ ಭ್ರಮೆ ಮಕ್ಕಳಲ್ಲಿ ಬೆಳೆಯದಂತೆ ಜಾಗ್ರತೆ ವಹಿಸಬೇಕು. ಇಂತಹ ಸದ್ಗುಣಗಳು, ಚಾರಿತ್ರ್ಯಗಳನ್ನು ತಂದೆ-ತಾಯಿಗಳು ಅಳವಡಿಸಿದರೆ ಮಕ್ಕಳಲ್ಲಿಯೂ ಅದನ್ನು ಬೆಳೆಸಲು ಸಾಧ್ಯವಿದೆ. ತಾಯಂದಿರು ಈ ಬಗ್ಗೆ ಹೆಚ್ಚು ಗಮನಹರಿಸಬೇಕು. ಆದ್ದರಿಂದಲೇ ಅಬೂಬಕರ್(ರ) ಹೀಗೆ ಹೇಳಿರುವರು: ''ಅನೇಕ ದಿನಗಳಿಗೆ ಬೇಕಾದ ಆಹಾರವನ್ನು ಒಂದು ದಿನದಲ್ಲಿ ಮುಗಿಸುವ ಗೃಹಿಣಿಯರನ್ನು ನಾನು ದ್ವೇಷಿಸುತ್ತೇನೆ.''

ಮನೆಯ ಆಡಳಿತಾಧಿಕಾರಿ, ಅದನ್ನು ನಿಯಂತ್ರಿಸಬೇಕಾದವಳು ಗೃಹನಾಯಕಿಯಾಗಿ ದ್ದಾಳೆಂಬುದನ್ನು ಮರೆಯಬಾರದು. ಅವರ ಮಕ್ಕಳ ವಸ್ತ್ರಧಾರಣೆ, ಆಹಾರ ಪದ್ಧತಿಯ ಬಗ್ಗೆ ಹೆಚ್ಚಿನ ಕಾಳಜಿ ವಹಿಸಬೇಕು. ಆದ್ದರಿಂದ ತಾಯಿ ಉತ್ತಮಳಾದರೆ ಮಕ್ಕಳು ಒಳ್ಳೆಯವರಾಗು ತ್ತಾರೆ. ತದ್ವಿರುದ್ಧವಾಗಿದ್ದರೆ ಮಕ್ಕಳ ಮೇಲೂ ಅದರ ಪ್ರಭಾವ ಬೀಳುತ್ತದೆ. ಅರಬಿ ಕವಿ ಹಾಡಿದ್ದು

ಸತ್ಯ. ''ಒಂದು ಮನೆಯಲ್ಲಿ ಅದನ್ನು ಬೇಕಾದ ರೀತಿಯಲ್ಲಿ ನಿಯಂತ್ರಿಸುವ ಗೃಹನಾಯಕಿ ಇಲ್ಲದಿದ್ದರೆ ಆವನ ಮನೆಯ ಒಳಿತುಗಳೆಲ್ಲವೂ ನಾಶಹೊಂದುವುದು ಖಚಿತ.''

❖❖❖❖

ಸಾಮೂಹಿಕ ಅಧ್ಯಯನ ಮತ್ತು ಪ್ರಾರ್ಥನೆ

ಪ್ರತಿದಿನ ಅನೇಕಾರು ಪುಸ್ತಕಗಳು ಬಿಡುಗಡೆಯಾಗುತ್ತವೆ. ಅವುಗಳಲ್ಲಿ ಹೆಚ್ಚಿನ ಪುಸ್ತಕಗಳು ಓದಲು ಸಾಧ್ಯವಿಲ್ಲ, ಕೆಲವು ಒಂದು ಬಾರಿ ಕಷ್ಟಪಟ್ಟು ಓದಿ ಮುಗಿಸಬೇಕಾಗುತ್ತದೆ. ಕೆಲವೊಂದು ಒಂದೋ ಎರಡೋ ಬಾರಿ ಓದಿ ಮುಗಿಸಲು ಸಾಧ್ಯವಾಗಬಹುದು. ಆದರೆ, ಎಷ್ಟು ಬಾರಿ ಓದಿದರೂ ಬೇಸರವಾಗದ ಒಂದು ಗ್ರಂಥವಿದೆ ಅದುವೇ ಪವಿತ್ರ ಕುರ್‌ಆನ್ ಏಕೈಕ ಗ್ರಂಥ ಮಾತ್ರ. ಅದರ ಅರ್ಥ ಪಾರಾಯಣ ಎಂದಾಗಿದೆ. 150 ಕೋಟಿಗಿಂತಲೂ ಹೆಚ್ಚು ಜನರು ಅದನ್ನು ಓದುತ್ತಾರೆ. ಹತ್ತಿಪ್ಪತ್ತು ಬಾರಿಯಲ್ಲ ನೂರು-ಇನ್ನೂರು, ಮುನ್ನೂರು ಬಾರಿ - 1400 ವರ್ಷಗಳಿಂದ ಇದು ನಿರಂತರವಾಗಿ ಸಾಗುತ್ತಿದೆ. ಇದುವರೆಗೂ ಅದಕ್ಕೆ ತಡೆಯುಂಟಾಗಲಿಲ್ಲ, ಇನ್ನು ಬರಲು ಸಾಧ್ಯವೂ ಇಲ್ಲ, ಪ್ರತಿಯೊಂದು ಪಾರಾಯಣವೂ ಹೊಸ ಪಾರಾಯಣಕ್ಕೆ ಪ್ರೇರೇಪಿಸುತ್ತದೆ. ಅದಕ್ಕೆ ಅರ್ಥ ಮಾಡಿದವರು ಲಕ್ಷಗಟ್ಟಲೆ ಮಂದಿಯಿದ್ದಾರೆ. ಅದನ್ನು ಕಂಠಪಾಠ ಮಾಡಿದವರು ಇಲ್ಲದ ಒಂದು ಕಾಲಘಟ್ಟವೂ ಕಳೆದು ಹೋಗಲಿಲ್ಲ ಕುರ್‌ಆನ್ ಜಗತ್ತು ಕಂಡ ಮಹಾನ್ ಕ್ರಾಂತಿ ಸಾಧಿಸಿದ ಗ್ರಂಥವಾಗಿದೆ. ಪಾಮರರಾದ ಜನತೆಯನ್ನು ನಾಗರಿಕತೆಯ ಪರಮೋನ್ನತಿಗೆ ಏರಿಸಿತು. ಒಂಟೆಯ ಮೂಗುದಾರ ಹಿಡಿದು ಮರುಭೂಮಿಯಲ್ಲಿ ಅಲೆದಾಡುತ್ತಿದ್ದವರನ್ನು ಜಗತ್ತಿನ ನೇತಾರರೂ, ನಾಯಕರುಗಳನ್ನಾಗಿಯೂ ಮಾರ್ಪಡಿಸಿತು. ಮದ್ಯಪಾನ ಮಾಡಿ ಸೋಮಾರಿಗಳಾಗಿದ್ದ, ಸುಖಲೋಲುಪರನ್ನು ಮಹಾನ್ ಗುರಿಯೆಡೆಗೆ ಸಾಗುವ ಕರ್ಮಯೋಗಿಗಳನ್ನಾಗಿ ಮಾಡಿತು. ಅವರ ಸಂಪೂರ್ಣ ಜೀವನವನ್ನು ಅದು ಬದಲಾಯಿಸಿತು.

ವಿಶ್ವಾಸ, ಜೀವನದ ದೃಷ್ಟಿಕೋನ, ಆಚಾರ-ವಿಚಾರ, ಆರಾಧನೆ, ಸ್ವಭಾವ ಇತ್ಯಾದಿ ಎಲ್ಲ ಕ್ಷೇತ್ರಗಳಲ್ಲೂ ಕುರ್‌ಆನ್ ಬದಲಾವಣೆಯನ್ನುಂಟು ಮಾಡುತ್ತದೆ. ಭಾವನೆಗಳು, ಕನಸುಗಳು, ಎಲ್ಲವನ್ನೂ ಅದು ನಿಯಂತ್ರಿಸುತ್ತದೆ. ಶರೀರವನ್ನು ಬಲಿಷ್ಠಗೊಳಿಸುತ್ತದೆ. ಮನಸ್ಸನ್ನು ಸಂಸ್ಕರಿಸು ತ್ತದೆ, ಆತ್ಮವನ್ನು ಉತ್ಕೃಷ್ಟಗೊಳಿಸುತ್ತದೆ. ಆಲೋಚನೆಯನ್ನು ಪರಿ ಪಕ್ವಗೊಳಿಸುತ್ತದೆ. ವಿವೇಕವನ್ನು ವಿಕಾಸಗೊಳಿಸುತ್ತದೆ. ವಿನಯ, ಕ್ಷಮಾಶೀಲತೆಯ ಗುಣವನ್ನು ಬೆಳೆಸುತ್ತದೆ. ಆತ್ಮಸ್ಥೈರ್ಯ, ತಾಳ್ಮೆಯ ಪಾಠಗಳನ್ನು ಕಲಿಸಿಕೊಡುತ್ತದೆ. ವಿಶ್ವಾಸ ಮತ್ತು ಜೀವನವನ್ನು ಜೋಡಿಸುತ್ತದೆ. ಮಾತು-ಕೃತಿಯಲ್ಲಿ ಸಾಮ್ಯತೆಯನ್ನುಂಟು ಮಾಡುತ್ತದೆ. ಕ್ರಾಂತಿ ಮತ್ತು ವಿಮೋಚನೆಯನ್ನು ಪರಸ್ಪರ ಜೋಡಿಸುತ್ತದೆ. ಆಧ್ಯಾತ್ಮಿಕ ಮತ್ತು ಭೌತಿಕತೆಯನ್ನು ಸಮನ್ವಯಗೊಳಿಸುತ್ತದೆ.

ಇತಿಹಾಸ, ಭೌತಶಾಸ್ತ್ರ, ಸಸ್ಯಶಾಸ್ತ್ರ, ಜೀವಶಾಸ್ತ್ರ, ಸಮಾಜಶಾಸ್ತ್ರ, ತತ್ವಶಾಸ್ತ್ರ, ವ್ಯಕ್ತಿ ಜೀವನ, ಕುಟುಂಬ ವ್ಯವಸ್ಥೆ, ಸಾಮಾಜಿಕ ವ್ಯವಸ್ಥೆ, ಆರ್ಥಿಕ ನೀತಿ, ರಾಜಕೀಯ ನೀತಿ, ಆಡಳಿತ ವ್ಯವಸ್ಥೆ ಸಚ್ಚಾರಿತ್ರ್ಯ, ನೈತಿಕ ತತ್ವ ಸಿದ್ಧಾಂತಗಳು ಇತ್ಯಾದಿ ಎಲ್ಲವೂ ಕುರ್‌ಆನಿನಲ್ಲಿದೆ. ಆ ಮೂಲಕ ಅದು ಮಾನವನನ್ನು ಅತ್ಯಂತ ನೇರ ಹಾದಿಯ ಮೂಲಕ ವಿಜಯದೆಡೆಗೆ ತಲುಪಿಸುತ್ತದೆ. ''ವಾಸ್ತವದಲ್ಲಿ ಈ ಕುರ್‌ಆನ್ ಅತ್ಯಂತ ನೇರ ಮಾರ್ಗವನ್ನು ತೋರಿಸಿ ಕೊಡುತ್ತದೆ. ಇದನ್ನು ಸ್ವೀಕರಿಸಿಕೊಂಡು ಸತ್ಕರ್ಮವೆಸಗಿದವರಿಗೆ ದೊಡ್ಡ ಸತ್ಫಲವಿದೆಯೆಂಬ ಸುವಾರ್ತೆಯನ್ನು ನೀಡುತ್ತದೆ. ಮತ್ತು ಪರಲೋಕದ ಮೇಲೆ ವಿಶ್ವಾಸವಿರಿಸದವರಿಗೆ ನಾವು ಅವರಿಗಾಗಿ ಘೋರ ಯಾತನೆಯನ್ನು ಸಿದ್ಧಗೊಳಿಸಿಟ್ಟಿದ್ದೇವೆಂದು ತಿಳಿಸುತ್ತದೆ.'' (ಸೂರಃ ಬನೀ ಇಸ್ರಾಈಲ್: 9-10)

ಕುರ್‌ಆನ್ ಅಲ್ಲಾಹನ ಸಂದೇಶವಾಗಿದೆ. ಅರ್ಥವರಿತು ಅದನ್ನು ಕಲಿತು ಪಾರಾಯಣ ಮಾಡಿದವರು ತಮ್ಮನ್ನು ಅಲ್ಲಾಹನೊಂದಿಗೆ ಜೋಡಿಸುತ್ತಾರೆ. ಅಲ್ಲಾಹನು ತಮ್ಮೊಂದಿಗೆ ಮಾತನಾಡುವುದಾಗಿ, ಆದೇಶಗಳನ್ನು ನೀಡುವುದಾಗಿ ಅನುಭವಿಸುತ್ತಾರೆ. ಹೀಗೆ ಅಲ್ಲಾಹನ ಆಪ್ತರಾಗುವ ಸೌಭಾಗ್ಯ ಲಭಿಸುತ್ತದೆ. ಸರ್ವ ಲೋಕಗಳ ಸೃಷ್ಟಿಕರ್ತ, ಒಡೆಯ, ಸಂರಕ್ಷಕನಾದ ಅಲ್ಲಾಹನ ಆಪ್ತರಾಗಿರುವುದಕ್ಕಿಂತ ದೊಡ್ಡ ಸೌಭಾಗ್ಯ ಬೇರೇನಿದೆ?

ಅಲ್ಲಾಹನು ಕುರ್‌ಆನಿನ ಮೂಲಕ ನಮ್ಮ ಜೀವನ ಹೇಗಿರಬೇಕೆಂದು ನಮಗೆ ಹೇಳಿಕೊಡುತ್ತಾನೆ. ಅದನ್ನು ಓದದೆ, ಕಲಿಯದೆ ಅದನ್ನು ಅರ್ಥ ಮಾಡಲು ಮತ್ತು ಅದಕ್ಕನುಗುಣವಾಗಿ ಜೀವನ ಸಾಗಿಸಲು ಸಾಧ್ಯವಿಲ್ಲ. ಅದೇ ರೀತಿಯಲ್ಲಿ ಅಲ್ಲಾಹನು ನಮಗೆ ನೀಡಿದ ಸಂದೇಶದ ಮರ್ಮವನ್ನು ಅರ್ಥಮಾಡಲು ಪ್ರಯತ್ನಿಸದಿರುವುದು ಅತಿ ದೊಡ್ಡ ಕೃತಘ್ನತೆಯಾಗಿದೆ. ಆದ್ದರಿಂದ ಕುರ್‌ಆನಿನ ತಾತ್ಪರ್ಯವನ್ನು ಅರ್ಥ ಮಾಡಬೇಕಾದುದು ಸಕಲ ಮುಸ್ಲಿಮರ ಕಡ್ಡಾಯ ಕರ್ತವ್ಯವಾಗಿದೆ. ಪ್ರವಾದಿ(ಸ) ಹೇಳಿರುವರು, ''ಈ ಕುರ್‌ಆನ್ ದೈವಿಕ ಊಟದ ಹಾಸಾಗಿದೆ. ನಿಮ್ಮ ಕೈಲಾದಷ್ಟು ಅದರ ಕಡೆಗೆ ಧಾವಿಸಿರಿ. ಈ ಕುರ್‌ಆನ್ ಅಲ್ಲಾಹನ ಪಾಶವಾಗಿದೆ. ಪ್ರತ್ಯಕ್ಷ ಪ್ರಕಾಶವಾಗಿದೆ. ಗುಣಪಡಿಸುವ ಸಿದ್ಧೌಷಧವಾಗಿದೆ. ಅದನ್ನು ಬಿಗಿಯಾಗಿ ಹಿಡಿಯುವವನಿಗೆ ರಕ್ಷಣೆಯಾಗಿದೆ. ಅದನ್ನು ಅನುಸರಿಸುವವನಿಗೆ ಮುಕ್ತಿಯಿದೆ. ಅವನಿಗೆ ಉಪದೇಶದ ಅಗತ್ಯವಿರುವಂತಾಗಲು ಅವನು ಪಥಭ್ರಷ್ಟನಾಗಲಾರ. ನೇರಗೊಳಿಸುವ ಅಗತ್ಯ ಬರುವಂತಾಗುವಷ್ಟು ಅವನು ವಕ್ರನಾಗಲಿಕ್ಕಿಲ್ಲ. ಅದರ ವಿಸ್ಮಯಗಳು ಕಡಿಮೆಯಾಗಲಾರದು. ಅದನ್ನು ಹೆಚ್ಚೆಚ್ಚು ಓದುವುದರಿಂದ ಅದು ಹಳತಾಗುವುದಿಲ್ಲ. ಅಲ್ಲಾಹನು ಅದರ ಪಠಣಕ್ಕೆ ಅದರ ಪ್ರತಿಯೊಂದು ಅಕ್ಷರದ ಬದಲು ಹತ್ತು ಪುಣ್ಯಗಳನ್ನು ನೀಡುತ್ತಾನೆ.''

''ನೀನು ಕುರ್‌ಆನ್ ಪಾರಾಯಣ ಮಾಡು. ಭೂಮಿಯ ಮೇಲೆ ಅದು ನಿನಗೆ ಬೆಳಕಾಗಿದೆ. ಪರಲೋಕದಲ್ಲಿ ಅತಿ ದೊಡ್ಡ ಸಂಪಾದನೆಯಾಗಿದೆ.'' (ಇಬ್ನು ಹಿಬ್ಬಾನ್)

ನಮ್ಮ ಭಾಷೆಯಲ್ಲಿ ಬಹಳಷ್ಟು ಕುರ್‌ಆನ್ ವ್ಯಾಖ್ಯಾನಗಳಿವೆ. ಆದ್ದರಿಂದ ಕುರ್‌ಆನಿನ ತಾತ್ಪರ್ಯವನ್ನು ಅರ್ಥಮಾಡಲು ಈ ಕಾಲದಲ್ಲಿ ಕಷ್ಟಪಡಬೇಕಾದ ಅಗತ್ಯವಿಲ್ಲ. ಪ್ರಭಾತದ

ವೇಳೆ ಕುಟುಂಬ ಸದಸ್ಯರು ಜೊತೆಯಲ್ಲಿ ಕುಳಿತುಕೊಂಡು ಸ್ವಲ್ಪ ಸಮಯ ಕುರ್‌ಆನ್ ವ್ಯಾಖ್ಯಾನಗಳನ್ನು ಓದುವುದರಿಂದ ಪ್ರಯೋಜನವಾಗುತ್ತದೆ. ಎಲ್ಲ ದಿನವೂ ಈ ರೀತಿ ಕುಳಿತರೆ ಕುಟುಂಬದ ಐಕ್ಯತೆಗೂ ಪ್ರಯೋಜನವಾಗುತ್ತದೆ. ಕುರ್‌ಆನ್ ಅಧ್ಯಯನ ಜೀವನವನ್ನು ಅದಕ್ಕನುಗುಣವಾಗಿ ರೂಪೀಕರಿಸಲು, ಅಲ್ಲಾಹನ ವಿಶೇಷ ಕರುಣೆಗೆ ಅರ್ಹಗೊಳಿಸುತ್ತದೆ. ಮೊದಲ ದಿನ ತಂದೆ ಓದಿದರೆ, ಮರುದಿನ ತಾಯಿ ನಂತರ ಮಕ್ಕಳು. ಹೀಗೆ ನಿರಂತರ ಬದಲಾಯಿಸುತ್ತಿದ್ದರೆ ಎಲ್ಲರೂ ಅದರಲ್ಲಿ ಭಾಗಿಯಾಗುತ್ತಾರೆ. ಅಧ್ಯಯನದ ನಂತರ ಆ ಬಗ್ಗೆ ಚರ್ಚಿಸಿ ತರುವಾಯ ಕುರ್‌ಆನ್ ಪ್ರಕಾರ ಜೀವಿಸುವ ಪ್ರತಿಜ್ಞೆ ಕೈಗೊಳ್ಳುವುದು ಹಾಗೂ ಅದಕ್ಕಾಗಿ ಅಲ್ಲಾಹನ ಸಹಾಯ ಕೋರಿ ಪ್ರಾರ್ಥಿಸುವುದು ಬಹಳ ಒಳ್ಳೆಯದು.

ಕುರ್‌ಆನ್ ನಿರಂತರವಾಗಿ ಚಿಂತನೆಗೆ ಕರೆಕೊಡುವ ಗ್ರಂಥವಾಗಿದೆ.

''ಇದೊಂದು ಅತಿ ಸಮೃದ್ಧವಾದ ಗ್ರಂಥವಾಗಿದ್ದು ಇವರು ಇದರ ಸೂಕ್ತಗಳ ಕುರಿತು ಚಿಂತನೆ ನಡೆಸಲೆಂದು ಮತ್ತು ಬುದ್ಧಿಜೀವಿಗಳು ಇದರಿಂದ ಉಪದೇಶ ಪಡೆಯುವಂತಾಗಲೆಂದು ನಾವು ಇದನ್ನು ನಿಮಗೆ ಅವತೀರ್ಣಗೊಳಿಸಿದ್ದೇವೆ.'' (ಸೂರಃ ಸ್ವಾದ್: 29)

''ಅವರು ಕುರ್‌ಆನಿನ ಬಗ್ಗೆ ಚಿಂತನೆ ನಡೆಸಲಿಲ್ಲವೇ? ಅಥವಾ ಅವರ ಹೃದಯಗಳಿಗೆ ಬೀಗ ಮುದ್ರೆ ಬಿದ್ದಿದೆಯೇ?'' (ಸೂರಃ ಮುಹಮ್ಮದ್: 24)

ಇಂತಹ ಇನ್ನಿತರ ಸೂಕ್ತಗಳೂ ಕುರ್‌ಆನಿನಲ್ಲಿವೆ. ಆದ್ದರಿಂದ ಕುರ್‌ಆನ್ ಸೂಕ್ತಗಳ ಬಗ್ಗೆ ಆಳವಾದ ಚಿಂತನೆಗೆ ಮಕ್ಕಳನ್ನು ಪ್ರೋತ್ಸಾಹಿಸಬೇಕು. ನಮಾಝ್‌ನಲ್ಲಿ ಪಠಿಸುವ ಸೂಕ್ತಗಳಿಂದ ಇದನ್ನು ಆರಂಭಿಸಬಹುದಾಗಿದೆ. ಇದು ಏಕಾಗ್ರತೆಯೊಂದಿಗೆ ನಮಾಝ್ ಮಾಡುವ ಶಕ್ತಿಯನ್ನೊದಗಿಸುತ್ತದೆ. ಆಧುನಿಕ ಲೋಕವು ಅನುಭವಿಸುತ್ತಿರುವ ಸಮಸ್ಯೆಗಳಿಗೆ ಪರಿಹಾರವಾಗಿ ಕುರ್‌ಆನ್‌ನ ಶಿಕ್ಷಣಗಳನ್ನು ಮುಂದಿಡಲು ನಮ್ಮ ಮಕ್ಕಳು ಸಮರ್ಥರಾಗಿ ಬೆಳೆಯಲು ಸಾಧ್ಯವಿದೆ. ಒಬ್ಬನು ಗಳಿಸಿದುದರಲ್ಲಿ ಅತ್ಯಧಿಕ ಫಲಪ್ರದ ಲಾಭ ಇದಲ್ಲದೆ ಇನ್ನೇನಿದೆ?

ಸತ್ಯವಿಶ್ವಾಸಿಗಳ ನಡಿಗೆ, ನಿದ್ದೆ, ಎಚ್ಚರ, ತಿನ್ನುವುದು, ಕುಡಿಯುವುದು, ಸ್ವಭಾವ, ದೃಷ್ಟಿಕೋನ, ಸಂಪ್ರದಾಯ, ವ್ಯವಹಾರ, ಆರಾಧನೆಗಳು, ಆಚಾರ-ವಿಚಾರಗಳು, ಸಾಮಾಜಿಕ ಶಿಷ್ಟಚಾರಗಳು, ಕುಟುಂಬ ವ್ಯವಸ್ಥೆ, ಸಾಂಸ್ಕೃತಿಕ ರೀತಿ ನೀತಿಗಳು, ರಾಜಕೀಯ ಇತ್ಯಾದಿ ಎಲ್ಲ ಕ್ಷೇತ್ರಗಳನ್ನು ಪ್ರವಾದಿ ಚರ್ಯೆಯು ನಿಯಂತ್ರಿಸುತ್ತದೆ. ಆದ್ದರಿಂದ ವಾರದಲ್ಲಿ ಒಂದು ದಿನ ಹದೀಸ್ ಅಧ್ಯಯನ ಮತ್ತು ಆರು ದಿನಗಳನ್ನು ಕುರ್‌ಆನ್ ಅಧ್ಯಯನಕ್ಕೆ ಮೀಸಲಿಡಬೇಕು. ಹದೀಸ್ ಅಧ್ಯಯನ ಮತ್ತು ಪ್ರಾರ್ಥನೆ ನೆರವೇರಿಸಿ ಆರಂಭಿಸುವ ದಿನ ಅನುಗ್ರಹೀತವಾಗದಿರದು. ಮನೆಯ ಇಸ್ಲಾಮೀ ವಾತಾವರಣಕ್ಕೂ ಅದು ಪ್ರಯೋಜನಕಾರಿ.

❖❖❖❖

ಪ್ರೇಮ ವಿವಾಹಗಳ ಸೋಲಿಗೆ ಕಾರಣ

ಕ್ಯಾಂಪಸ್‌ಗಳಲ್ಲಿ, ವೃತ್ತಿ ಜೀವನದಲ್ಲಿ ಪರಸ್ಪರ ಪರಿಚಿತರಾದ ಸ್ತ್ರೀ-ಪುರುಷರು ಪ್ರೇಮ ಲೋಕದಲ್ಲಿ ತೇಲಾಡುವುದು ಪರಸ್ಪರರನ್ನು ಅರ್ಥೈಸಿಕೊಂಡಂತೂ ಅಲ್ಲ, ನೋಟ, ಮಾತು, ಬಾಹ್ಯ ಸೌಂದರ್ಯ ಹಾಗೂ ಮಧುರ ಮಾತುಗಳಿಂದ ಆಕರ್ಷಿತರಾಗುವುದರಿಂದಾಗಿದೆ. ಹೀಗೆ ಪರಸ್ಪರ ಪರಿಚಿತರಾದ ಪ್ರೇಮಿಗಳಿಬ್ಬರೂ ತಮ್ಮ ಉತ್ತಮ ಸ್ವಭಾವವನ್ನು ಮಾತ್ರ ಪರಸ್ಪರರಿಗೆ ತೋರ್ಪಡಿಸಿಕೊಳ್ಳುತ್ತಾರೆ. ಪ್ರಿಯಕರನು ಪ್ರೇಯಸಿಯ ಬಳಿ ಇಷ್ಟವಿಲ್ಲದ ವಿಷಯಗಳನ್ನೆಂದೂ ಹೇಳಲು ಹೋಗುವುದಿಲ್ಲ, ಪ್ರೇಯಸಿಗೆ ಹತ್ತಿರವಾಗಬೇಕೆಂಬುದೇ ಆತನ ಅತೀವ ಬಯಕೆ. ಆದ್ದರಿಂದಲೇ ಪ್ರೇಮಿಗಳ ನಡುವೆ ಆಗುವ ಮೊದಲ ಸಂಭಾಷಣೆಗಳೆಲ್ಲವೂ ಹೃದಯಕ್ಕೆ ಮುದ ನೀಡುವವುಗಳೇ ಆಗಿರುತ್ತವೆ. ಆದರೆ ವಿವಾಹವಾಗುವುದರೊಂದಿಗೆ ನೈಜ ಜೀವನದ ಅರಿವಾಗುತ್ತದೆ. ಸ್ವಭಾವ, ವರ್ತನೆ ಮತ್ತು ಜೀವನ ಶೈಲಿಯಲ್ಲಿರುವ ವಿಕೃತ ರೂಪಗಳೆಲ್ಲವೂ ಅನುಭವಕ್ಕೆ ಬರತೊಡಗುತ್ತದೆ. ಅದರೊಂದಿಗೆ ಆಕಾಶದಲ್ಲಿ ತೇಲಾಡುತ್ತಿದ್ದ ಕನಸುಗಳೂ ಬಯಕೆಗಳೆಲ್ಲವೂ ಭಗ್ನಗೊಳ್ಳುತ್ತವೆ. ಸಂಬಂಧಗಳು ಬಂಧನಗಳಂತೆ ಭಾಸವಾಗಿ ದಾಂಪತ್ಯ ಜೀವನವೇ ಮುರಿದು ಬೀಳುತ್ತದೆ.

ಪ್ರೀತಿಸುವಾಗ ಜೊತೆಗಾರನ/ಳ ಒಳಿತುಗಳನ್ನು ಮಾತ್ರ ಗಮನಿಸಲಾಗುತ್ತದೆ. ಕೆಡುಕುಗಳೆಲ್ಲವನ್ನೂ ನಿರ್ಲಕ್ಷಿಸುತ್ತಾರೆ. ಇತರರು ಆ ಬಗ್ಗೆ ಗಮನಸೆಳೆದರೆ ಆ ಬಗ್ಗೆ ಚಿಂತಿಸಲಿಕ್ಕೆ ಅಥವಾ ಅವುಗಳ ಗೊಡವೆಗೆ ಹೋಗುವುದಿಲ್ಲ, ಮಾತ್ರವಲ್ಲ, ಯಾರಾದರೂ ಅವರ ಕೆಡುಕನ್ನು ಹೇಳಿದರೆ ಪ್ರಿಯಕರ ಮತ್ತು ಪ್ರೇಯಸಿಗೆ ಅವರೊಂದಿಗೆ ಅತ್ಯಧಿಕ ದ್ವೇಷ ಉಂಟಾಗುತ್ತದೆ. ಆದರೆ ವಿವಾಹಿತರಾದ ಬಳಿಕ ಎಲ್ಲವನ್ನೂ ಅನುಭವದ ಮೂಲಕ ತಿಳಿದ ದಂಪತಿಗಳು ನಿರ್ಲಕ್ಷಿಸಿದ್ದ ಎಲ್ಲಾ ಕೆಡುಕುಗಳೂ ನೋವನ್ನುಂಟು ಮಾಡ ತೊಡಗುತ್ತವೆ. ಅದು ಪರಸ್ಪರರನ್ನು ಬೇರ್ಪಡಿಸಲು, ದಾಂಪತ್ಯದಲ್ಲಿ ಬಿರುಕುಂಟು ಮಾಡಲು ದಾರಿ ಮಾಡುತ್ತದೆ.

ವಿವಾಹಪೂರ್ವದಲ್ಲಿ ದೈಹಿಕ ಸಂಪರ್ಕವಿಟ್ಟಿದ್ದರೆ ಅದು ಇನ್ನಷ್ಟು ಅನಾಹುತಗಳಿಗೆ ಕಾರಣವಾಗುತ್ತದೆ. ವಿವಾಹದ ನಂತರ ಪುರುಷನು ಯಾರಾದರೂ ಸ್ತ್ರೀಯೊಂದಿಗೆ ಮಾತನಾಡುವುದನ್ನು ಕಂಡರೆ ಪತ್ನಿಗೆ ಸಂಶಯ ಮೂಡ ತೊಡಗುತ್ತದೆ. ಪ್ರಣಯ ಕಾಲದಲ್ಲಿ ತನ್ನೊಂದಿಗೆ ಮಾಡಿದ ಎಲ್ಲ ಕೃತ್ಯಗಳನ್ನು ಪತಿ ಆಕೆಯೊಂದಿಗೂ ಮಾಡಬಹುದೆಂದು ಸಂಶಯ

ಪಡತೊಡಗುತ್ತಾಳೆ. ಇದು ಬೆಳೆದು ಗುರುತರವಾದ ಸಂಶಯ ರೋಗಕ್ಕೆ ತುತ್ತಾಗುತ್ತಾಳೆ. ಅದೇ ರೀತಿ ಪತ್ನಿ ಯಾರಾದರೂ ಒಬ್ಬ ಪುರುಷನೊಂದಿಗೆ ಮಾತನಾಡುವುದನ್ನು ಕಂಡರೆ ಪತಿಯೂ ಸಂಶಯಕ್ಕೊಳಗಾಗುತ್ತಾನೆ. ಪ್ರಣಯ ವೇಳೆಯಲ್ಲಿ ನಡೆದ ಘಟನೆಗಳು ನೆನಪಿಗೆ ಬಂದು ಅದು ಪರಸ್ಪರ ತಪ್ಪುಕಲ್ಪನೆಗೆ ಕಾರಣವಾಗುತ್ತದೆ. ಹೀಗೆ ಸಂಶಯ ರೋಗ ಉಲ್ಬಣಿಸಿ ಕೊನೆಗೆ ದಾಂಪತ್ಯ ಮುರಿದು ಬೀಳುತ್ತದೆ.

ಪ್ರೇಮವು ನೈತಿಕ ಉಲ್ಲಂಘನೆಗೆ ದಾರಿ ಮಾಡಿಕೊಡುವುದರೊಂದಿಗೆ ದಾಂಪತ್ಯ ಪತನಕ್ಕೂ ಸಂಕಷ್ಟಕ್ಕೂ ದಾರಿ ಮಾಡಿಕೊಟ್ಟಿದೆಯೆಂಬುದಕ್ಕೆ ಇಂದಿನ ಸಮಾಜವೇ ಸಾಕ್ಷಿಯಾಗಿದೆ.

ಇಂದು ಯುವಕ-ಯುವತಿಯರು ಪ್ರೇಮದ ಬಲೆಯಲ್ಲಿ ಸಿಲುಕಿಕೊಳ್ಳಲು ಹಲವಾರು ಮಾರ್ಗಗಳಿವೆ. ಶಾಲಾ ಕಾಲೇಜುಗಳಲ್ಲಿ ಸಹ ಶಿಕ್ಷಣ, ಒಟ್ಟಿಗೆ ವಿಹಾರಕ್ಕೆ ತೆರಳುವುದು, ಸಾಂಸ್ಕೃತಿಕ ಉತ್ಸವಗಳು, ಮೊಬೈಲ್ ಮತ್ತು ಇನ್ನಿತರ ಮೂಲಗಳು ಅದಕ್ಕೆ ಅವಕಾಶಗಳನ್ನು ಒದಗಿಸಿಕೊಡುತ್ತವೆ. ಮಗ ಅಥವಾ ಮಗಳು ಪ್ರೇಮದ ಬಂಧನದಲ್ಲಿ ಸಿಲುಕಿದರೆ ಅವರನ್ನು ಅದರಿಂದ ದೂರ ಮಾಡಲು ಬಹಳ ಕಷ್ಟ. ಮಾತ್ರವಲ್ಲ, ನಂತರ ವಿವಾಹಕ್ಕೆ ಅಡ್ಡ ನಿಂತು ಅದು ಇನ್ನಷ್ಟು ಅನಾಹುತಗಳಿಗೆ ಕಾರಣವಾಗುತ್ತದೆ. ಆದ್ದರಿಂದ ಮಕ್ಕಳು ಪ್ರೇಮ ಬಂಧನದಲ್ಲಿ ಸಿಕ್ಕಿ ಹಾಕಿಕೊಳ್ಳದಂತೆ ತಂದೆ-ತಾಯಿಗಳು ನಿರಂತರ ಪರಿಶ್ರಮ ಪಡಬೇಕಾಗಿದೆ.

ಇದು ಹೇಗೆ ಸಾಧ್ಯ? ಯಾವಾಗಲೂ ಮಕ್ಕಳ ಹಿಂದೆ ಬೀಳಲು ಸಾಧ್ಯವಿಲ್ಲ ತಾನೆ. ಆದ್ದರಿಂದ ಚಿಕ್ಕ ಪ್ರಾಯದಲ್ಲಿಯೇ ಪ್ರೇಮ ಪ್ರಕರಣಗಳ ವಂಚನೆಯ ಬಗ್ಗೆ ಪ್ರಜ್ಞಾವಂತಗೊಳಿಸಬೇಕು. ಮಕ್ಕಳೊಂದಿಗೆ ಆತ್ಮೀಯವಾಗಿ ಬೆರೆತು ಅವರನ್ನು ತಂದೆ-ತಾಯಿಗಳು ಪ್ರೀತಿಸುತ್ತಿದ್ದಾರೆಂದೂ ಅನುಭವದ ಮೂಲಕ ಖಚಿತ ಪಡಿಸಿಕೊಳ್ಳಬೇಕು. ತಂದೆ-ತಾಯಿಗಳ ಪ್ರೀತಿ-ವಾತ್ಸಲ್ಯಗಳು ಅವರಿಗೆ ಆಸ್ವದಿಸಲು ಸಾಧ್ಯವಾಗಬೇಕು. ಮನೆಯಲ್ಲಿ ಲಭಿಸುವುದಕ್ಕಿಂತ ಉನ್ನತವಾದ ಪ್ರೀತಿ-ರಕ್ಷಣೆ ಹೊರಗಿನಿಂದ ಲಭಿಸಲು ಸಾಧ್ಯವಿಲ್ಲದಷ್ಟು ಉನ್ನತವಾಗಿರಬೇಕು.

ವಿವಾಹದ ಪರಿಶುದ್ಧತೆ, ದಾಂಪತ್ಯದ ಮಹತ್ವ, ಸಂಗಾತಿಯನ್ನು ಆಯ್ಕೆ ಮಾಡಿಕೊಳ್ಳುವುದರ ಮಹತ್ವ, ಗೌರವದ ಬಗ್ಗೆ ಮಕ್ಕಳನ್ನು ಪ್ರಜ್ಞಾವಂತರಾಗಿಸಬೇಕು. ಲೋಕದಲ್ಲಿ ಯಾರಿಗೂ ತನ್ನ ಮಾತಾಪಿತರು, ಮಕ್ಕಳು, ಸಹೋದರ-ಸಹೋದರಿಯರು, ಇತರ ಹತ್ತಿರದ ರಕ್ತ ಸಂಬಂಧಿಕರನ್ನು ಆಯ್ಕೆ ಮಾಡುವ ಸ್ವಾತಂತ್ರ್ಯ ಸಿಕ್ಕಿಲ್ಲ. ಆದರೆ ಸ್ತ್ರೀಗೆ ತನ್ನ ಮಕ್ಕಳ ತಂದೆ ಯಾರಾಗಬೇಕು, ಪುರುಷನಿಗೆ ತನ್ನ ಮಕ್ಕಳ ತಾಯಿ ಯಾರಾಗಬೇಕೆಂದು ತೀರ್ಮಾನಿಸಲು ಸ್ವಾತಂತ್ರ್ಯ ಲಭಿಸಿದೆ. ಆದ್ದರಿಂದಲೇ ಇದು ಭೂಮಿಯ ಮೇಲಿರುವ ಅತ್ಯಂತ ಮಹತ್ತಾದ ಸ್ವಾತಂತ್ರ್ಯವಾಗಿದೆ. ಅದರ ಬಳಕೆ ಅತ್ಯಂತ ಪ್ರಮುಖವಾಗಿದೆ. ಅದು ಮಕ್ಕಳಾಟವಲ್ಲ. ಕಲಿತು, ಪಕ್ವವಾದ ನಂತರ ಆಲೋಚಿಸಿ, ಅನ್ವೇಷಣೆ ಮಾಡಿ ನೆರವೇರಿಸಬೇಕು. ಈ ವಿಷಯವನ್ನು ಸಣ್ಣ ಪ್ರಾಯದಲ್ಲೇ ಹೇಳಿ ಅರ್ಥ ಮಾಡಿಕೊಡಬೇಕು. ಯೌವನದಲ್ಲಿ ಉಂಟಾಗುವ ದೈಹಿಕ-ಮಾನಸಿಕ ಬದಲಾವಣೆಗಳು ಪರಸ್ಪರ ಆಕರ್ಷಿಸಲು ಪ್ರೇರೇಪಿಸುವುದು ಸ್ವಾಭಾವಿಕವಾಗಿದೆ.

ಬೆಳವಣಿಗೆಯ ಹಂತದಲ್ಲಿ ಉಂಟಾಗುವ ಇಂತಹ ವಿಷಯಗಳನ್ನು ಯೌವನದ ಆರಂಭದಲ್ಲಿಯೇ ಹೇಳಿಕೊಡಬೇಕು. ಇಂತಹ ಸಂದರ್ಭಗಳಲ್ಲಿ ಧಾರ್ಮಿಕ ನಿಯಮಗಳನ್ನು ಪಾಲಿಸುತ್ತಾ ವಿವೇಕದೊಂದಿಗೆ ವ್ಯವಹರಿಸಲು ಅವರನ್ನು ಪ್ರಜ್ಞಾವಂತಗೊಳಿಸಬೇಕು. ಆರನೇ ತರಗತಿ, ಏಳನೇ ತರಗತಿಗಳಲ್ಲಿ ಪ್ರೇಮ ಪ್ರಕರಣಗಳು ಸಂಭವಿಸುವ ಈ ಕಾಲದಲ್ಲಿ ಮಕ್ಕಳನ್ನು ಪ್ರಜ್ಞಾವಂತ ಗೊಳಿಸದಿರುವುದು ಅತಿ ದೊಡ್ಡ ಅನಾಹುತಗಳಿಗೂ, ನಷ್ಟಕ್ಕೂ ಪಶ್ಚಾತ್ತಾಪಕ್ಕೂ ಎಡೆ ಮಾಡಿ ಕೊಡಬಹುದು.

ಪ್ರೇಮ ಸಂಬಂಧಗಳು ಕುಟುಂಬದಲ್ಲಿ ಉಂಟು ಮಾಡುವ ಸಮಸ್ಯೆಗಳ ಬಗ್ಗೆ ಮಕ್ಕಳೊಂದಿಗೆ ಮಾತನಾಡಬೇಕು. ಹೀಗೆ ಅನೇಕ ಮಾರ್ಗಗಳ ಮೂಲಕ ಮಕ್ಕಳು ಪ್ರೇಮ ಪ್ರಕರಣಗಳಲ್ಲಿ ಬೀಳದಿರಲು ತಂದೆ-ತಾಯಿಗಳು ಗಮನಿಸಬೇಕು. ಅದರೊಂದಿಗೆ ಅವರಿಗಾಗಿ ಅಲ್ಲಾಹನೊಂದಿಗೆ ನಿರಂತರ ಪ್ರಾರ್ಥಿಸುತ್ತಿರಬೇಕು. ಮಕ್ಕಳು ಪ್ರೇಮ ಪ್ರಕರಣಗಳಲ್ಲಿ ಸಿಲುಕಿಕೊಂಡಾಗ ಉಂಟಾಗುವ ಅನಾಹುತಗಳ ಬಗ್ಗೆ ಇಂದು ಯಾರೂ ಯಾರಿಗೂ ಹೇಳಿ ಕೊಡಬೇಕಾದ ಅಗತ್ಯವಿಲ್ಲ.

❖❖❖❖

ಶಿಕ್ಷಣ ತರಬೇತಿಯಲ್ಲಿ ಪ್ರವಾದಿ(ಸ) ಮಾದರಿ

ಸಾಮಾಜಿಕ ಸಂಸ್ಕರಣೆಯಲ್ಲಿ ಎಲ್ಲ ಕಾಲ ಮತ್ತು ಎಲ್ಲ ಕಡೆಗಳಿಗೆ ಅತ್ಯುತ್ತಮ ಮಾದರಿ ಪ್ರವಾದಿ ಮುಹಮ್ಮದ್(ಸ)ರದ್ದಾಗಿದೆ. ಮಾನವ ಮನಸ್ಸುಗಳನ್ನು ಬದಲಾಯಿಸಲು ಅತ್ಯಂತ ಯುಕ್ತಿಪೂರ್ಣ ಹಾಗೂ ಫಲಪ್ರದ ಮಾರ್ಗಗಳನ್ನು ಅವರು ಸ್ವೀಕರಿಸಿದ್ದರು. ಪ್ರೀತಿ ಮತ್ತು ಅತ್ಯಂತ ಮೃದು ಸ್ವಭಾವದೊಂದಿಗೆ ಜನರನ್ನು ಸಮೀಪಿಸುತ್ತಿದ್ದರು. ಮಕ್ಕಳನ್ನು ಬೆಳೆಸುವಾಗ ಅತ್ಯಧಿಕ ಅನುಕರಿಸಲು ಯೋಗ್ಯ ಮಾರ್ಗ ಕೂಡಾ ಆಗಿದೆ.

ಒಂದು ದಿನ ಒಬ್ಬ ವ್ಯಕ್ತಿ ಬಂದು ಪ್ರವಾದಿಯವರಲ್ಲಿ(ಸ) ಕೇಳಿದ: ''ಅಲ್ಲಾಹನ ಸಂದೇಶವಾಹಕರೇ, ತಾವು ನನಗೆ ವ್ಯಭಿಚಾರಕ್ಕೆ ಅನುಮತಿ ಕೊಡಬಲ್ಲಿರಾ?'' ಇದನ್ನು ಕೇಳಿ ಜನರು ಬೊಬ್ಬೆ ಹಾಕಿದರು. ಆಗ ಪ್ರವಾದಿಯವರು(ಸ) ಹೇಳಿದರು: ''ಆತನನ್ನು ನನ್ನ ಬಳಿ ಕರೆದುಕೊಂಡು ಬನ್ನಿ.'' ಆತ ಪ್ರವಾದಿಯವರ(ಸ) ಮುಂದೆ ಬಂದು ಕುಳಿತನು. ಪ್ರವಾದಿಯವರು(ಸ) ಕೇಳಿದರು, ''ಯಾರಾದರೂ ನಿನ್ನ ತಾಯಿಯನ್ನು ವ್ಯಭಿಚರಿಸುವುದನ್ನು ನೀನಿಷ್ಟಪಡುತ್ತೀಯಾ?'' ಅವನು ಹೇಳಿದ: ''ಖಂಡಿತ ಇಲ್ಲ,'' ಪ್ರವಾದಿಯವರು(ಸ) ಕೇಳಿದರು: ''ಮನುಷ್ಯ ಹಾಗೆಯೇ. ಸ್ವಂತ ತಾಯಿಯನ್ನು ವ್ಯಭಿಚಾರ ಮಾಡಲು ಇಷ್ಟಪಡಲಾರನು.'' ತರುವಾಯ ಕೇಳಿದರು: ''ನಿನ್ನ ಮಗಳನ್ನು?'' ''ಇಲ್ಲ'' ನಾನು ಅದಕ್ಕೆ ಅನುಮತಿಸಲಾರೆ. ಅವನು ಉತ್ತರಿಸಿದ. ''ಜನರು ಹಾಗೆಯೇ. ಮಕ್ಕಳೊಂದಿಗೆ ಯಾರಾದರೂ ವ್ಯಭಿಚಾರ ಮಾಡುವುದನ್ನು ಯಾರೂ ಇಷ್ಟಪಡಲಾರರು.'' ನಂತರ ಕೇಳಿದರು: ''ನಿನ್ನ ಸಹೋದರಿಯನ್ನಾದರೆ?'' ''ಇಲ್ಲ'' ನಾನು ಅದಕ್ಕೂ ಅನುಮತಿಸಲಾರೆ. ''ಮನುಷ್ಯರಲ್ಲಿ ಯಾರೂ ತನ್ನ ಸಹೋದರಿಯೊಂದಿಗೆ ವ್ಯಭಿಚಾರ ಮಾಡುವುದನ್ನು ಇಷ್ಟಪಡಲಾರರು.'' ತರುವಾಯ ಪ್ರವಾದಿ(ಸ) ಮಾತೃ ಸಹೋದರಿ-ಪಿತೃ ಸಹೋದರಿಯ ಬಗ್ಗೆ ಪ್ರಶ್ನೆಗಳನ್ನು ಕೇಳ ತೊಡಗಿದರು. ಆವನು ಎಲ್ಲದಕ್ಕೂ ತನ್ನ ಅತೀವ ತಿರಸ್ಕಾರವನ್ನು ಪ್ರಕಟಪಡಿಸಿದನು. ಆಗ ಪ್ರವಾದಿ(ಸ) ತನ್ನ ಕೈಯನ್ನು ಆತನ ಎದೆಯ ಮೇಲಿಟ್ಟು ಹೀಗೆ ಪ್ರಾರ್ಥಿಸಿದರು: 'ಅಲ್ಲಾಹನೇ- ಇವನ ಮನಸ್ಸನ್ನು ನೀನು ಶುದ್ಧೀಕರಿಸು ಪಾಪಗಳನ್ನು ಮನ್ನಿಸಿ ಸದಾ ಸದಾಚಾರ ಪಾಲಿಸಲು ಅನುಗ್ರಹಿಸು.' ಅದರೊಂದಿಗೆ ಆ ವ್ಯಕ್ತಿಗೆ ಜೀವನದಲ್ಲಿ ಅತ್ಯಂತ ಅಸಹ್ಯವಾದ ಕಾರ್ಯ ವ್ಯಭಿಚಾರವಾಯಿತು.'' ಇನ್ನೊಂದು ಸಲ ಒಬ್ಬ ಹಳ್ಳಿಗ ಮಸೀದಿಗೆ ಬಂದ ಮತ್ತು ಮಸೀದಿಯ ಅಂಗಳಲದಲ್ಲಿ ಕುಳಿತು ಮೂತ್ರ ಮಾಡ ತೊಡಗಿದ. ಸಹಾಬಿಗಳು ಅವನನ್ನು ತಡೆಯಲು

ಮತ್ತು ಹಿಡಿಯಲು ಧಾವಿಸಿದರು. ಆದರೆ ಪ್ರವಾದಿ(ಸ) ಹೇಳಿದರು- ''ಅವನು ಮೂತ್ರ ಮಾಡಲಿ ಮತ್ತು ಆ ಮೂತ್ರದ ಮೇಲೆ ಒಂದು ಕೊಡ ನೀರು ಹಾಯಿಸಿ ಬಿಡಿರಿ. ಏಕೆಂದರೆ ನೀವು ಸೌಲಭ್ಯ ಉಂಟು ಮಾಡುವವರಾಗಿ ಕಳುಹಿಸಿಲ್ಪಟ್ಟಿರುತ್ತೀರಿ. ಕಠಿಣತೆ ತೋರುವವರಾಗಿ ಕಳುಹಿಸಲ್ಪಟ್ಟಿಲ್ಲ.'' (ಬುಖಾರಿ)

ಇದೇ ನಿಲುವು ಮಕ್ಕಳೊಂದಿಗೆ ಸ್ವೀಕರಿಸಬೇಕು. ಅವರ ಮುಂದೆ ಕೂಡದು, ಮಾಡಬಾರದು ಎಂಬ ಪಟ್ಟಿಯನ್ನು ಸಮರ್ಪಿಸಬಾರದು. ದಂಡಿಸಿ, ಬೈದು ಮಕ್ಕಳನ್ನು ಉತ್ತಮರನ್ನಾಗಿ ಬೆಳೆಸಬಹುದೆಂದು ಭಾವಿಸುವುದು ಸಂಪೂರ್ಣ ಹೆಡ್ಡತನವಾಗಿದೆ. ಅಪರಾಧಗಳ ಬಗ್ಗೆ (ಕೆಡುಕುಗಳ) ಅತ್ಯಂತ ಗಾಂಭೀರ್ಯತೆ ಮತ್ತು ಅಪಾಯಗಳನ್ನು ಉದಾಹರಣೆಗಳು ಮತ್ತು ಕಥೆಗಳ ಮೂಲಕ ಹಾಗೂ ಇಸ್ಲಾಮೀ ಚಾರಿತ್ರಿಕ ಘಟನೆಗಳ ಮೂಲಕ ವಿವರಿಸಿ ಕೊಡಬೇಕು. ಈ ರೀತಿಯಾಗಿ ಅವರಲ್ಲಿ ಬದಲಾವಣೆ ತರಲು ಪ್ರಯತ್ನಿಸಬೇಕು. ಒಬ್ಬ ವ್ಯಕ್ತಿ ಬಂದು ಪ್ರವಾದಿಯವರಲ್ಲಿ(ಸ) ಹೇಳಿದನು: ''ನನಗೆ ಇಸ್ಲಾಮ್ ಸ್ವೀಕರಿಸಬೇಕೆಂಬ ಅತಿಯಾದ ಆಸೆ ಇದೆ. ಆದರೆ ನನ್ನಲ್ಲಿ ಒಂದು ದೌರ್ಬಲ್ಯವಿದೆ. ಸನ್ಮಾರ್ಗ ಸ್ವೀಕರಿಸಿದರೂ ಅದನ್ನು ತೊರೆಯಲು ನನಗೆ ಸಾಧ್ಯವಾಗದು. ''ಏನದು? ಪ್ರವಾದಿಯವರು(ಸ) ಪ್ರಶ್ನಿಸಿದರು. 'ನನ್ನಂತಹ ದೈಹಿಕ ಸಾಮರ್ಥ್ಯ ಇರುವ ಯಾರನ್ನೂ ನಾನು ಕಂಡಿಲ್ಲ, ನನ್ನ ಶಕ್ತಿ ಅಪಾರವಾದುದು. ಆಗಂತುಕ ತಿಳಿಸಿದ' ಅದಕ್ಕೇನಂತೆ? ಅದು ಅಲ್ಲಾಹನ ಅನುಗ್ರಹ ತಾನೆ? ದೈಹಿಕ ಶಕ್ತಿ ಇರಬೇಕಾದುದು ಉತ್ತಮವೇ? 'ಅಲ್ಲಾಹನ ಸಂದೇಶವಾಹಕರೇ, ನನಗೆ ಅದನ್ನು ನಿಯಂತ್ರಿಸಲು ಸಾಧ್ಯವಾಗುವುದಿಲ್ಲ, ಆದ್ದರಿಂದ ಆಡುಗಳನ್ನು ಕದ್ದುಕೊಂಡು ಬರುವುದು ನನ್ನ ರೂಢಿ. ಇದನ್ನು ತೊರೆಯಲು ಸಾಧ್ಯವಾಗಬಹುದೆಂದು ನಾನು ಭಾವಿಸುವುದಿಲ್ಲ, ಅವನು ಹೇಳಿದ.''

''ಅದಕ್ಕೆ ಹೆದರಬೇಕಾಗಿಲ್ಲ, ಪರಿಹಾರ ನಾನು ಹೇಳಿಕೊಡುತ್ತೇನೆ. ನಮ್ಮ ಬಹಳಷ್ಟು ಸತ್ಯವಿಶ್ವಾಸಿ ಸಹೋದರರನ್ನು ಶತ್ರುಗಳು ಬಂಧನದಲ್ಲಿರಿಸಿದ್ದಾರೆ. ಅವರನ್ನು ಬಿಡುಗಡೆಗೊಳಿಸಿ ಹೊತ್ತುಕೊಂಡು ಬನ್ನಿ. ಅದರ ಮೂಲಕ ನಿಮಗೆ ಶಾರೀರಿಕ ಶಕ್ತಿ ಗಳಿಸಬಹುದು. ಪರಲೋಕದಲ್ಲಿ ಅಲ್ಲಾಹನ ಮಹತ್ತಾದ ಪ್ರತಿಫಲವನ್ನು ಗಳಿಸಬಹುದು. ಅದು ಇಸ್ಲಾಮಿಗಾಗಿ ಮಾಡುವ ಸೇವೆಯಾಗಬಹುದು.'' ತನ್ನನ್ನು ಕಾಡುತ್ತಿದ್ದ ಸಮಸ್ಯೆಗೆ ಪ್ರವಾದಿ(ಸ) ನಿರ್ದೇಶಿಸಿದ, ಪ್ರಾಯೋಗಿಕ ಪರಿಹಾರ ಲಭಿಸಿದಾಗ ಅವನು ಇಸ್ಲಾಮ್ ಸ್ವೀಕರಿಸಿದ.

ಕೆಲವು ಮಕ್ಕಳು ಕೆಲವೊಮ್ಮೆ ದುಷ್ಕೃತ್ಯಗಳಲ್ಲಿ ಏರ್ಪಡುತ್ತಾರೆ. ಕೆಡುಕುಗಳಲ್ಲಿ ಭಾಗಿಯಾಗುತ್ತಾರೆ. ಮಾಡಬಾರದ ಕಾರ್ಯಗಳನ್ನು ತಡೆಯುವುದಕ್ಕಿಂತ, ಅದಕ್ಕಿಂತಲೂ ಆಕರ್ಷಕವಾದ ಕಾರ್ಯಗಳ ಕಡೆಗೆ ಗಮನ ಸೆಳೆಯಬೇಕು. ಪ್ರವಾದಿಯವರು(ಸ) ಮಾಡಿದಂತೆ ಕೆಡುಕುಗಳಿಗೆ ಬದಲಾಗಿ ಸತ್ಕರ್ಮಗಳನ್ನು ಮಾಡಲು ಅದರಲ್ಲಿ ಕುತೂಹಲ ಮೂಡುವಂತೆ ಮಾಡುವುದು ಹೆಚ್ಚು ಪ್ರಯೋಜನಕಾರಿ. ನಿಷೇಧಾತ್ಮಕ ಕಾರ್ಯಗಳನ್ನು ಉಲ್ಲಂಘಿಸಿ ಮಕ್ಕಳನ್ನು ಬದಲಾಯಿಸಲು ಬಳಸಬೇಕಾದ ಅತ್ಯುತ್ತಮ ವಿಧಾನ ಪ್ರವಾದಿಯವರು(ಸ) ನಿರ್ದೇಶಿಸಿದ

ಆಕರ್ಷಕ ಬದಲಿ ವ್ಯವಸ್ಥೆಗಳಾಗಿವೆ.

''ಏನಾದರೂ ಕೊಡಿ.'' ಎಂದು ಅನ್ಸಾರ್‌ಗಳಲ್ಲಿ ಒಬ್ಬರು ಬಂದು ಪ್ರವಾದಿಯವರ(ಸ) ಬಳಿ ಕೇಳಿದರು. ''ನಿಮ್ಮ ಮನೆಯಲ್ಲಿ ಏನೂ ಇಲ್ಲವೇ?'' ಎಂದು ಪ್ರವಾದಿ(ಸ) ಕೇಳಿದರು: ''ನಾವು ಧರಿಸುವ ಮತ್ತು ಹಾಸಲು ಬಳಸುವ ಒಂದು ಕಂಬಳಿ, ನೀರು ಕುಡಿಯಲು ಉಪಯೋಗಿಸುವ ಒಂದು ಪಾತ್ರೆ ಮಾತ್ರ ಇದೆ.'' ಪ್ರವಾದಿ(ಸ) ಅದನ್ನು ತರಲು ಆಜ್ಞಾಪಿಸಿದರು. ''ಆ ವ್ಯಕ್ತಿ ಅದನ್ನು ತಂದರು.'' ಅವೆರಡನ್ನು ಕೈಯಲ್ಲಿ ಹಿಡಿದು ಪ್ರವಾದಿ(ಸ) ಕೇಳಿದರು: ''ಇದನ್ನು ನಿಮ್ಮಲ್ಲಿ ಯಾರು ಖರೀದಿಸುತ್ತೀರಿ?'' ಒಬ್ಬರು ಹೇಳಿದರು: ಎರಡು ದಿರ್ಹಮ್‌ಗೆ ನಾನು ಅದನ್ನು ಖರೀಧಿಸುತ್ತೇನೆ. ಪ್ರವಾದಿ(ಸ) 2 ದಿರ್ಹಮ್‌ಗೆ ಅದನ್ನು ಆ ವ್ಯಕ್ತಿಗೆ ಮಾರಿದರು. ಆ 2 ದಿರ್ಹಮನ್ನು ಅನ್ಸಾರಿಗೆ ನೀಡುತ್ತಾ ಪ್ರವಾದಿಯವರು(ಸ) ಹೇಳಿದರು: ''ಒಂದು ದಿರ್ಹಮ್‌ನಿಂದ ಆಹಾರವನ್ನು ಖರೀದಿಸಿ ಕುಟುಂಬದವರಿಗೆ ನೀಡಿ. ಉಳಿದದ್ದರಿಂದ ಒಂದು ಕೊಡಲಿ ಖರೀದಿಸಿ ನನ್ನ ಬಳಿಗೆ ಬನ್ನಿ.'' ಆ ವ್ಯಕ್ತಿ ಕೊಡಲಿಯೊಂದಿಗೆ ಬಂದನು. ಪ್ರವಾದಿ(ಸ) ಅದನ್ನು ತಮ್ಮ ಸ್ವಂತ ಕೈಯಿಂದ ಹರಿತಗೊಳಿಸಿದ ನಂತರ ಹಿಡಿ ಹಾರೆ ಅವನೊಂದಿಗೆ ಹೇಳಿದರು: ''ನೀವು ಇದನ್ನು ಬಳಸಿ ಕಟ್ಟಿಗೆ ಕಡಿದು ಅಂಗಡಿಗೆ ಮಾರಬೇಕು. 15 ದಿನದ ವರೆಗೆ ನಾನು ನಿಮ್ಮನ್ನು ಕಾಣಬಾರದು.'' ಆ ವ್ಯಕ್ತಿ ಪ್ರವಾದಿಯವರ(ಸ) ನಿರ್ದೇಶ ಪ್ರಕಾರ ಮಾಡಿದರು. ಆ ಮೂಲಕ ಅವರಿಗೆ 10 ದಿರ್ಹಮ್ ಲಾಭ ಗಳಿಸಲು ಸಾಧ್ಯವಾಯಿತು. ಅದನ್ನು ಹಿಡಿದುಕೊಂಡು ಆ ವ್ಯಕ್ತಿ ಪ್ರವಾದಿಯವರ(ಸ) ಸನ್ನಿಧಿಗೆ ಬಂದಾಗ, ಪ್ರವಾದಿ(ಸ) ಹೇಳಿದರು: ''ಅದರಿಂದ ಆಹಾರ ಮತ್ತು ವಸ್ತ್ರವನ್ನು ಖರೀದಿಸಿ.'' ತರುವಾಯ ಹೇಳಿದರು: ''ಇದು ಬೇಡುವುದಕ್ಕಿಂತ ಲೇಸು. ಯಾಚಿಸುವುದರಿಂದ ಅಂತಿಮ ದಿನದಂದು ನಿನ್ನ ಮುಖದಲ್ಲಿ ಕಲೆಗಳಿರುವುದು.''

ಮಕ್ಕಳನ್ನು ಅನಗತ್ಯ ಕೃತ್ಯಗಳಿಂದ ತಡೆಯಲು, ಅವರಲ್ಲಿ ಪರಿಶ್ರಮ ಪಡುವ ಅಭ್ಯಾಸ ಬೆಳೆಸಲು ಪ್ರವಾದಿ(ಸ) ಸ್ವೀಕರಿಸಿದ ನಿಲುವು ಹೆಚ್ಚು ಪರಿಣಾಮಕಾರಿಯಾಗುತ್ತದೆ.

ಪ್ರವಾದಿಯವರು(ಸ) ಮಕ್ಕಳೊಂದಿಗೆ ಯಾವಾಗಲೂ ವಾತ್ಸಲ್ಯದೊಂದಿಗೂ, ಪ್ರೀತಿಯಿಂದಲೂ, ಕರುಣೆಯೊಂದಿಗೂ ವ್ಯವಹರಿಸುತ್ತಿದ್ದರು. ಅವರಲ್ಲಿ ಕಂಡು ಬಂದ ಕೊರತೆಗಳನ್ನು, ದೌರ್ಬಲ್ಯಗಳನ್ನು ಪ್ರೀತಿಪೂರ್ವಕವಾದ ಉಪದೇಶಗಳ ಮೂಲಕ ನೀಗಿಸುತ್ತಿದ್ದರು.

ಉಮರ್ ಬಿನ್ ಅಬೀ ಸಲಮ ವರದಿ ಮಾಡುತ್ತಾರೆ: ''ನಾನು ಪ್ರವಾದಿಯವರ(ಸ) ಸಂರಕ್ಷಣೆಯಲ್ಲಿದ್ದೆ, ಆಹಾರ ತಿನ್ನುವ ಪಾತ್ರೆಯಲ್ಲಿ ನಾನು ಕೈಯಾಡಿಸುತ್ತಿದ್ದೆ'' ಆಗ ಪ್ರವಾದಿ(ಸ) ಹೇಳಿದರು: ''ಮಗನೇ, ನೀನು ಅಲ್ಲಾಹನ ನಾಮದಿಂದ ಬಲ ಕೈಯಿಂದ ಸೇವಿಸು. ನಿನ್ನ ಹತ್ತಿರ ವಿರುವುದನ್ನು ಸೇವಿಸು.'' (ಬುಖಾರಿ, ಮುಸ್ಲಿಮ್)

ಸಣ್ಣ ಮಕ್ಕಳೊಂದಿಗೂ ಪ್ರವಾದಿ(ಸ) ಅತ್ಯಂತ ವಾತ್ಸಲ್ಯಭರಿತವಾಗಿ ವ್ಯವಹರಿಸುತ್ತಿದ್ದರು. ಅವರ ಹಕ್ಕುಗಳನ್ನು ಯಾವುದೇ ಅಳುಕಿಲ್ಲದೆ ಅಂಗೀಕರಿಸುತ್ತಿದ್ದರು.

ಒಮ್ಮೆ ಪ್ರವಾದಿಯವರಿಗೆ(ಸ) ಕುಡಿಯಲು ಪಾನೀಯ ಸಿಕ್ಕಿತು. ಪ್ರವಾದಿ(ಸ)

ಅದರಿಂದ ಕುಡಿದರು. ಅವರ ಬಲ ಭಾಗದಲ್ಲಿ ಒಂದು ಮಗು, ಎಡ ಭಾಗದಲ್ಲಿ ಓರ್ವ ಪ್ರಾಯಸ್ಥರು ಇದ್ದರು. ಪ್ರವಾದಿ(ಸ) ಆ ಮಗುವಿನೊಂದಿಗೆ ಕೇಳಿದರು, ''ಇದನ್ನು ಇವರಿಗೆ ನೀಡಲು ನೀನು ಅನುಮತಿಸುವೆಯಾ?'' ಆಗ ಮಗು ಹೇಳಿತು: ''ಅಲ್ಲಾಹನಾಣೆ, ಇಲ್ಲ! ನಾನು ನನ್ನ ಪಾಲಿನಿಂದ ತಮಗಲ್ಲದೆ ಬೇರೆ ಯಾರಿಗೂ ನೀಡುವುದಿಲ್ಲ.'' ಆಗ ಪ್ರವಾದಿ(ಸ) ಪಾನೀಯವನ್ನು ಆ ಮಗುವಿನ ಕೈಯಲ್ಲಿಕೊಟ್ಟರು. ಆ ಮಗು ಅಬ್ದುಲ್ಲಾ ಬಿನ್ ಅಬ್ಬಾಸ್(ರ) ಆಗಿದ್ದರು. (ಮುತ್ತಫಕುನ್ ಅಲೈಹಿ)

ಇಲ್ಲಿ ಪ್ರವಾದಿ(ಸ) ಆ ಮಗುವಿನೊಂದಿಗೆ ತೋರಿಸಿದ ಕರುಣೆ ಮತ್ತು ಪರಿಗಣನೆ ಅತ್ಯಂತ ಗಮನಾರ್ಹವಾಗಿದೆ. ಪ್ರವಾದಿಯವರ(ಸ) ಧೋರಣೆ ಇಷ್ಟೊಂದು ಉದಾರವಾಗಿರುವಾಗ ತಂದೆ-ತಾಯಿಗಳು ಮಕ್ಕಳೊಂದಿಗೆ ಸ್ವೀಕರಿಸಬೇಕಾದ ನಿಲುವು ಹೇಗಿರಬೇಕೆಂದು ಸರ್ವವಿಧಿತ ಮಕ್ಕಳಲ್ಲಿ ಕಂಡು ಬರುವ ಕೆಡುಕುಗಳನ್ನೂ, ದೌರ್ಬಲ್ಯಗಳನ್ನೂ ಈ ರೀತಿಯಲ್ಲಿ ಅವರ ವ್ಯಕ್ತಿತ್ವವನ್ನು ಅಂಗೀಕರಿಸಿ, ಪರಿಗಣಿಸಿ ತಿದ್ದಬೇಕಾಗಿದೆ.

❖❖❖❖

ಸದ್ಗುಣಗಳನ್ನು ಬೆಳೆಸಿ

ಒಂದು ಇಸ್ಲಾಮೀ ನ್ಯಾಯಾಲಯದಲ್ಲಿ ಒಬ್ಬ ಕಳ್ಳನಿಗೆ ಶಿಕ್ಷೆ ವಿಧಿಸಲಾಗುತ್ತದೆ. ಅದನ್ನು ಜಾರಿಗೊಳಿಸುವ ಸಮಯವಾದಾಗ ಆ ಕಳ್ಳ ಜೋರಾಗಿ ಹೇಳಿದ: ''ನನ್ನನ್ನು ಶಿಕ್ಷಿಸುವ ಮೊದಲು ನನ್ನ ತಾಯಿಯ ನಾಲಗೆಯನ್ನು ಕತ್ತರಿಸಬೇಕು. ನಾನು ಜೀವನದಲ್ಲಿ ಮೊದಲು ಕದ್ದ ವಸ್ತು ನೆರೆಕರೆಯವರ ಮೊಟ್ಟೆಯಾಗಿತ್ತು. ನನ್ನ ತಾಯಿ ನನ್ನನ್ನು ಅದರಿಂದ ತಡೆಯಲಿಲ್ಲ, ಮಾತ್ರವಲ್ಲ, ಕಳ್ಳತನ ಮಾಡಿದ್ದಕ್ಕೆ ನನ್ನನ್ನು ಪ್ರೋತ್ಸಾಹಿಸಿ ಅಭಿನಂದಿಸಿದರು. ಅಂದು ಅಮ್ಮ ನನ್ನನ್ನು ಆ ಕೆಟ್ಟ ಕೃತ್ಯದಿಂದ ತಡೆದಿರುತ್ತಿದ್ದರೆ ನಾನು ಕಳ್ಳನಾಗುತ್ತಿರಲಿಲ್ಲ.'' (ಅಖ್ಲಾಕುನಾ, ಅಲ್ ಇಜ್ತಿಮಾಇಯ್ಯ, ಮುಸ್ತಫಸ್ಸಬಾಈ- 162)

ತಂದೆ-ತಾಯಿಗಳು ಮಕ್ಕಳ ಕೆಡುಕನ್ನು ತಡೆಯದೆ ಅದರ ಮುಂದೆ ಕಣ್ಣು ಮುಚ್ಚಿದರೆ ಅದು ದೊಡ್ಡ ವಿಪತ್ತಿಗೆ ಎಡೆ ಮಾಡಿಕೊಡುತ್ತದೆ. ತಪ್ಪುಗಳನ್ನು ಪ್ರೋತ್ಸಾಹಿಸುವುದರ ದುಷ್ಪರಿಣಾಮವನ್ನು ವಿವರಿಸಬೇಕಾದ ಅಗತ್ಯವಿಲ್ಲ, ಆದ್ದರಿಂದಲೇ ಒಬ್ಬ ಕವಿ ಕೇಳಿದ: ''ಕೆಡುಕುಗಳು ತುಂಬಿದ ಮಾತೆಯರ ಹಾಲು ಕುಡಿದು ಬೆಳೆಯುವ ಮಕ್ಕಳಲ್ಲಿ ಪರಿಪೂರ್ಣತೆಯನ್ನು ನಿರೀಕ್ಷಿಸುವುದಾದರೂ ಹೇಗೆ?''

''ಒಬ್ಬ ತಂದೆ ತನ್ನ ಮಕ್ಕಳಿಗೆ ನೀಡುವ ಶಿಕ್ಷಣ-ತರಬೇತಿಗಿಂತ ಉತ್ತಮ ಉಡುಗೊರೆ ಬೇರೊಂದಿಲ್ಲ'' ಎಂದು ಪ್ರವಾದಿಯವರು(ಸ) ಹೇಳಲು ಕಾರಣ ಬೇರೇನೂ ಅಲ್ಲ.

(ತಿರ್ಮಿದಿ)

ಪ್ರವಾದಿಯವರು(ಸ) ಹೇಳಿದರು: ''ನಿಮ್ಮ ಮಕ್ಕಳ ಜೊತೆ ಬಹಳ ವಾತ್ಸಲ್ಯದಿಂದ ವರ್ತಿಸಿರಿ ಮತ್ತು ಅವರಿಗೆ ಅತ್ಯುತ್ತಮ ತರಬೇತಿ ನೀಡಿರಿ.''

ಸುಳ್ಳು ಹೇಳುವುದು ಹೆಚ್ಚಿನವರ ಪ್ರಕೃತಿಯ ಭಾಗವಾಗಿದೆ. ಪ್ರವಾದಿ(ಸ) ಅದನ್ನು ಕಾಪಟ್ಯದ ಸಂಕೇತವೆಂದು ಹೇಳಿದ್ದಾರೆ. ಆದ್ದರಿಂದ ಮಕ್ಕಳಿಗೆ ಸುಳ್ಳು ಹೇಳಲು ಅನುಮತಿಸಬಾರದು. ಅವರೊಂದಿಗೆ ಸುಳ್ಳು ಹೇಳುವುದಾಗಲೀ ಸುಳ್ಳು ಹೇಳಲು ಪ್ರೇರೇಪಿಸುವುದಾಗಲೀ ಕೂಡದು. ಸುಳ್ಳು ಅಪಾಯಕಾರಿಯಾಗಿದೆ. ಪ್ರವಾದಿಯವರು(ಸ) ಹೇಳಿದರು: ''ಸತ್ಯಸಂಧತೆಯು ಒಳಿತಿನ ಮಾನದಂಡವನ್ನು ತೋರಿಸುತ್ತದೆ ಮತ್ತು ಒಳಿತು ಸ್ವರ್ಗಕ್ಕೆ ತಲುಪಿಸುತ್ತದೆ. ಮನುಷ್ಯ ಸತ್ಯ ಹೇಳುತ್ತಾ ಕೊನೆಗೆ ಸತ್ಯಸಂಧನಾಗುತ್ತಾನೆ. ಸುಳ್ಳು ಪಾಪದ ಕಡೆಗೊಯ್ಯುತ್ತದೆ. ಪಾಪವು ನರಕದ

ಕಡೆಗೊಯ್ಯುತ್ತದೆ. ಮನುಷ್ಯ ಸುಳ್ಳು ಹೇಳುತ್ತಾ ಇರುತ್ತಾನೆ. ಕೊನೆಗೆ ಅವನ ಹೆಸರನ್ನು ದೇವನ ಬಳಿ ಸುಳ್ಳುಗಾರನೆಂದು ಬರೆಯಲಾಗುತ್ತದೆ.''

ಈ ರೀತಿ ಸ್ವಂತ ಮಕ್ಕಳೊಂದಿಗೂ ಸುಳ್ಳು ಹೇಳಬಾರದು. ಮಾತು ಉಲ್ಲಂಘಿಸಬಾರದು. ಅಬ್ದುಲ್ಲಾ ಬಿನ್ ಆಮಿರ್ ಹೇಳುತ್ತಾರೆ: ''ಒಂದು ದಿವಸ ನನ್ನ ತಾಯಿ ನನ್ನನ್ನು ಕರೆದರು. ಆಗ ಪ್ರವಾದಿ(ಸ) ನಮ್ಮ ಮನೆಯಲ್ಲಿದ್ದರು. ನನ್ನ ತಾಯಿ ನನ್ನೊಡನೆ ಇಲ್ಲಿ ಬಾ. ನಾನು ನಿನಗೊಂದು ವಸ್ತು ಕೊಡುತ್ತೇನೆ'' ಎಂದರು. ಪ್ರವಾದಿ(ಸ) ತಾಯಿಯೊಡನೆ ಕೇಳಿದರು– ''ಅವನಿಗೆ ನೀವು ಏನು ಕೊಡಬಯಸಿರುವಿರಿ.'' ಅವರು ಹೇಳಿದರು– ''ಒಂದು ಖರ್ಜೂರ ಕೊಡ ಬಯಸಿದ್ದೇನೆ.'' ಆಗ ಪ್ರವಾದಿ(ಸ) ಹೇಳಿದರು– ''ನೆನಪಿರಲಿ. ನೀವು ಅವನಿಗೆ ಏನೂ ಕೊಡದಿರುತ್ತಿದ್ದರೆ ನಿಮ್ಮ ಕರ್ಮಪತ್ರದಲ್ಲಿ ಒಂದು ಸುಳ್ಳು ಬರೆಯಲ್ಪಡುತ್ತಿತ್ತು.''

(ಅಬೂದಾವೂದ್, ಬೈಹಕಿ)

ಪ್ರವಾದಿ(ಸ) ಹೇಳಿದರು: ''ಯಾರಾದರೂ ತನ್ನ ಮಗುವಿನೊಂದಿಗೆ ಇದನ್ನು ಪಡೆ ಎಂದು ಹೇಳಿದ ಬಳಿಕ ಏನೂ ಕೊಡದಿದ್ದರೆ ಅದುವೇ ಸುಳ್ಳಾಗಿರುತ್ತದೆ.''

ಆದ್ದರಿಂದ ಮಕ್ಕಳೊಂದಿಗೆ ಮಾಡಿದ ವಾಗ್ದಾನವನ್ನು ಪೂರೈಸಲು ತಂದೆ–ತಾಯಂದಿರು ಬಾಧ್ಯಸ್ಥರಾಗಿದ್ದಾರೆ. ಪರೀಕ್ಷೆಯಲ್ಲಿ ಉತ್ತಮ ಅಂಕ ಪಡೆದರೆ ಉಡುಗೊರೆ ಕೊಡುವೆನೆಂದು ಹೇಳಿದ್ದರೆ ಅದನ್ನು ನೀಡಬೇಕು. ಯಾವ ಕಾರಣಕ್ಕೂ ವಾಗ್ದಾನ ಮುರಿಯಬಾರದು.

ಸ್ವಂತ ಮಕ್ಕಳು ಸಚ್ಚಾರಿತ್ರ್ಯವಂತಾಗಬೇಕೆಂದು ಬಯಸದ ತಂದೆ–ತಾಯಿಗಳು ಇರಲಾರರು. ಮದ್ಯಪಾನಿಯಾದ ತಂದೆ ಕೂಡಾ ತನ್ನ ಮಗ ಕುಡುಕನಾಗಬೇಕೆಂದು ಬಯಸುವುದಿಲ್ಲ, ಕಳ್ಳನು ತನ್ನ ಮಗ ಕಳ್ಳನಾಗಬಾರದೆಂದು ಆಶಿಸುತ್ತಾನೆ. ಸುಳ್ಳು ಹೇಳುವ ತಂದೆ–ತಾಯಿಗಳು ಕೂಡಾ ತಮ್ಮ ಮಕ್ಕಳು ಸತ್ಯವನ್ನೇ ಹೇಳಬೇಕೆಂದು ಆಶಿಸುತ್ತಾರೆ. ಸಚ್ಚರಿತರಾದ ಮಕ್ಕಳ ತಂದೆ–ತಾಯಿಗಳಾಗುವುದೆಂದರೆ ಮಹಾ ಸೌಭಾಗ್ಯವಾಗಿದೆ. ಎಲ್ಲರೂ ಅದನ್ನು ಬಯಸುತ್ತಾರೆ.

ಇದು ಹೇಗೆ ಸಾಧ್ಯವಾಗುತ್ತದೆ. ಹೆಚ್ಚಿನವರು ಅದರ ಬಗ್ಗೆ ಆಲೋಚಿಸುವುದಿಲ್ಲ. ಮಕ್ಕಳ ದೈಹಿಕ ಆರೋಗ್ಯ ಮತ್ತು ಶಾಲೆಯ ಶಿಕ್ಷಣದ ಬಗ್ಗೆ ಕಾಳಜಿ ವಹಿಸುವ ತಂದೆ–ತಾಯಂದಿರು ಅವರ ಚಾರಿತ್ರ್ಯ ಸಂಸ್ಕರಣೆಯ ಬಗ್ಗೆ ತೀರಾ ಅಶ್ರದ್ಧೆ ತೋರಿಸುತ್ತಾರೆ. ಮಕ್ಕಳ ಇತರ ವಿಷಯಗಳ ಬಗ್ಗೆ ಗಾಢವಾದ ಚಿಂತನೆ ನಡೆಸುವವರು ಅವರನ್ನು ಸಚ್ಚರಿತರನ್ನಾಗಿ ಮಾಡುವ ಏರ್ಪಾಡುಗಳನ್ನು ಮಾಡುವುದಿಲ್ಲ. ಆದ್ದರಿಂದಲೇ ''ಮಕ್ಕಳು ಕಲಿತ ಪ್ರಾಣಿಗಳಾಗಿ ಮಾರ್ಪಡುತ್ತಾರೆ. ತನ್ಮೂಲಕ ತಂದೆ–ತಾಯಿಗಳು ದುಃಖ ಸಾಗರದಲ್ಲಿ ಮುಳುಗುತ್ತಾರೆ.'' ಮಾನವನು ಮೂರು ರೀತಿಯಲ್ಲಿ ವಿಷಯಗಳನ್ನು ಕಲಿತು ಅರ್ಥಮಾಡಿಕೊಳ್ಳುತ್ತಾನೆ. ಕಂಡು, ಕೇಳಿ ಮತ್ತು ಅನುಭವಿಸಿ ಕೇಳುವುದಕ್ಕಿಂತಲೂ ಹೆಚ್ಚು ನೋಡಿಯೂ ಅನುಭವಿಸಿಯೂ ಪ್ರಭಾವಿತರಾಗುತ್ತಾನೆ. ನ್ಯೂರೋ ಲಿಂಗ್ವಿಸ್ಟಿಕ್ ಪ್ರೋಗ್ರಾಮಿಂಗ್ ಎಂಬ ಮನಶ್ಶಾಸ್ತ್ರ ಚಿಕಿತ್ಸಾ ರೀತಿಯ ಆಧಾರ ಇದುವೇ ಆಗಿದೆ.

ಉತ್ತಮ ಉಪದೇಶಕ್ಕಿಂತ ಹೆಚ್ಚಾಗಿ ಮಕ್ಕಳ ಮನದಲ್ಲಿ ಉನ್ನತ ಕರ್ಮಗಳು ಪ್ರಭಾವ

ಬೀರುತ್ತವೆ. ಮಾತುಗಳಿಗಿಂತ ಅನುಭವಕ್ಕೆ ಹೆಚ್ಚಿನ ಶಕ್ತಿಯಿದೆ. ಮಕ್ಕಳು ತಂದೆ-ತಾಯಿಗಳನ್ನು ಹೇಗೆ ಅನುಭವಿಸುತ್ತಾರೆಂಬುದು ಪ್ರಮುಖವಾಗಿದೆ. ಮನೆಯೊಳಗಿದ್ದು ನಾನಿಲ್ಲಿ ಇಲ್ಲ ಎಂದು ಹೇಳಲು ಮಕ್ಕಳೊಂದಿಗೆ ಹೇಳುವ ತಂದೆ ಅವನನ್ನು ಎಷ್ಟರ ಮಟ್ಟಿಗೆ ಕೆಡಿಸುತ್ತಾನೆಂಬುದನ್ನು ನೆನಪಿಸುವುದಿಲ್ಲ. ಹಣ ಇರುವಾಗ ಮನೆಗೆ ಬರುವ ಭಿಕ್ಷುಕನಿಗೆ ಇಲ್ಲಿ ಏನೂ ಇಲ್ಲ ಎಂದು ಹಿಂದೆ ಕಳುಹಿಸುವ ಮನೆಯೊಡೆಯ ಆ ಮೂಲಕ ಮಕ್ಕಳಿಗೆ ನಿಷ್ಕರುಣೆ, ಜಿಪುಣತೆ ಮತ್ತು ಸುಳ್ಳಿನ ಪಾಠ ಹೇಳಿಕೊಡುತ್ತಾರೆ. ಬಡ್ಡಿ, ಮೋಸ, ವಂಚನೆ, ಲಂಚ, ಅಕ್ರಮ ಇತ್ಯಾದಿ ನಿಷಿದ್ಧ ಮಾರ್ಗದಿಂದ ಸಂಪಾದನೆ ಮಾಡುವವರು ತಮ್ಮ ಮಕ್ಕಳಿಗೆ ನಿಷಿದ್ಧವನ್ನು ಕೊಟ್ಟು ಅವರು ಯಾವುದಕ್ಕೂ ಸಲ್ಲದವರಾಗಿ ಬೆಳೆಸುವುದರೊಂದಿಗೆ ಅವರನ್ನು ಅತಿ ದೊಡ್ಡ ಪಾಪಿಗಳನ್ನಾಗಿ ಮಾಡುತ್ತಾರೆ.

ಹಾಗೆಯೇ ತಂದೆಯು ತಾಯಿಯ ಬಗ್ಗೆ ತಾಯಿಯು ತಂದೆಯ ಬಗ್ಗೆ ಪರಸ್ಪರ ದೂರುಗಳನ್ನು ಮಕ್ಕಳೊಂದಿಗೆ ಹೇಳಿದರೆ ತಂದೆ-ತಾಯಿಗಳಿಬ್ಬರೂ ಯಾವುದಕ್ಕೂ ಅರ್ಹರಲ್ಲ ಎಂದು ಅವರು ತೀರ್ಮಾನಿಸುತ್ತಾರೆ. ನಂತರ ನಾವು ಯಾಕೆ ಇಷ್ಟು ಒಳ್ಳೆಯವರಾಗ ಬೇಕೆಂದು ಸ್ವತಃ ಚಿಂತಿಸ ತೊಡಗುತ್ತಾರೆ. ಮಕ್ಕಳು ತಾಯಿಯ ಮಾತನ್ನು ಕೇಳದೆ ಆಜ್ಞೋಲ್ಲಂಘನೆ ತೋರಿದಾಗ ಅದನ್ನು ತಂದೆ ಅನುಮೋದಿಸಿದರೆ ಮಕ್ಕಳು ಇನ್ನಷ್ಟು ದುರಾಚಾರಿಗಳಾಗುತ್ತಾರೆಂಬುದನ್ನು ಪ್ರತ್ಯೇಕ ಹೇಳಬೇಕಾಗಿಲ್ಲ. ಆದ್ದರಿಂದ, ಮಕ್ಕಳು ಅನುಕರಿಸುವ ತಂದೆ-ತಾಯಿಗಳು ಸಚ್ಚಾರಿತ್ರ್ಯವಂತರೂ, ಗೌರವಾನ್ವಿತರೂ ಆಗಿರಬೇಕು. ಸ್ವತಃ ಕೆಟ್ಟವರಾಗಿ ಮಕ್ಕಳಿಗೆ ಉತ್ತಮ ಉಪದೇಶಗಳನ್ನೂ, ಆದೇಶಗಳನ್ನೂ ನೀಡುವುದರಲ್ಲಿ ಅರ್ಥವಿಲ್ಲ. ಅದು ಪ್ರಯೋಜನವಾಗುವುದೂ ಇಲ್ಲ. ಹೆಚ್ಚಿನ ಸಂದರ್ಭಗಳಲ್ಲಿ ತಂದೆ-ತಾಯಿ ಗಳು ಅನುಕರಣೀಯ ಜೀವನ ಸಾಗಿಸುವವರಾಗಿದ್ದರೆ ಉಪದೇಶ-ನಿರ್ದೇಶನಗಳ ಅಗತ್ಯ ವಿಲ್ಲದೆ ಮಕ್ಕಳು ಉತ್ತಮರಾಗಲೂ ಬಹುದು. ಮನೆಗೆ ಬರುವ ಭಿಕ್ಷುಕನಿಗೆ ಹಣಕೊಡಲು ಮಕ್ಕಳಿಗೆ ವಹಿಸಿಕೊಡುವುದು, ಅತಿಥಿಗಳು ಬಂದಾಗ ಸ್ವಾಗತಿಸಲು ಮತ್ತು ಸತ್ಕರಿಸಲು ಅವರ ಸಹಕಾರ ಪಡೆಯುವುದು, ಸಂಬಂಧಿಕರ ಮನೆಗಳಿಗೆ ಭೇಟಿ ಕೊಡುವಾಗ ಅವರನ್ನೂ ಜೊತೆಯಲ್ಲಿ ಕರೆದುಕೊಂಡು ಹೋಗುವುದು ಇತ್ಯಾದಿ ಸತ್ಕರ್ಮಗಳನ್ನು ಮಾಡಿಸುವುದ ರಿಂದ ಅವರಲ್ಲಿ ಸದ್ಗುಣಗಳು ಬೆಳೆಯಲು ಸಹಾಯಕವಾಗುತ್ತದೆ. ರೋಗಿಗಳ ಸಂದರ್ಶನ ಮತ್ತು ಮಯ್ಯಿತ್ ಸಂಸ್ಕಾರದಲ್ಲಿ ಮಕ್ಕಳನ್ನು ಪಾಲ್ಗೊಳ್ಳುವಂತೆ ಪ್ರೇರೇಪಿಸಿದರೆ ಅದು ಹೆಚ್ಚು ಸತ್ಫಲಗಳನ್ನು ನೀಡಬಲ್ಲುದು.

ಸತ್ಯಸಂಧತೆ, ಸಮರ್ಪಣಾಭಾವ, ನಿಸ್ವಾರ್ಥತೆ, ವಿನಯ, ಕ್ಷಮೆ, ಸಹನೆ, ಕರುಣೆ, ಸೌಮ್ಯತೆ, ನ್ಯಾಯನಿಷ್ಠೆ, ಸೇವಾ ಮನೋಭಾವ, ತ್ಯಾಗ, ಕರ್ಮದಲ್ಲಿ ಉತ್ಸಾಹ, ಪಕ್ವತೆ, ಸರಳತೆ, ಮನೋಸ್ಥೈರ್ಯ, ಜ್ಞಾನ ದಾಹ, ಶುಭ ನಿರೀಕ್ಷೆ, ಸ್ವಾಭಿಮಾನ, ಆವೇಶ, ಧೈರ್ಯ, ಸಾಮಾಜಿಕ ಸನ್ನದ್ಧತೆ, ನೈತಿಕತೆ, ಕೃತಜ್ಞತಾ ಭಾವವಚನ ಪಾಲನೆ, ಉದಾರತೆ, ಕರ್ತವ್ಯ ನಿಷ್ಠೆ

ಶಿಸ್ತು, ಲಜ್ಜೆ, ಸಮಯ ನಿಷ್ಠೆ, ವಾಚನ, ಹಿತಾಕಾಂಕ್ಷೆ, ಶುಚಿತ್ವ ಸಮಾಲೋಚನೆ ಇತ್ಯಾದಿ ಮಹಾನ್ ಚಾರಿತ್ರ್ಯಗಳನ್ನು ಮಕ್ಕಳಲ್ಲಿ ಬೆಳೆಸಲು ತಂದೆ-ತಾಯಿಗಳು ಬಾಧ್ಯಸ್ಥರಾಗಿದ್ದಾರೆ. ಹಾಗೆಯೇ ಅಹಂಕಾರ, ಧಿಕ್ಕಾರ, ದುಃಸ್ವಭಾವ, ಕೋಪ, ಕಾಠಿಣ್ಯ, ಜಿಪುಣತೆ, ಅತ್ಯಾಸೆ ಇತ್ಯಾದಿ ದುರ್ಗುಣಗಳಿಂದ ಅವರನ್ನು ಮುಕ್ತಗೊಳಿಸಬೇಕು.

ಇದೆಲ್ಲವೂ ಸಾಧ್ಯವಾಗಬೇಕಾದರೆ ತಂದೆ-ತಾಯಿಗಳು, ಮಕ್ಕಳ ಒಟ್ಟಿಗೆ ಕುಳಿತು ಇಂತಹ ವಿಷಯಗಳ ಬಗ್ಗೆ ಮಾತನಾಡಿ ಚರ್ಚಿಸಬೇಕು. ಅದರ ಜೊತೆಗೆ ಕುಟುಂಬ ಜೊತೆಯಾಗಿ ಕುಳಿತು ಇಂತಹ ಗುಣಗಳ ಬಗ್ಗೆ ಕುರ್‌ಆನ್ ಸೂಕ್ತಗಳನ್ನು, ಪ್ರವಾದಿ ವಚನಗಳನ್ನು, ಚಾರಿತ್ರಿಕ ಘಟನೆಗಳನ್ನು ಓದಿ, ಕಲಿಯುವುದು ಅತ್ಯಂತ ಪರಿಣಾಮಕಾರಿಯಾಗುತ್ತದೆ.

ಪ್ರಸ್ತುತ ಸದ್ಗುಣಗಳ ಫಲ ಮತ್ತು ಮಹತ್ವ ಹಾಗೂ ದುಗುರ್ಣಗಳಿಂದಾಗುವ ನಾಶ-ನಷ್ಟಗಳನ್ನು, ನಿಂದ್ಯತೆ, ಅಪಮಾನಗಳನ್ನು ವಿವರಿಸುವ ಕಥೆಗಳು, ಚಾರಿತ್ರಿಕ ಘಟನೆಗಳನ್ನು ಸಣ್ಣ ಪ್ರಾಯದಲ್ಲಿಯೇ ಮಕ್ಕಳಿಗೆ ಹೇಳಿಕೊಟ್ಟು ಅವರನ್ನು ಕಲಿಸುವುದು, ಅವರಿಂದ ಹೇಳಿಸುವುದು, ಬರೆಸುವುದು ದೊಡ್ಡ ಪ್ರಯೋಜನವನ್ನುಂಟು ಮಾಡುತ್ತದೆ. ಕಥೆಗಳು ಮಾನವ ಮನಸ್ಸುಗಳನ್ನು ಅತ್ಯಧಿಕ ಸ್ವಾಧೀನ ಪಡಿಸುತ್ತದೆ. ಆದ್ದರಿಂದಲೇ ಪವಿತ್ರ ಕುರ್‌ಆನ್ ಮಾನವ ಸೃಷ್ಟಿಯಿಂದ ಹಿಡಿದು ಎಲ್ಲ ಘಟನೆಗಳು ಕಥಾ ರೂಪದಲ್ಲಿ ಪದೇ ಪದೇ ಅವತೀರ್ಣಗೊಂಡಿದೆ.

ಇಂತಹ ವಿಧಾನಗಳ ಮೂಲಕ ಮಕ್ಕಳಲ್ಲಿ ಸದ್ಗುಣಗಳನ್ನು ಬೆಳೆಸಲು, ದುರ್ಗುಣಗಳಿಂದ ದೂರ ಉಳಿಸಲು ತಂದೆ-ತಾಯಿಗಳು ಜಾಗರೂಕತೆ ಪಾಲಿಸಬೇಕು. ಸಜ್ಜನರಾದ ಮಕ್ಕಳೊಂದಿಗೆ ಸ್ನೇಹ ಸಂಬಂಧ ಬೆಳೆಸಲು ಅವಕಾಶಗಳನ್ನೊದಗಿಸುವುದು ಒಳ್ಳೆಯದು.

''ಉತ್ತಮ ಚಾರಿತ್ರ್ಯವನ್ನು ಪರಿಪೂರ್ಣ ಗೊಳಿಸಲಿಕ್ಕಾಗಿ ನನ್ನನ್ನು ಅಲ್ಲಾಹನ ವತಿಯಿಂದ ನಿಯೋಗಿಸಲಾಗಿದೆ''ಎಂದೂ.'' ''ಅಂತಿಮ ದಿನದಂದು ಸತ್ಯವಿಶ್ವಾಸಿಗಳ ತಕ್ಕಡಿಯಲ್ಲಿ ಅತ್ಯಧಿಕ ಭಾರ ಇರುವ ವಸ್ತು ಸಚ್ಚಾರಿತ್ರ್ಯವಾಗಿದೆ.'' ಎಂದೂ ಪ್ರವಾದಿ(ಸ) ಹೇಳಿರುತ್ತಾರೆ. (ತಿರ್ಮಿದಿ)

ಹೀಗೆ ಮಕ್ಕಳಲ್ಲಿ ಸದ್ಗುಣಗಳನ್ನು ಬೆಳೆಸುವವರನ್ನು ಪ್ರವಾದಿ(ಸ) ಹೊಗಳಿದ್ದಾರೆ. ಅವರು ಹೇಳಿದರು. ''ತನ್ನ ಮಗನಿಗೆ ಒಳಿತಿನ ಕಾರ್ಯದಲ್ಲಿ ಸಹಾಯ ಮಾಡಿದ ತಂದೆಗೆ ಅಲ್ಲಾಹನು ಅನುಗ್ರಹಿಸಿದ್ದಾನೆ. ಹಾಗೆಯೇ ಶಿಕ್ಷಣ ತರಬೇತಿಯಲ್ಲಿ ಕೊರತೆಯನ್ನುಂಟು ಮಾಡುವುದು ಅತಿದೊಡ್ಡ ಪಾಪವಾಗಿದೆ.'' ಒಮ್ಮೆ ಒಬ್ಬ ವ್ಯಕ್ತಿ ಉಮರ್ ಫಾರೂಕ್‌ರ(ರ) ಬಳಿ ಬಂದು- ''ತನ್ನ ಮಗ ತನ್ನೊಂದಿಗೆ ಕೆಟ್ಟದಾಗಿ ವರ್ತಿಸುವುದರ ಬಗ್ಗೆ ದೂರು ಕೊಟ್ಟರು. ತನ್ನೊಂದಿಗಿರುವ ಕರ್ತವ್ಯಗಳನ್ನು ನೆರವೇರಿಸುವುದಿಲ್ಲವೆಂದು ಮನವರಿಕೆ ಮಾಡಿದರು.'' ಆಗ ಮಗ ಖಲೀಫರೊಂದಿಗೆ ಪ್ರಶ್ನಿಸಿದ: ''ಮಗ ತನ್ನ ತಂದೆಯಿಂದ ಕೆಲವು ಹಕ್ಕುಗಳಿಗೆ ಅರ್ಹನಲ್ಲವೇ?'' ಉಮರ್ ಫಾರೂಕ್ (ರ) ಖಂಡಿತವಾಗಿಯೂ ಎಂದು ಉತ್ತರಿಸಿದರು. ಅದು ಯಾವುದು? ಹುಡುಗ ಕೇಳಿದ, ''ಮಗುವಿನ ತಾಯಿಯನ್ನು ಸಂರಕ್ಷಿಸುವುದು, ಉತ್ತಮ ಹೆಸರಿಡುವುದು, ಕುರ್‌ಆನ್ ಕಲಿಸುವುದು.'' ಖಲೀಫ ಉತ್ತರಿಸಿದರು, ಆದರೆ ನನ್ನ ತಂದೆ ಅದೇನೂ ಮಾಡಲಿಲ್ಲ.

ನನ್ನ ತಾಯಿ ಮಜೂಸಿ ಮಹಿಳೆ. ನನಗೆ ನೀಡಿದ ಹೆಸರು ''ಸೆಗಣಿ ಮುದ್ದೆ'' ಎಂಬ ಅರ್ಥ ಬರುವ 'ಜುಅಲ್' ಎಂದಾಗಿದೆ. ಕುರ್‌ಆನಿನಿಂದ ಒಂದಕ್ಷರವನ್ನೂ ನನಗೆ ಕಲಿಸಲಿಲ್ಲ ಎಂದು ಹುಡುಗ ದೂರಿದ.

ಆಗ ಉಮರ್(ರ) ತಂದೆಯ ಕಡೆಗೆ ತಿರುಗಿ ಹೇಳಿದರು, ''ನೀವು ಮಗನ ಕೆಟ್ಟ ವರ್ತನೆಯ ಬಗ್ಗೆ ದೂರು ಕೊಡಲು ಬಂದಿರುತ್ತೀರಿ. ಆದರೆ, ಅವನು ನಿಮ್ಮೊಂದಿಗೆ ಕೆಟ್ಟ ವರ್ತನೆ ತೋರಲು ಕಾರಣ ನೀವು ಅವನೊಂದಿಗೆ ತಪ್ಪು ಮಾಡಿದ್ದೀರಿ. ನಿಮ್ಮೊಂದಿಗಿನ ಕರ್ತವ್ಯವನ್ನು ಅವನು ಪಾಲಿಸುವುದಿಲ್ಲವೆಂದಾದರೆ ಅದಕ್ಕಿಂತ ಮುಂಚೆಯೇ ನೀವು ನಿರ್ವಹಿಸಬೇಕಾದ ಕರ್ತವ್ಯದಲ್ಲಿ ಅತಿ ದೊಡ್ಡ ಲೋಪ ಮಾಡಿದ್ದೀರಿ.''

ಮುಆವಿಯಾ(ರ) ಮಕ್ಕಳ ಬಗ್ಗೆ ಹೀಗೆ ಹೇಳುತ್ತಾರೆ: ''ಓ ಸತ್ಯವಿಶ್ವಾಸಿಗಳ ನಾಯಕರೇ! ಮಕ್ಕಳು ನಮ್ಮ ಹೃದಯದ ಕುಡಿ ಮತ್ತು ಬೆನ್ನಿನ ಆಸರೆಯಾಗಿದ್ದಾರೆ. ನಾವು ಅವರ ಮಟ್ಟಿಗೆ ಭೂಮಿಯಂತೆ. ಅದು ಮೃದುವೂ, ನಿರುಪದ್ರವಿಯೂ ಆಗಿದೆ. ಅವರ ಮಟ್ಟಿಗೆ ಶುಭ್ರ, ಆಕಾಂಶದಂತೆ. ಅವರ ಮೂಲಕವೇ ನಾವು ಮಹತ್ಕಾರ್ಯಗಳನ್ನು ಸಾಧಿಸುವ ಧೈರ್ಯ ತಾಳುತ್ತೇವೆ. ಆದ್ದರಿಂದ ಅವರು ನಿಮ್ಮಲ್ಲೇನಾದರೂ ಕೇಳಿದರೆ ಅದನ್ನು ಪೂರೈಸಿರಿ. ಅವರು ಮನನೊಂದಾಗ ಅವರ ನೋವಿಗೆ ಶಮನ ಮಾಡಿರಿ. ಆಗ ಅವರು ನಿಮ್ಮನ್ನು ಪ್ರೀತಿಸುವರು. ನಿಮ್ಮ ಪಿತೃ ವಾತ್ಸಲ್ಯವನ್ನು ಮೆಚ್ಚುವರು ಎಂದೂ ಅವರಿಗೆ ಸಹಿಸಲಾಗದ ಹೊರೆಯಾಗದಿರಿ. ಅನ್ಯಥಾ ಅವರು ನಿಮ್ಮಿಂದ ಜಿಗುಪ್ಸೆ ಹೊಂದುವರು. ನಿಮ್ಮ ಮರಣವನ್ನು ಬಯಸುವರು. ನಿಮ್ಮ ಸಮೀಪ ಬರುವುದನ್ನು ಅವರು ದ್ವೇಷಿಸುವರು.''

ಮಕ್ಕಳಿಗೆ ಪ್ರೀತಿ-ವಾತ್ಸಲ್ಯ ತೋರಿಸುವುದರೊಂದಿಗೆ, ಅವರ ದೈಹಿಕ ಬೆಳವಣಿಗೆ ಮತ್ತು ಆಧ್ಯಾತ್ಮಿಕ ಬೆಳವಣಿಗೆ ಹಾಗೂ ಇಹಪರ ವಿಜಯಕ್ಕೆ ಅಗತ್ಯವಾದ ಶಿಕ್ಷಣ ತರಬೇತಿಗಳನ್ನು ನೀಡಬೇಕು. ಸ್ವತಃ ನರಕಾಗ್ನಿಯಿಂದ ರಕ್ಷಣೆ ಹೊಂದುವುದರ ಜೊತೆಗೆ ಮಕ್ಕಳನ್ನೂ ಅದರಿಂದ ರಕ್ಷಿಸಬೇಕಾದುದು ತಂದೆ-ತಾಯಿಗಳ ಕರ್ತವ್ಯವಾಗಿದೆ. ಅಲ್ಲಾಹನು ಹೇಳುತ್ತಾನೆ: **''ಸತ್ಯ ವಿಶ್ವಾಸಿಗಳೇ, ನಿಮ್ಮನ್ನೂ, ನಿಮ್ಮ ಮನೆಯವರನ್ನೂ ನರಕಾಗ್ನಿಯಿಂದ ರಕ್ಷಿಸಿ. ಮಾನವರೂ, ಶಿಲೆಗಳೂ ಅದರ ಇಂಧನಗಳಾಗಿವೆ.''** (ಸೂರಃ ಅತ್ತಹ್ರೀಮ್- 6)

ಯಾವುದೇ ಮಗುವಿನ ಮೊದಲ ಪಾಠಶಾಲೆ ತಾಯಿಯಾಗಿದ್ದಾಳೆ. ಮೊದಲ ಪಾಠ ಮತ್ತು ತರಬೇತಿ ಅಲ್ಲಿಂದಲೇ ಸಿಗಬೇಕು. ತಾಯಿಂದ ಮಗು ಮೊದಲು ಹೇಳುವ ಮಾತು 'ಅಮ್ಮ' ಎಂಬಂತೆ, ಮೊದಲ ಅಕ್ಷರ ಕೂಡಾ ಕಲಿಯುತ್ತದೆ. ಸ್ವಭಾವಗುಣಗಳನ್ನು ಅಳವಡಿಸುತ್ತದೆ. ಆದ್ದರಿಂದಲೇ ಕವಿ ಹೀಗೆ ಹಾಡಿದ್ದರು: ''ತಾಯಿ ಪಾಠ ಶಾಲೆಯಾಗಿದ್ದಾಳೆ. ನೀನು ಅದನ್ನು ಉತ್ತಮ ರೀತಿಯಲ್ಲಿ ಸಜ್ಜುಗೊಳಿಸಿದರೆ ಉತ್ತಮ ಅಡಿಪಾಯ ಇರುವ ಒಂದು ಜನತೆ ನಿರ್ಮಾಣವಾಗುತ್ತದೆ.''

ಪುರುಷ ತನ್ನ ಮನೆಯವರ ಬಗ್ಗೆ ಪ್ರಶ್ನಿಸಲ್ಪಡುವಾಗ ಸ್ತ್ರೀ ತನ್ನ ಮನೆ ಮತ್ತು ಮಕ್ಕಳ ಬಗ್ಗೆ

ಪ್ರಶ್ನಿಸಲ್ಪಡುತ್ತಾಳೆ. ಆದ್ದರಿಂದ, ಇಬ್ಬರೂ ಮನೆಯ ಸಂರಕ್ಷಣೆ ಮತ್ತು ಮಕ್ಕಳ ಶಿಕ್ಷಣದ ಬಗ್ಗೆ ಜಾಗ್ರತೆ ವಹಿಸಬೇಕು. ಪ್ರವಾದಿ(ಸ) ಹೇಳಿದರು: ''ನೀವು ನಿಮ್ಮ ಮಕ್ಕಳಿಗೂ, ಕುಟುಂಬದವರಿಗೂ ಉತ್ತಮ ಕಾರ್ಯಗಳನ್ನು ಕಲಿಸಿರಿ. ಅವರನ್ನು ಸಂಸ್ಕರಿಸಿರಿ. ನೀವು ನಿಮ್ಮ ಮಕ್ಕಳಿಗೆ ಶಿಕ್ಷಣ ಕೊಡಿ. ಅವರಿಗೆ ಶಿಷ್ಟಾಚಾರಗಳನ್ನು ಕಲಿಸಿರಿ.''

''ಆದೇಶಗಳನ್ನು ಪಾಲಿಸಲು, ವಿರೋಧಿಸಿದವುಗಳಿಂದ ದೂರ ನಿಲ್ಲಲು ನಿಮ್ಮ ಮಕ್ಕಳಿಗೆ ಆಜ್ಞಾಪಿಸಿರಿ. ಅದು ಅವರನ್ನು ನರಕಾಗ್ನಿಯಿಂದ ರಕ್ಷಿಸುತ್ತದೆ.'' (ಇಬ್ನು ಜರೀರ್)

❖❖❖❖

ಪ್ರತಿಭೆಗಳನ್ನು ಬೆಳೆಸಿ

ತಮ್ಮ ಮಕ್ಕಳು ಮೇಧಾವಿಗಳಾಬೇಕೆಂದು ಬಯಸದ ತಂದೆ-ತಾಯಿಗಳಿರಲಾರರು. ಆದರೆ ಹೆಚ್ಚಿನವರ ಸಂಕಲ್ಪ, ಕನಸು ಒಳ್ಳೆಯ ರೀತಿಯಲ್ಲಿ ಕಲಿತು ಉನ್ನತ ಉದ್ಯೋಗಸ್ಥರಾಗಿ, ಅತ್ಯಧಿಕ ವರಮಾನ, ವ್ಯಾಪಾರ ಮಾಡುವ ಮಕ್ಕಳಾಗಬೇಕೆಂದಾಗಿದೆ. ಮಿಗಿಲಾಗಿ ಅವರಲ್ಲಿ ಸುಪ್ತವಾಗಿರುವ ಪ್ರತಿಭೆಗಳನ್ನು ಗುರುತಿಸಿ ಅದನ್ನು ಪ್ರೋತ್ಸಾಹಿಸಿ ಬೆಳೆಸಲು ಆಶಿಸುವ ಕೆಲವರಾದರೂ ಇರಬಹುದು. ವಾಸ್ತವದಲ್ಲಿ ಎಷ್ಟೋ ದೊಡ್ಡ ಉದ್ಯೋಗಸ್ಥರಾಗುತ್ತಾರೊ ಅಷ್ಟೇ ತಂದೆ-ತಾಯಿಗಳಿಂದ ದೂರವಾಗುವುದು ಸಹಜ. ಅವರ ಉದ್ಯೋಗ ಸ್ಥಳ ಮನೆಯ ಹತ್ತಿರ ಅಥವಾ ಊರಿನಲ್ಲಿ ಸಿಗುವ ಸಾಧ್ಯತೆ ಬಹಳ ಕಡಿಮೆ. ಹುಟ್ಟಿ ಬೆಳೆದ ಊರನ್ನು ಬಿಟ್ಟು ಹೋಗಲು ತಂದೆ-ತಾಯಿಗಳೂ ಹಿಂಜರಿಯುತ್ತಾರೆ. ತಂದೆ-ತಾಯಿಗಳು ಒಂಟಿಯಾಗುತ್ತಾರೆಂಬುದು ಅದರ ಅಂತಿಮ ಪರಿಣಾಮ. ಇದರ ಅರ್ಥ ಅವರನ್ನು ಆ ರೀತಿ ಬೆಳೆಸಬಾರದು ಎಂದಲ್ಲ, ಬದಲಾಗಿ ಹಾಗೆ ಮಾಡುವಾಗ ಅದರೊಂದಿಗೆ ಹೊಂದಿಕೊಳ್ಳುವ ಮಾನಸಿಕ ಸ್ಥಿತಿಯನ್ನು ಬೆಳೆಸಿಕೊಳ್ಳಬೇಕು ಎಂದಾಗಿದೆ. ಹೆಚ್ಚಿನ ಮಕ್ಕಳಲ್ಲಿ ಯಾವುದಾದರೊಂದು ವಿಶೇಷ ಪ್ರತಿಭೆ ಇರುತ್ತವೆ. ಕೆಲವು ಪ್ರಕೃತಿದತ್ತವಾಗಿರುತ್ತದೆ. ಕೆಲವು ಸ್ವಗಳಿಕೆಯಾಗಿರುತ್ತಾ ಸಾಂಕೇತಿಕ ನೈಪುಣ್ಯಗಳಾಗಿರುತ್ತವೆ. ಸ್ವಂತ ಸಂತಾನಗಳ ಪ್ರತಿಭೆಯ ವೈಶಿಷ್ಟ್ಯಗಳನ್ನು ಕಂಡು ಹಿಡಿದು ಅದನ್ನು ಬೆಳೆಸಿಕೊಂಡು ಬರುವ ತಂದೆ-ತಾಯಿಗಳು ಮಕ್ಕಳೊಂದಿಗೆ ನ್ಯಾಯ ಪಾಲಿಸುವವರಾಗಿದ್ದಾರೆ. ಭಾಷಣ, ಬರವಣಿಗೆ, ಚಿತ್ರ ರಚನೆ, ಕವನ, ಹಾಡುವುದು, ಅಭಿನಯ ಇತ್ಯಾದಿ ಮಕ್ಕಳ ಪ್ರತಿಭೆಗಳನ್ನು ಬೆಳೆಸಲು ಅನುಮತಿಸದೆ ಪ್ರಜ್ಞಾಪೂರ್ವಕವಾಗಿ ತಡೆಯುವ ಮಾತಾಪಿತರು ಕೂಡಾ ಇದ್ದಾರೆ. ತಾವು ಬಯಸುವ ಉನ್ನತ ವಿದ್ಯಾಭ್ಯಾಸಕ್ಕೆ ತಡೆಯಾಗುತ್ತದೆಯೆಂಬುದೇ ಅದಕ್ಕೆ ಮುಖ್ಯ ಕಾರಣ. ಆದರೆ, ಕೆಲವು ಮಕ್ಕಳಾದರೂ ಮಾನಸಿಕವಾಗಿ ಕುಗ್ಗಿಹೋಗುವ ಸಾಧ್ಯತೆಗಳಿವೆ.

ಶಿಕ್ಷಣಕ್ಕೆ ಅಡ್ಡಿಯಾಗದ ರೀತಿಯಲ್ಲಿ ಮಕ್ಕಳ ಪ್ರಕೃತಿದತ್ತವಾದ ಭಾವನೆ, ಪ್ರತಿಭೆಗಳು ಬೆಳೆಯಲು ಅವಕಾಶಗಳನ್ನೊದಗಿಸಬೇಕಾದುದು ತಂದೆ-ತಾಯಿಗಳ ಕರ್ತವ್ಯವಾಗಿದೆ. ಹೆಚ್ಚಿನ ವೇಳೆ ದೊಡ್ಡ ದೊಡ್ಡ ವಿದ್ಯಾರ್ಹತೆಗಳಿರುವ ಮಕ್ಕಳಿಗಿಂತ ಇತರ ಕ್ಷೇತ್ರಗಳಲ್ಲಿ ಮುಂದುವರಿದ ಮಕ್ಕಳು ತಂದೆ-ತಾಯಿಗಳಿಗೆ ಪ್ರಯೋಜನಕಾರಿಯಾಗುತ್ತಾರೆ. ಏನಿದ್ದರೂ ಜನರು, ದೇಶ,

ಇಸ್ಲಾಮ್, ಇಸ್ಲಾಮೀ ಸಮಾಜಕ್ಕೆ ಹೆಚ್ಚು ಪ್ರಯೋಜನವಾಗುವುದು ಪ್ರಕೃತಿದತ್ತ ಪ್ರತಿಭೆಗಳಿಂದ ಅನುಗ್ರಹಿತರಾದವರಾಗಿದ್ದಾರೆ. ಆದ್ದರಿಂದ ತಂದೆ-ತಾಯಿಗಳು ಮಕ್ಕಳ ಪ್ರತಿಭೆಗಳು ಸಮಾಧಿಯಾಗಲು ಕಾರಣಕರ್ತರಾಗಬಾರದು. ಬದಲಾಗಿ, ಅದು ಬೆಳೆದು ಬರಲು ಅವಕಾಶ ಗಳನ್ನೊದಗಿಸುವವರಾಗಬೇಕು.

ಮಕ್ಕಳಿಗೆ ಅವರ ಪ್ರತಿಭೆಗಳನ್ನು ಪ್ರಕಟಪಡಿಸಲು ಅವಕಾಶಗಳಿರಬೇಕು. ಯಾವುದೇ ಅಳುಕಿಲ್ಲದೆ ಹಾಡಲು, ಕಥೆಹೇಳಲು, ಸಂಗೀತ ಕೇಳಿಸಲು, ಭಾಷಣಮಾಡಲು, ಅಭಿನಯಿಸಲು, ಮಿಮಿಕ್ರಿ, ಏಕಪಾತ್ರಾಭಿನಯ ಮಾಡಲು ಅವಕಾಶಗಳಿರಬೇಕು. ಅದರೊಂದಿಗೆ ಮಕ್ಕಳ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಗರಿಷ್ಠ ಮಟ್ಟದಲ್ಲಿ ಪ್ರೋತ್ಸಾಹಿಸಬೇಕು. ಆದಕ್ಕಾಗಿ ಅವರನ್ನು ಹೃದಯಂಗಮವಾಗಿ ಅಭಿನಂದಿಸಬೇಕು. ಪಾರಿತೋಷಕಗಳನ್ನು ನೀಡುವುದು ಒಳ್ಳೆಯದು. ಸ್ವಂತ ಮನೆಯಲ್ಲಿಯೇ ಕಲೆ ಸಾಹಿತ್ಯ, ಸಾಂಸ್ಕೃತಿಕ ಬೆಳವಣಿಗೆಗೆ ದಾರಿ ಮಾಡಿಕೊಡಬೇಕು.

ಸಮಯದ ಬೆಲೆಯನ್ನು ಮಾತಾಪಿತರು ಸ್ವತಃ ಮನಗಂಡು, ಮಕ್ಕಳಲ್ಲಿ ಆದರ ಬಗ್ಗೆ ಪ್ರಜ್ಞಾವಂತರಾಗಿಸಬೇಕು. ನಷ್ಟವಾದ ನಿಮಿಷ, ಸಮಯ, ದಿನ ಒಮ್ಮೆಯೂ ಮರಳಿ ಬರುವುದಿಲ್ಲ, ಯಾರಿಗೂ ಆದನ್ನು ದಾನ ಮತ್ತು ಸಾಲದ ರೂಪದಲ್ಲಿ ನೀಡಲು ಸಾಧ್ಯವಿಲ್ಲ, ಸಮಯವು ಪ್ರತಿಯೊಬ್ಬರ ಹಕ್ಕಾಗಿದೆ. ಅದನ್ನು ಫಲಪ್ರದಗೊಳಿಸಿದರೆ ಲಾಭವೂ, ಪೋಲು ಮಾಡಿದರೆ ನಷ್ಟವಾಗುವುದೂ ಅದಕ್ಕೆ ಸಂಬಂಧಪಟ್ಟ ವ್ಯಕ್ತಿಗಳಿಗಾಗಿರುತ್ತದೆ. ಜೀವನದ ಅತ್ಯಮೂಲ್ಯ ಬಂಡವಾಳ ಆಯುಷ್ಯವಾಗಿದೆ. ಆದುವೇ ಸಮಯ.

ಮಾತಾಪಿತರು ಪ್ರಭಾತದಲ್ಲಿಯೇ ಎದ್ದೇಳಬೇಕು. ಮಕ್ಕಳನ್ನು ಎಬ್ಬಿಸಬೇಕು. ಬೆಳಿಗ್ಗೆ ನಿದ್ರಿಸುವ ಅಭ್ಯಾಸ ಬೆಳೆಯದಂತೆ ನೋಡಿಕೊಳ್ಳಬೇಕು. ಸಮಯವನ್ನು ಉತ್ತಮ ರೀತಿಯಲ್ಲಿ ವಿನಿಯೋಗಿಸಲು ತರಬೇತುಗೊಳಿಸಬೇಕು. ಅವರ ಪ್ರಕೃತಿದತ್ತ ಸಾಮರ್ಥ್ಯಗಳ ಬಳಕೆಗೆ, ಬೆಳವಣಿಗೆಗೆ ಅವಕಾಶಗಳನ್ನು ಒದಗಿಸಿಕೊಡುವಾಗ ಅದಕ್ಕೆ ಅಗತ್ಯವಾದ ಸಮಯ ನಿರ್ಣಯಿಸಿಕೊಟ್ಟರೆ ಪ್ರಯೋಜನವಾದೀತು.

ಊರಿನಲ್ಲಿ ನಡೆಯುವ ಕಾರ್ಯಕ್ರಮಗಳು, ನೈತಿಕ, ಸಾಂಸ್ಕೃತಿಕ ಕಾರ್ಯಕ್ರಮಗಳಲ್ಲಿ ಮಕ್ಕಳನ್ನು ಭಾಗಿಗೊಳಿಸಲು ಗರಿಷ್ಠ ಗಮನಕೊಡಬೇಕು. ಅದು ಅವರ ವೈಜ್ಞಾನಿಕ ಮತ್ತು ಸಾಂಸ್ಕೃತಿಕ ಬೆಳವಣಿಗೆಗೆ ಹೆಚ್ಚು ಪ್ರಯೋಜನವಾಗುತ್ತದೆ. ಹೀಗೆ ಭವಿಷ್ಯದಲ್ಲಿ ಅವರು ಸ್ವಂತಕ್ಕೂ, ಕುಟುಂಬಕ್ಕೂ, ಸಮಾಜಕ್ಕೂ, ಉಪಕಾರಿಗಳಾಗಿ ಮಾರ್ಪಡುತ್ತಾರೆ. ಆ ರೀತಿಯಾಗಿ ತಂದೆ-ತಾಯಿ ಅಭಿಮಾನ ಪಡುವ ಸ್ಥಿತಿಗೆ ಅವರು ತಲುಪಲು ಅದು ಕಾರಣವಾಗಲೂ ಬಹುದು.

❖❖❖❖